19 May 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜಗತ್ತಿನಲ್ಲಿ "ಸ್ನೇಹ"ಎನ್ನುವುದು ಒಂದು ಅದ್ಭುತ ಶಕ್ತಿ! ಜಾತಕ,ರಾಶಿ ಯಾವುದೂ ನೋಡದೆ ಮನಸು ಮೆಚ್ಚುವ ಸುಂದರ ಬಾಂಧವ್ಯ!

-ಸ್ನೇಹಾ ಆನಂದ್

info.varthaman@gmail.com



ಯಾವ ಸಾಧನೆಗಾಗಿ ಸಮಾವೇಶ? : ಎ.ಎಚ್.ವಿಶ್ವನಾಥ್ ಪುಟ ಸಂ. 2



ಮಲೆ ಮಹದೇಶ್ವರ ಬೆಟ್ಟಕ್ಕೆ ಹರಿದುಬಂದ ಭಕ್ತ ಸಾಗರ ಪುಟ ಸಂ. 3



ರಾಜ್ಯದ ಮೀಸಲಾತಿ ಸಂವಿಧಾನ ಸೇರಲಿ: ಉಗ್ರಪ್ಪ ಒತ್ತಾಯ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 174 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ರಾಜ್ಯ ಸರ್ಕಾರಕ್ಕೆ 3 ವರ್ಷ ಇಂದು ಸಾಧನಾ ಸಮಾವೇಶ

## 1.52 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ: ಜಿ.ಪರಮೇಶ್ವರ್

**ಬೆಂಗಳೂರು:** ರಾಜ್ಯ ಸರ್ಕಾರ ಮೂರು ವರ್ಷ ಪೂರೈಸಲಿರುವ ಹಿನ್ನೆಲೆಯಲ್ಲಿ ತುಮಕೂರಿನಲ್ಲಿ ನಾಳೆ ಮೇ 19ರಂದು ಸಾಧನಾ ಸಮಾವೇಶ ಆಯೋಜಿಸಲಾಗಿದೆ. ಸಮಾವೇಶದಲ್ಲಿ 1.52 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ರಾಜ್ಯದಲ್ಲಿ ನಮ್ಮ ಸರ್ಕಾರ ಬಂದು ಮೂರು ವರ್ಷ ಪೂರೈಸಲಿದೆ. ಸರ್ಕಾರ ಬಂದಾಗ ಅನೇಕ ಭರವಸೆಗಳನ್ನು ಕೊಟ್ಟಿದ್ದೆವು. ಈ ಮೂರು ವರ್ಷದಲ್ಲಿ ಏನೇನು ಈಡೇರಿಸಿದ್ದೇವೆಂದು ಈ ಸಮಾವೇಶದಲ್ಲಿ ತಿಳಿಸುತ್ತೇವೆ ಎಂದು ಹೇಳಿದರು.

ಸಮಾವೇಶದಲ್ಲಿ ಪರಮೇಶ್ವರ ಅವರ ಶಕ್ತಿ ಪ್ರದರ್ಶನ ನಡೆಯಲಿದೆ ಎಂಬ ಚರ್ಚೆಯ ಬಗ್ಗೆ ಕೇಳಿದ ಪ್ರಶ್ನೆಗೆ, ಇಲ್ಲಿ ಯಾರ ಶಕ್ತಿ ಪ್ರದರ್ಶನವೂ ನಡೆಯಲ್ಲ. ಇದು ಸರ್ಕಾರದ ಕಾರ್ಯಕ್ರಮಗಳ ಜಾರಿ ಬಗ್ಗೆ ಮಾತ್ರ ಸಮಾವೇಶ ಎಂದು ತಿಳಿಸಿದರು.

ನನಗೆ ವೈಯಕ್ತಿಕವಾಗಿಯಾಗಲಿ ಬೇರೆಯವರಿಗೆ ಆಗಲಿ ಇದನ್ನು ಆ ರೀತಿ ನೋಡಲ್ಲ. ಈ ಸಮಾವೇಶವನ್ನು ಶಕ್ತಿ ಪ್ರದರ್ಶನವೆಂದು ನೋಡೋದಿಲ್ಲ. ನುಡಿದಂತೆ ನಡೆದಿದ್ದೇವೆ ಎಂದು ಹೇಳಲು ಹೊರಟಿದ್ದೇವೆ ಅಷ್ಟೇ ಎಂದರು.





ಇದು ಸರ್ಕಾರದ ಕಾರ್ಯಕ್ರಮ, ಪಕ್ಷದ ಕಾರ್ಯಕ್ರಮ ಅಲ್ಲ. ಹೀಗಾಗಿ ಹೈಕಮಾಂಡ್ ನಾಯಕರನ್ನು ಕರೆದಿಲ್ಲ ಎಂದೂ ಹೇಳಿದರು.

ಸಮಾವೇಶ ಬಳಿಕ ಸರ್ಕಾರದಲ್ಲಿ ಬದಲಾವಣೆ ಚರ್ಚೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಬದಲಾವಣೆ ಬೇರೆ ವಿಚಾರ, ನಾವು ಇಲ್ಲಿ ಅಭಿವೃದ್ಧಿ ದೃಷ್ಟಿಯಿಂದ ಸಮಾವೇಶ ಮಾಡ್ತಿದ್ದೇವೆ. ಅದೆಲ್ಲ ಪಕ್ಷದ ಆಂತರಿಕ ವಿಚಾರ, ಅದನ್ನು ಇದರ ಜೊತೆ ಬೆರೆಸಲು ಹೋಗುವುದಿಲ್ಲ ಎಂದರು.

ಸಾರಿಗೆ ನೌಕರರ ಮುಷ್ಕರ ವಿಚಾರವಾಗಿ ಮಾತನಾಡಿದ ಪರಮೇಶ್ವರ, ಸಾರಿಗೆ ನೌಕರರು ಅವರ ಸಮಸ್ಯೆ ಇಟ್ಟುಕೊಂಡು ಮುಷ್ಕರಕ್ಕೆ ಆಹ್ವಾನ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಾ ಅವರ ಜೊತೆ ಚರ್ಚೆ ಮಾಡಿದ್ದಾರೆ. ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ

ಪುಟ 2ಕ್ಕೆ

## ಸಿದ್ದು ರಾಜೀನಾಮೆ ನೀಡಿದರೆ ಪರಂಗೆ ಪಟ್ಟ: ಕೆ.ಎನ್.ರಾಜಣ್ಣ

**ತುಮಕೂರು:** ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿದರೆ ಗೃಹ ಸಚಿವ ಜಿ.ಪರಮೇಶ್ವರ್ ಮುಖ್ಯಮಂತ್ರಿ ಆಗಬೇಕು ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಮತ್ತೊಂದು ವಿವಾದಿತ ಹೇಳಿಕೆ ನೀಡಿದ್ದಾರೆ.

ತುಮಕೂರಿನಲ್ಲಿ ಆಯೋಜಿಸಿರುವ ರಾಜ್ಯ ಸರ್ಕಾರದ ಮೂರನೇ ವರ್ಷದ ಸಾಧನೆ ಸಮಾರಂಭದ ಸಿದ್ಧತೆ ಪರಿಶೀಲಿಸಿ ಮಾತನಾಡಿದ ರಾಜಣ್ಣ, ಸಿದ್ದರಾಮಯ್ಯ ಅವರ ಬದಲಾವಣೆ ಬಯಸಿದರೆ, ಪರಮೇಶ್ವರ್ ಮುಖ್ಯಮಂತ್ರಿ ಆಗಬೇಕು ಎಂಬುದು ನಮ್ಮ ಬೇಡಿಕೆ ಎಂದು ಹೇಳಿದರು.

ಕೇರಳ ಭೇಟಿಯ ಸಂದರ್ಭದಲ್ಲಿ ಸಂಭಾವ್ಯ ಉನ್ನತ ಮಟ್ಟದ ಚರ್ಚೆಯ ಬಗ್ಗೆಯೂ ರಾಜಣ್ಣ ಸುಳಿವು ನೀಡಿದರು. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ,

ಪುಟ 2ಕ್ಕೆ

## ಸರ್ಕಾರದ ಸಂಧಾನ ವಿಫಲ: ನಾಳೆಯಿಂದ ಸಾರಿಗೆ ಮುಷ್ಕರ

**ಬೆಂಗಳೂರು:** ಸರ್ಕಾರ ಮತ್ತು ಸಾರಿಗೆ ನೌಕರರ ಒಕ್ಕೂಟದ ನಡುವಿನ ಮಾತುಕತೆ ವಿಫಲವಾಗಿರುವ ಹಿನ್ನೆಲೆಯಲ್ಲಿ ಮೇ 20ರಿಂದ ಮುಷ್ಕರ ನಡೆಸಲು ನೌಕರರ ಮುಂದಾಗಿದ್ದಾರೆ.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರು ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಬುಧವಾರದಿಂದ ಬಿಎಂಟಿಸಿ ಮತ್ತು ಕೆಎಸ್ಆರ್‌ಟಿಸಿ ಸೇರಿದಂತೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಬಸ್ ಸೇವೆ ಸ್ಥಗಿತಗೊಳ್ಳಲಿದೆ. ಸಾರಿಗೆ ನೌಕರರು ಮುಷ್ಕರಕ್ಕೆ ಕರೆ ನೀಡಿ ರುವ ಹಿನ್ನೆಲೆ ನೌಕರರಿಗೆ ರಾಜ್ಯ ಸರ್ಕಾರ ಕಠಿಣ ಎಚ್ಚರಿಕೆ ನೀಡಿದೆ.



ಸಾರಿಗೆ ನೌಕರರು ಮುಷ್ಕರದಲ್ಲಿ ಭಾಗಿಯಾಗದಂತೆ ಸರ್ಕಾರ ಸಿಬ್ಬಂದಿಗೆ ಸೂಚಿಸಿದೆ. ನೌಕರರು ಯಾವುದೇ ಮುಷ್ಕರ ಮಾಡುವಂತಿಲ್ಲ. ಮುಷ್ಕರಕ್ಕೆ ಬೆಂಬಲವನ್ನು ಸೂಚಿಸುವಂತಿಲ್ಲ. ಬುಧವಾರ ಕೆಲಸಕ್ಕೆ ಹಾಜರಾಗದಿದ್ದರೆ 'ನೋ ವರ್ಕ್ ನೋ ಪೇ' ಎಂದು ಸಿಬ್ಬಂದಿಗೆ ತಿಳಿಸಲಾಗಿದೆ.

## ಯಾವ ಸಾಧನೆಗಾಗಿ ಸಮಾವೇಶ?

ಮೈಸೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಾವ ಮಹತ್ಸಾಧನೆ ಮಾಡಿದೆ ಎಂದು 'ಸಾಧನಾ ಸಮಾ ವೇಶ' ನಡೆಸಲು ಹೊರಟಿದೆ? ಜನರ ಹಿತವನ್ನು ಸಂಪೂರ್ಣವಾಗಿ ಮರೆತಿರುವ ಈ ಸರ್ಕಾರದ ನಡೆ ಅತ್ಯಂತ ಕೆಟ್ಟ ಸಂಸ್ಕೃತಿಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಸೋಮವಾರ ಕರೆದಿದ್ದ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, ಸರ್ಕಾರದ ವೈಫಲ್ಯಗಳು, ಗ್ಯಾರಂಟಿ ಯೋಜನೆಗಳ ಲೋಪಗಳು ಹಾಗೂ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯ ಕುರಿತು ಎಳೆಎಳೆಯಾಗಿ ಬಿಚ್ಚಿಟ್ಟರು.



ಸ್ವಯಂ ಪ್ರಶಂಸೆಯ ಸಮಾವೇಶ ಮತ್ತು ಹೈಕ ಮಾಂಡ್ಗೆ ಬೆದರಿಕೆ ಆಡಳಿತ ನಡೆಸುವವರ ಕೆಲಸಗ ಳನ್ನು ನೋಡಿ ಜನ ತಾವಾಗಿಯೇ ಕೊಂಡಾಡಬೇಕು. ಅದನ್ನು ಬಿಟ್ಟು, ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವ ಈ ಸಮಾವೇಶದ ಔಚಿತ್ಯವೇನು ಎಂದು ವಿಶ್ವನಾಥ್ ಪ್ರಶ್ನಿಸಿದರು.

ವಿವರ ಪುಟ 2ಕ್ಕೆ

## ಬೆಂ-ಮೈ ಹೆದ್ದಾರಿಯಲ್ಲಿ ಕಾರು ಅಡ್ಡಗಟ್ಟಿ 26 ಲಕ್ಷ ದರೋಡೆ

**ಮಂಡ್ಯ:** ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ದರೋಡೆ ಪ್ರಕರಣ ಹೆಚ್ಚಳವಾಗಿವೆ. ಜನರು ಭಯಪಡುವಂತಾಗಿದೆ. ಮದ್ದೂರು ಬಳಿ ಭಾನುವಾರ ರಾತ್ರಿ ಕಾರನ್ನು ಅಡ್ಡಗಟ್ಟಿ 26 ಲಕ್ಷ ರೂ.ಗಳನ್ನು ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ.

ಮೈಸೂರು ಮೂಲದ ಖಾಸಗಿ ಕಂಪನಿ ಉದ್ಯೋಗಿ ಗೋವಿಂದರಾಜು ಅವರು ಬೇರೆ ಕಂಪನಿಯಿಂದ ಸಂಗ್ರಹಿಸಿದ ಹಣವನ್ನು ತಲುಪಿಸಲು ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದಾಗ ಸಂಜೆ 7.30ರ ಸಮಯದಲ್ಲಿ ಕಾರು ಅಡ್ಡಗಟ್ಟಿ ದರೋಡೆ ಮಾಡಲಾಗಿದೆ.

ಟೊಯೋಟಾ ಇನ್ನೋವಾದಲ್ಲಿ ಅವರನ್ನು ಹಿಂಬಾಲಿಸುತ್ತಿದ್ದ ಆರೋಪಿಗಳು, ಮದ್ದೂರಿನ ಹೊರವಲಯದ ಐಶ್ವರ್ಯಾ ಕಾನ್ವೆಂಟ್ ಬಳಿ ಕಾರನ್ನು ಅಡ್ಡಗಟ್ಟಿ ಕಾರಿನ ಕಿಟಕಿ ಒಡೆದು, ಮಾರಕಾಸ್ತ್ರಗಳಿಂದ ಬೆದರಿಸಿ 26 ಲಕ್ಷ ರೂ.ಗಳನ್ನು ದೋಚಿ ಪರಾರಿಯಾಗಿದ್ದಾರೆ. ಆರೋಪಿಗಳನ್ನು ಬಂಧಿಸಲು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ.

## ದೇವೇಗೌಡಗೆ ರಾಜ್ಯಸಭೆ ಸ್ಥಾನ: ಬಿಜೆಪಿ ಹೈಕಮಾಂಡ್ ನಿರ್ಧಾರ

**ಬೆಂಗಳೂರು:** ರಾಜ್ಯಸಭೆಗೆ ಎಚ್.ಡಿ. ದೇವೇಗೌಡ ಅವರನ್ನು ಮರು ಆಯ್ಕೆ ಮಾಡುವುದು ಬಿಜೆಪಿ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟ ವಿಚಾರ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು. ದೇವೇಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಾತನಾಡಿದ ಅವರು, ದೇವೇಗೌಡರ ರಾಜ್ಯಸಭೆ ಅವಧಿ ಮುಕ್ತಾಯ ಆಗಿದೆ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಆದಾಗ ನಾವು ಯಾವುದೇ ಷರತ್ತು ಹಾಕಿಲ್ಲ. ಹೀಗಾಗಿ ಇದು ಬಿಜೆಪಿ ಹೈಕಮಾಂಡ್‌ಗೆ ಬಿಟ್ಟ ವಿಚಾರ. ಈ ಬಗ್ಗೆ ನಮ್ಮ ಒತ್ತಾಯ ಏನು ಇಲ್ಲ. ಬಿಜೆಪಿ ಹೈಕಮಾಂಡ್ ಈ ಬಗ್ಗೆ ತೀರ್ಮಾನ ಮಾಡಲಿದೆ ಎಂದರು.

## ದೆಹಲಿ ಹೊಸ ಮದ್ಯ ನೀತಿ ಅಕ್ರಮ ಪ್ರಕರಣ ವರ್ಗಾವಣೆ


**ನವದೆಹಲಿ:** ದೆಹಲಿ ಹೊಸ ಮದ್ಯ ನೀತಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್‌ನಲ್ಲಿ ಸಿಬಿಐ ಅರ್ಜಿಯನ್ನ ನ್ಯಾಯಮೂರ್ತಿ ಮನೋಜ್ ಜೈನ್ ವಿಚಾರಣೆ ನಡೆಸಲಿದ್ದಾರೆ.

ಈ ಹಿಂದೆ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು ಪ್ರಕರಣದ ವಿಚಾರಣೆ ನಡೆಸುತ್ತಿದ್ದರು. ಇದನ್ನು ಕೇಜ್ರಿವಾಲ್ ವಿರೋಧಿಸಿದ್ದರು.

ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು ಪ್ರಕರಣದಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ನ್ಯಾ. ಮನೋಜ್ ಜೈನ್ ವಿಚಾರಣೆ ನಡೆಸಲಿದ್ದಾರೆ.

ಮಾಜಿ ಸಿಎಂ ಕೇಜ್ರಿವಾಲ್ ಸೇರಿದಂತೆ ಇತರೆ ಆರೋಪಿಗಳ ಮೇಲೆ ಹೊರಿಸಲಾದ ಆರೋಪಗಳನ್ನು ವಿಚಾರಣಾಧೀನ ನ್ಯಾಯಾಲಯ ತಿರಸ್ಕರಿಸಿ ಪ್ರಕರಣ ರದ್ದುಗೊಳಿಸಿತ್ತು. ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಸಿಬಿಐ ಪ್ರಶ್ನಿಸಿದೆ.

ಈ ಅರ್ಜಿಯ ವಿಚಾರಣೆಯನ್ನು ನಾಳೆ ನಿಗದಿಪಡಿಸಲಾಗಿದೆ. ಈ ಹಿಂದೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಅಡಿಷನಲ್ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಕೋರ್ಟ್‌ನಲ್ಲಿ ವಾದಿಸಿದ್ದರು. ಕೇಜ್ರಿವಾಲ್ ಅವರು ಸತ್ಯ ವಿಜಯವಾಗಿದೆ ಎಂದು ಹೇಳಿದ್ದಾರೆ.



ಈ ಪ್ರಕರಣಕ್ಕೆ ಸಂಬಂಧಿಸಿದ ಬೇರೆ ನ್ಯಾಯಾಂಗ ನಿಂದನೆ ಪ್ರಕರಣಗಳನ್ನು ನ್ಯಾಯಮೂರ್ತಿ ನವೀನ್ ಚಾವ್ಲಾ ಮತ್ತು ನ್ಯಾಯಮೂರ್ತಿ ರವೀಂದರ್ ದುದೇಜಾ ಅವರ ವಿಭಾಗೀಯ ಬೆಂಚ್‌ಗೆ ವರ್ಗಾಯಿಸಲಾಗಿದೆ.

## ದೇಶದಲ್ಲಿ ಆರ್ಥಿಕ ಸಂಕಷ್ಟ

### ರಾಹುಲ್ ಗಾಂಧಿ ಮೊದಲೇ ಎಚ್ಚರಿಸಿದ್ದರು: ಪ್ರಿಯಾಂಕ್ ಖರ್ಗೆ

**ಕಲಬುರಗಿ:** ಪಂಚ ರಾಜ್ಯ ಚುನಾವಣೆಗೂ ಮೊದಲೇ ದೇಶ ಆರ್ಥಿಕ ಸಂಕಷ್ಟದಲ್ಲಿದೆ ಎಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದರು. ಆಗ ಯಾರೂ ಎಚ್ಚೆತ್ತುಕೊಳ್ಳಲಿಲ್ಲ. ಈಗ ಮೋದಿ ಪೆಟ್ರೋಲ್ ಕಡಿಮೆ ಬಳಸಿ ಎನ್ನುತ್ತಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.


ಮಧ್ಯಪ್ರಾಚ್ಯದಲ್ಲಿನ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವ ಹಿನ್ನೆಲೆ ಮೋದಿ ತೈಲ ಮಿತಬಳಕೆಗೆ ಕರೆ ಕೊಟ್ಟಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ಜೊತೆ ಮಾತನಾಡಿದರು.

ದೇಶವನ್ನು ಈ ಸ್ಥಿತಿಗೆ ತಂದವರು ಯಾರು? ಬಿಜೆಪಿಯ ನಾಲ್ಕು ಜನ ತಮ್ಮ ಎಸ್ಕಾರ್ಟ್ ಬಿಟ್ಟರೆ ದೇಶದ ಸಮಸ್ಯೆ ಪರಿಹಾರ ಆಗುತ್ತಾ? ಇಷ್ಟು ದಿನ ಎಲ್ಲವೂ ಸರಿಯಾಗಿದೆ ಎಂದು ಮೋದಿ ಹೇಳುತ್ತಿದ್ದರು. ಈಗ ಯಾಕೆ ದೇಶದ ಆರ್ಥಿಕ ಸ್ಥಿತಿ ಆಪತ್ತಿನಲ್ಲಿದೆ? ಪ್ರಧಾನಿಯವರು ನಾವು ಜಾಗತಿಕವಾಗಿ ಆರ್ಥಿಕ ಸಂಕಷ್ಟದಲ್ಲಿದ್ದೇವೆ ಎಂದು ಮುಂಚೆಯೇ ಸಂಸತ್ತಿನಲ್ಲಿ ಹೇಳಬೇಕಿತ್ತು ಎಂದು ಕಿಡಿಕಾರಿದರು.

ಪ್ರಧಾನಿ ನರೇಂದ್ರ ಮೋದಿಯವರು ನೆದರ್ಲೆಂಡ್‌ನಲ್ಲಿ ಭಾಷಣ ಮಾಡಿ, ಈ ಮೊದಲು ಕೊರೊನಾ ಬಂದಿತ್ತು. ಬಳಿಕ ಯುದ್ಧ ಪ್ರಾರಂಭವಾತ್ತು. ಈಗ ಇಂಧನ ಬಿಕ್ಕಟ್ಟು ತೀವ್ರಗೊಂಡಿದೆ. ಒಟ್ಟಾರೆಯಾಗಿ ಈ ದಶಕ ಇಡೀ ವಿಶ್ವಕ್ಕೆ ವಿಪತ್ತುಗಳ ದಶಕವಾಗಿ ಬದಲಾಗುತ್ತಿದೆ. ಈ ಪರಿಸ್ಥಿತಿ ಬೇಗ ದೂರವಾಗದೇ ಇದ್ದರೆ ಕಳೆದ ಒಂದು ದಶಕದಿಂದ ಮಾಡಿದ ಯಾವುದೇ ಕೆಲಸಗಳಿಂದ ಪ್ರಯೋಜನವಿಲ್ಲ. ವಿಶ್ವದ ಬಹುಪಾಲು ಜನರು ಬಡತನಕ್ಕೆ ಸಿಲುಕಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ.



## ಕೇರಳ ಸಿಎಂ ಸತೀಶನ್ ಪ್ರಮಾಣ ವಚನ ಸ್ವೀಕಾರ



**ತಿರುವನಂತಪುರಂ:** ಕೇರಳದ ಮುಖ್ಯಮಂತ್ರಿ ಆಗಿ ವಿ.ಡಿ.ಸತೀಶನ್ ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಆರ್.ವಿ. ಅರ್ಲೇಕರ್ ಪ್ರಮಾಣ ವಚನ ಬೋಧಿಸಿದರು.

ಸತೀಶನ್ ಜೊತೆಗೆ ಅವರ ಸಂಪುಟ

ಪುಟ 2ಕ್ಕೆ

## ಇನ್ನೂ 2 ದಿನ ಭಾರೀ ಮಳೆ

**ಬೆಂಗಳೂರು:** ಮುಂಗಾರು ಸನ್ನಿಹಿತವಾಗುತ್ತಿದ್ದಂತೆ ರಾಜ್ಯದಲ್ಲಿ ಹವಾಮಾನ ಬದಲಾಗಿದೆ. ಇದೇ ವಾತಾವರಣ ಇನ್ನೂ ಒಂದು ವಾರ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಈ ಬಗ್ಗೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಮಾಹಿತಿ ಹಂಚಿಕೊಂಡಿದೆ. ರಾಜ್ಯದಾದ್ಯಂತ ಒಣ ಹವೆ ಹಾಗೂ ಬಿಸಿಲಿನ ವಾತಾವರಣ ಮುಂದುವರಿಯುವ ಸಾಧ್ಯತೆ ಇದೆ. ಅಲ್ಲಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಅಲ್ಲಲ್ಲಿ ಗುಡುಗು, ಸಿಡಿಲು, ಗಾಳಿ ಸಹಿತ ಸಾಧಾರಣ ಮಳೆಯಾಗಲಿದೆ ಎಂದು ತಿಳಿಸಿದೆ.

ಇಂದು ಮತ್ತು ನಾಳೆ ಉತ್ತರ ಒಳನಾಡು, ದಕ್ಷಿಣ ಒಳನಾಡು ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ತಿಳಿಸಿದೆ.



**ಕೇರಳಗೆ ನೈರುತ್ಯ ಮುಂಗಾರು:** ನೈರುತ್ಯ ಮುಂಗಾರು ನಾಲ್ಕು ದಿನ ಮುಂಚಿತವಾಗಿ ಕೇರಳಂ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸಾಮಾನ್ಯವಾಗಿ ಕೇರಳಂನಲ್ಲಿ ಜೂನ್

ಪುಟ 2ಕ್ಕೆ

## ಕೇರಳದಲ್ಲೂ ಮಹಿಳೆಯರಿಗೆ ಜೂ.15ರಿಂದ ಉಚಿತ ಬಸ್

**ತಿರುನಂತಪುರಂ:** ಕೇರಳದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀರಿಸಿದ ವಿ.ಡಿ ಸತೀಶನ್ ಅವರು ಮೊದಲ ಸಂಪುಟ ಸಭೆಯಲ್ಲೇ ಪಂಚ ಗ್ಯಾರಂಟಿ ಪೈಕಿ ಎರಡು ಗ್ಯಾರಂಟಿಗಳನ್ನ ಜಾರಿ ಮಾಡಿದ್ದಾರೆ.

ರಾಜ್ಯದ ಎಲ್ಲಾ ಮಹಿಳೆಯರಿಗೆ ಜೂನ್ 15ರಿಂದ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಲಭ್ಯವಿರಲಿದೆ ಎಂದು ವಿಡಿಎಸ್ ಘೋಷಣೆ ಮಾಡಿದ್ದಾರೆ. ವೃದ್ಧರಿಗಾಗಿ ಪ್ರತ್ಯೇಕ ಇಲಾಖೆ ಸ್ಥಾಪನೆಗೂ ಸಂಪುಟ ಒಪ್ಪಿರುವುದಾಗಿ ತಿಳಿಸಿದ್ದಾರೆ.

ಜೂನ್ 15ರಿಂದ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಲಭ್ಯವಿರಲಿದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ನಂತರ ಪ್ರಕಟಿಸಲಾಗುತ್ತದೆ. ವೃದ್ಧರಿಗೆ ವಿಶೇಷ ಇಲಾಖೆ ತರುತ್ತಿರುವುದು ದೇಶದಲ್ಲಿ ಇದೇ ಮೊದಲು ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಆಶಾ ಕಾರ್ಯಕರ್ತೆಯರಿಗೆ ಗೌರವ ಧನವನ್ನು ಮೊದಲ ಹಂತದಲ್ಲಿ 3,000 ರೂ. ಹೆಚ್ಚಳ ಮಾಡಲಾಗಿದೆ. ಒಟ್ಟು ವೇತನ

ಪುಟ 2ಕ್ಕೆ

## ಬಿಜೆಪಿ-ಜೆಡಿಎಸ್ ನಡುವೆ ಬಿಕ್ಕಟ್ಟು ಬರಲ್ಲ: ದೇವೇಗೌಡ

**ಬೆಂಗಳೂರು:** ಬಿಜೆಪಿ-ಜೆಡಿಎಸ್ ನಡುವೆ ಯಾವುದೇ ಬಿಕ್ಕಟ್ಟು ಬರುವುದಿಲ್ಲ ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅಭಿಪ್ರಾಯಪಟ್ಟರು.

ವಿಧಾನಸಭೆ 2028ರ ಚುನಾವಣೆ ಕುರಿತು ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ನಾವು ಬಿಜೆಪಿ ಜೊತೆ ಪಾರ್ಟನರ್ ಆಗಿದ್ದೇವೆ. ಮೋದಿ, ಅಮಿತ್ ಶಾ ಜೊತೆ ನಮ್ಮ ಸಂಬಂಧವಿದೆ. ಇದರಲ್ಲಿ ಯಾವುದೇ ಬಿಕ್ಕಟ್ಟು ಬರೋದಿಲ್ಲ. ಈ ಹೋರಾಟದಲ್ಲಿ ಯಾವುದೇ ಕ್ಲಿಷ್ಟ ಸಮಸ್ಯೆ ಬಂದರೂ ಕುಳಿತು ಬಗೆಹರಿಸಿಕೊಂಡು ಹೋರಾಟ ಮಾಡ್ತೀನಿ ಎಂದು ದೃಢ ವಿಶ್ವಾಸ ಇದೆ ಎಂದರು.

ದಕ್ಷಿಣದಲ್ಲಿ ಕಾಂಗ್ರೆಸ್ ಕೇರಳಂ, ತೆಲಂಗಾಣ, ಕರ್ನಾಟಕದಲ್ಲಿ ಅಧಿಕಾರದಲ್ಲಿದೆ ಅಂತ ಹೇಳ್ತಾ ಇದ್ದರು. ಮುಂದೆ ಏನಾಗುತ್ತದೆಂದು ನೋಡೋಣ ಎಂದರು.

ಅಲ್ಲದೇ, 94ನೇ ವಸಂತಕ್ಕೆ ಕಾಲಿಟ್ಟಿರೋ ದೇವೇಗೌಡರು ಜೆ.ಪಿ ನಗರದ ವೆಂಕಟೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಮಾತನಾಡಿ, ನನ್ನ ಕೈಲಾದ ಮಟ್ಟಿಗೆ ರಾಜ್ಯದ ಜನತೆಗೆ ಕೆಲಸ ಮಾಡ್ತೀನಿ. ಜನರ ಸಮಸ್ಯೆಗಳನ್ನ ಮುಂದಿಟ್ಟುಕೊಂಡು ಹೋರಾಟ ಮಾಡುವ ದೃಢ ಸಂಕಲ್ಪ ಮಾಡಿದ್ದೇನೆ ಎಂದು ಹೇಳಿದರು.



## ದುಬಾರೆ ಮದಗಜಗಳ ಭೀಕರ ಕಾಳಗ ಸಾಕಾನೆ ಕೆಳಗೆ ಸಿಕ್ಕಿ ಮಹಿಳೆ ಸಾವು

**ಮಡಿಕೇರಿ:** ಕುಶಾಲನಗರದ ದುಬಾರೆ ಆನೆ ಶಿಬಿರದಲ್ಲಿ ಮದಗಜಗಳ ಭೀಕರ ಕಾಳಗ ನಡೆದಿದೆ. ಈ ಸಂದರ್ಭ ಆನೆಯ ಕೆಳಗೆ ಸಿಕ್ಕಿ ಮಹಿಳೆಯೊಬ್ಬರು ಸಾವನ್ನಪ್ಪಿರುವ ದುರ್ಘಟನೆ ಸೋಮವಾರ ನಡೆದಿದೆ.

ಈ ದುರ್ಘಟನೆಯಲ್ಲಿ ಕುಟುಂಬದ ಜೊತೆ ಪ್ರವಾಸಕ್ಕೆಂದು ಬಂದಿದ್ದ ಚೆನ್ನೈ ಮೂಲದ ಮಹಿಳೆ ಜಿನ್ಸು (33) ಮದಗಜಗಳ ಕಾದಾಟಕ್ಕೆ ಸಿಲುಕಿ ಬಲಿಯಾಗಿರುವ ದುರ್ದೈವಿಯಾಗಿದ್ದಾರೆ. ಅವರ ಪತಿ ಮತ್ತು ಮಗು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಈ ಘಟನೆಯ ವಿಡಿಯೋ ವೈರಲ್ ಆಗಿದೆ.

ಆನೆಗಳಿಗೆ ಸ್ನಾನ ಮಾಡಿಸುವ ಸಂದರ್ಭ ಅವುಗಳಿಗೆ ಆಹಾರ ಕೊಡುವುದು ಪ್ರವಾಸಿಗರಿಗೆ ಖುಷಿ ಕೊಡುವ ಸಂಗತಿ. ಇದೇ ರೀತಿ ತಮಿಳುನಾಡಿನಿಂದ ಬಂದಿದ್ದ ಜಿನ್ಸು ಸಹ ಆನೆಗಳಿಗೆ ಸ್ನಾನ ಮಾಡಿಸುತ್ತಿದ್ದಾಗ ಆಹಾರ ಕೊಡುವುದಕ್ಕಾಗಿ ಅಲ್ಲಿಗೆ ಹೋಗಿದ್ದಾರೆ. ಈ ವೇಳೆ ಅಲ್ಲಿ ಪಳಗಿಸಿದ್ದ 2 ಸಾಕಾನೆಗಳು ಏಕಾಏಕಿ ಕಾದಾಟ ಆರಂಭಿಸಿವೆ. ಆನೆಗಳ ಕಾಳಗದಿಂದ ಅಲ್ಲಿ ಗೊಂದಲ ಉಂಟಾಗಿತ್ತು.

ಒಂದು ಆನೆ ಮತ್ತೊಂದು ಆನೆ ಮೇಲೆ ದಾಳಿ ಮಾಡಲು ಶುರು ಮಾಡಿದಾಗ ಅಲ್ಲಿ ಇದ್ದ ಪ್ರವಾಸಿಗರು ಭಯಪಟ್ಟು ಓಡಲು ಪ್ರಯತ್ನಿಸಿದ್ದಾರೆ. ಈ ಗೊಂದಲದ ನಡುವೆ ಜಿನ್ಸು ಅವರು ಕೂಡ ಆತಂಕದಿಂದ ಓಡುವ ವೇಳೆ ಸಮತೋಲನ ಕಳೆದುಕೊಂಡು ನೀರಿನಲ್ಲಿ ಬಿದ್ದಿದ್ದಾರೆ. ಈ ವೇಳೆ ಮೇಲೆ ಆನೆ ಉರುಳಿ ಬಿದ್ದಿದೆ.

ಪುಟ 2ಕ್ಕೆ



### ಸಚಿವರ ಸೂಚನೆ

ಆನೆ ಶಿಬಿರಗಳಲ್ಲಿ ಪ್ರವಾಸಿಗರಿಗೆ ಆನೆ ಮೈ ತೊಳೆಯಲು ಅವಕಾಶ ನೀಡುವುದು, ಅವರಿಂದ ಬೆಲ್ಲ, ಬಾಳೆಹಣ್ಣು ಇತ್ಯಾದಿ ಆಹಾರ ತಿನ್ನಿಸುವುದನ್ನು ನಿರ್ಬಂಧಿಸಲು ಕ್ರಮ ವಹಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ವನ್ಯಜೀವಿಗಳಿಂದ ಪ್ರವಾಸಿಗರು ನಿರ್ದಿಷ್ಟ ಅಂತರ ಕಾಯ್ದುಕೊಳ್ಳುವಂತೆ ಕ್ರಮ ವಹಿಸುವಂತೆ ಅವರು ಆದೇಶಿಸಿದ್ದಾರೆ.

# 26 ಕೋಟಿ ರೂ ಅಂದಾಜು ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ ನಿರ್ಣಯ

ರಾಮನಗರ: ನಗರಸಭೆಯ ಆವರಣದಲ್ಲಿರುವ ಪ್ರಶಸ್ತಿ ಭವನ, ನಗರಸಭೆಯ ಹಳೆ ಕಟ್ಟಡಗಳನ್ನು ಕೆಡವಿ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಸ್ಥಳೀಯ ನಗರಸಭೆಯ ವಿಶೇಷ ಸಭೆಯಲ್ಲಿ ಸದಸ್ಯರು ತಮ್ಮ ಒಪ್ಪಿಗೆ ಸೂಚಿಸಿದ್ದಾರೆ.

ಕೇಂದ್ರ ಸರ್ಕಾರದ ಅರ್ಬನ್ ಚಾಲೆಂಜ್ ಫಂಡ್ (ನಗರ ಸವಾಲು ನಿಧಿ) ಯೋಜನೆ ಧನ ಸಹಾಯ ಬಳಸಿಕೊಂಡು ಬೃಹತ್ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಸೋಮವಾರ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆ ವಿಶೇಷ ಸಾಮಾನ್ಯಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.



**26 ಕೋಟಿ ಅಂದಾಜು ವೆಚ್ಚ**

ವಾಣಿಜ್ಯ ಸಂಕೀರ್ಣ ನಿರ್ಮಿಸುವ ಉದ್ದೇಶವನ್ನು ಸಭೆಯ ಗಮನಕ್ಕೆ ತರಲಾಯಿತು. ಈ ಕುರಿತು ವಿವರಿಸಿದ ಅಧ್ಯಕ್ಷ ಕೆ.ಶೇಷಾದ್ರಿ, ವಾಣಿಜ್ಯ ಸಂಕೀರ್ಣಕ್ಕೆ 26 ಕೋಟಿ ರೂ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಕೇಂದ್ರ ಸರ್ಕಾರ ಅರ್ಬನ್ ಚಾಲೆಂಜ್ ಫಂಡ್ ಅಡಿಯಲ್ಲಿ ಕೇಂದ್ರ ಸರ್ಕಾರ ಶೇ.25ರಷ್ಟು ಅನುದಾನ (6 ಕೋಟಿ 50 ಲಕ್ಷ) ನೀಡುತ್ತದೆ. ಮುನಿಸಿಪಾಲ್ ಬಾಂಡ್, ಬ್ಯಾಂಕ್ ಸಾಲ, ಪಬ್ಲಿಕ್ ಪ್ರೈವೇಟ್ ಪಾಲುದಾರಿಕೆಗಳ ಮೂಲಕ ಕನಿಷ್ಠ ಶೇ.50ರಷ್ಟು ಅನುದಾನ ಸೃಷ್ಟಿಸಿಕೊಳ್ಳುವ ಅವಶ್ಯಕತೆ ಇದೆ. ಇನ್ನುಳಿದ ಹಣವನ್ನು ನಗರಸಭೆ ನಿಧಿಯಿಂದ ಭರಿಸಬೇಕಾಗುತ್ತದೆ ಎಂದು ವಿವರಿಸಿದರು.

**ಬ್ಯಾಂಕ್ ಸಾಲ ಪಡೆಯುವ ಉದ್ದೇಶ**

ಆದರೆ ನಗರಸಭೆ ನಿಧಿಯಿಂದ ಶೇಕಡ 25ರಷ್ಟು ಅನುದಾನ ಭರಿಸುವುದು ಕಷ್ಟಸಾಧ್ಯ. ಹೀಗಾಗಿ ಶೇಕಡ 75ರಷ್ಟು ಅನುದಾನವನ್ನು ಬ್ಯಾಂಕಿನಿಂದಲೇ ಸಾಲದ ರೂಪದಲ್ಲಿ ಪಡೆಯಲು ಉದ್ದೇಶಿಸಲಾಗಿದೆ ಎಂದು ಅಧ್ಯಕ್ಷರು ವಿವರಿಸಿದರು. ವಾಣಿಜ್ಯ ಸಂಕೀರ್ಣದಲ್ಲಿ ನಗರಸಭೆ ಕಚೇರಿಗೆ ಅವಕಾಶ ಮಾಡಿಕೊಳ್ಳಲಾಗುವುದು. ಉಳಿದ ಸ್ಥಳವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು. ಇದೊಂದು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ರಾಮನಗರದ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲಾಗಲಿದೆ. ನಮ್ಮ ಅವಧಿಯಲ್ಲಿಯೇ ಯೋಜನೆಗೆ ಶಂಕು ಸ್ಥಾಪನೆ ನೆರವೇರಿಸೋಣ ಎಂದರು.

**ನಗರಸಭೆಯ ಆವರಣವೇ ಏಕೆ**

ವಾಣಿಜ್ಯ ಸಂಕೀರ್ಣ ನಿರ್ಮಿಸುವಷ್ಟು ಸ್ಥಳ ನಗರದಲ್ಲಿ ಬೇರೆಲ್ಲೂ ಇಲ್ಲ. ಅಥವಾ ವಿಸ್ತಾರವಾದ ರಸ್ತೆ ಇಲ್ಲ. ರಸ್ತೆಗಳು ಚಿಕ್ಕದಾಗಿರುವ ಜಾಗದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಿಸಿದರೆ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತದೆ. ಹೀಗಾಗಿ ನಗರಸಭೆ ಸಭಾಂಗಣದ ಆವರಣದಲ್ಲಿಯೇ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಉದ್ದೇಶಿಸಲಾಗಿದ್ದು, ಬ್ಯಾಂಕಿನವರು ಸಾಲ ಕೊಡಲು ಒಪ್ಪಿದ್ದಾರೆ ಎಂದು ಕೆ.ಶೇಷಾದ್ರಿ ಹೇಳಿದರು. ನಗರಸಭಾಧ್ಯಕ್ಷರು ಮಂಡಿಸಿದ ವಿಷಯಕ್ಕೆ ಸರ್ವ ಸದಸ್ಯರು ಸಮ್ಮತಿ ಸೂಚಿಸಿದರು.

**ರಾಜಕುಮಾರ್ ಕಾಂಪ್ಲೆಕ್ಸ್ ನವೀಕರಣಕ್ಕೆ ಆಗ್ರಹ:**

ಸದಸ್ಯ ಅಕ್ಲಿಂ ಮಾತನಾಡಿ, ಇದೊಂದು ಒಳ್ಳೆಯ ಯೋಜನೆಯಾಗಿದ್ದು ನಮ್ಮ ಸ್ವಾಗತವಿದೆ. ಹಾಲಿ ಮುಖ್ಯರಸ್ತೆಯಲ್ಲಿರುವ ರಾಜಕುಮಾರ್ ಕಾಂಪ್ಲೆಕ್ಸ್‌ನ ಕೆಲ ಮಹಡಿಗಳು ಪಾಳು ಬಿದ್ದಿವೆ. ಅದನ್ನೂ ದುರಸ್ತಿ ಮಾಡಿ, ಬಾಡಿಗೆ ನೀಡಿದರೆ ನಗರಸಭೆಗೆ ಆದಾಯ ಬರುತ್ತದೆ. ಅದರ ಬಗ್ಗೆಯೂ ಗಮನ ಹರಿಸುವಂತೆ ಸಭೆಯ ಗಮನ ಸೆಳೆದರು.

ಇದಕ್ಕೆ ಅಧ್ಯಕ್ಷ ಕೆ.ಶೇಷಾದ್ರಿರವರು, ರಾಜಕುಮಾರ್ ಕಾಂಪ್ಲೆಕ್ಸ್ ದುರಸ್ತಿ ಬಗ್ಗೆಯೂ ಚರ್ಚೆ ನಡೆಸಲಾಗಿದ್ದು, ಕೆಲ ಸಮಸ್ಯೆಗಳಿಂದ ತಡವಾಗಿದೆ. ಮುಂದೆ ಅದನ್ನೂ ದುರಸ್ತಿ ಪಡಿಸಲಾಗುವುದು ಎಂದು ತಿಳಿಸಿದರು.

**ಯುಐಡಿಎಫ್ ಕಾಮಗಾರಿ ವಿಳಂಬ, ಸದಸ್ಯರ ಅಸಮಾಧಾನ**

ಯುಐಡಿಎಫ್ ಕಾಮಗಾರಿಯ ಅವಧಿ 18 ತಿಂಗಳಾದರೂ, ಕೆಲವೆಡೆ ಇನ್ನೂ ತೆವಳುತ್ತಾ ಸಾಗುತ್ತಿದೆ ಎಂದು ಸದಸ್ಯ ಫೈರೋಜ್ ಪಾಷ ಸಭೆಯಲ್ಲಿ ದೂರಿದರು. ಕೊತ್ತಿಪುರದ ಅಶ್ವತ್ಥಕಟ್ಟೆಯಿಂದ ಟಿಪ್ಪು ಮಸೀದಿವರೆಗೆ ರಸ್ತೆ ಮತ್ತು ಚರಂಡಿಯನ್ನು ಅಗೆಯಲಾಗಿದೆ. ರಸ್ತೆಗೆ ವೆಟ್‌ಮಿಕ್ಸ್ ಹಾಕಿದ್ದಾರೆ. ಚನ್ನಾಗಿದ್ದ ರಸ್ತೆಯನ್ನು ಕಿತ್ತು ಹಾಕಿದ್ದಾರೆ, ಕಾಮಗಾರಿ ಪೂರ್ಣಗೊಂಡಿಲ್ಲ. ಹೀಗಾಗಿ ನಾಗರೀಕರು ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಇಡೀ ಪ್ರದೇಶ ಹಾಳಾಗಿದ್ದು, ಜನರಿಗೆ ಉತ್ತರ ಕೊಡಲಾಗುತ್ತಿಲ್ಲ ಎಂದು ಗುತ್ತಿಗೆದಾರ ಮತ್ತು ಎಂಜಿನಿಯರ್ ವಿರುದ್ಧ ಆಕ್ರೋಶ ಹೊರಹಾಕಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಆರೀಫ್ , ಆಯುಕ್ತ ಜಯಣ್ಣ ಉಪಸ್ಥಿತರಿದ್ದರು.

## ಇಂಜಿನಿಯರ್‌ಗಳ ವಿರುದ್ಧ ಅಧ್ಯಕ್ಷರು ಕಿಡಿಕಿಡಿ

ಇದಕ್ಕೆ ಪ್ರತಿಕ್ರಿಯಿಸಿದ ಕೆ.ಶೇಷಾದ್ರಿ, ಆ ಭಾಗದ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾರ್ಯ ಪೂರ್ಣಗೊಳಿಸುವಂತೆ ಗುತ್ತಿಗೆದಾರನಿಗೆ ಮೌಖಿಕವಾಗಿ ಸೂಚನೆ ನೀಡಿದ್ದೆ. ಈಗ ಮತ್ತೆ ದೂರುಗಳು ಕೇಳಿ ಬರುತ್ತಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ನೋಟಿಸ್ ಜಾರಿ ಮಾಡಿ, ಇಲ್ಲ ನಿಮಗೂ ನೋಟಿಸ್ ಜಾರಿ ಮಾಡಬೇಕಾಗುತ್ತೆ. ನೀವು ಹೇಳಿದಂತೆ ಗುತ್ತಿಗೆದಾರ ಕೇಳಬೇಕೇ ಹೊರತು ಗುತ್ತಿಗೆದಾರ ಹೇಳಿದಂತೆ ನೀವೇಕೆ ಕೇಳುತ್ತೀರಾ ಎಂದು ಎಂಜಿನಿಯರ್‌ಗಳ ವಿರುದ್ಧ ಹರಿಹಾಯ್ದರು. ಈ ವೇಳೆ ನಿಜಾಮುದ್ದೀನ್ ಷರೀಫ್, ತಮ್ಮ ವಾರ್ಡಿನಲ್ಲಿ ಒಂದು ರಸ್ತೆ ಬಿಟ್ಟು ಬೇರೆಲ್ಲೂ ಕಾಮಗಾರಿ ಕೈಗೆತ್ತಿಕೊಂಡಿಲ್ಲ. ಕಳ್ಳರಿಗೆ ಗುತ್ತಿಗೆ ಕೆಲಸ ನೀಡಿದ್ದೀರಿ. ಮುಖ್ಯ ಗುತ್ತಿಗೆದಾರ ಇತ್ತ ತಲೆಹಾಕಿಯೂ ನೋಡಿಲ್ಲ. ಅಧಿಕಾರಿಗಳು ನಮ್ಮ ಮಾತು ಕೇಳುತ್ತಿಲ್ಲ. ನಾನೊಬ್ಬ ಸದಸ್ಯ ಅಂತ ಹೇಳಿಕೊಳ್ಳುವುದಕ್ಕೂ ನಾಚಿಕೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ನಿಜಾಮುದ್ದೀನ್ ಮಾತಿಗೆ ಧ್ವನಿಗೂಡಿಸಿದ ಫೈರೋಜ್ ಪಾಷ ಮತ್ತು ಅಕ್ಲಿಂ, ಅವರ ಬಳಿ ಮಾತನಾಡುವುದು ಉಪಯೋಗವಿಲ್ಲ. ಮುಖ್ಯ ಗುತ್ತಿಗೆದಾರನ ಬಳಿ ಮಾತನಾಡಲು ಎಂಜಿನಿಯರ್ ಗಳಿಗೆ ಭಯ ಇರಬೇಕು. ಕಾಮಗಾರಿ ಸ್ಥಳದಲ್ಲಿ ಎಂಜಿನಿಯರ್ ಅಥವಾ ಮುಖ್ಯ ಗುತ್ತಿಗೆದಾರ ಇರುವುದಿಲ್ಲ ಎಂದು ಆರೋಪಿಸಿದಾಗ ಕೆ.ಶೇಷಾದ್ರಿ, ಸ್ಥಳಕ್ಕೆ ನಾನು ಮತ್ತು ಆಯುಕ್ತರು ಬಂದು ಪರಿಶೀಲಿಸುತ್ತೇವೆ. ಆಗ ಸಬ್ ಕಾಂಟ್ರಾಕ್ಟರ್ ಬದಲು ಮುಖ್ಯ ಗುತ್ತಿಗೆದಾರನನ್ನು ಕರೆಸಿ ಎಂದು ಎಂಜಿನಿಯರ್ ಗಳಿಗೆ ಸೂಚನೆ ನೀಡಿದರು

## ಮಗನಿಂದಲೇ ತಾಯಿ ಕೊಲೆ

### ಮಗ, ಗಂಡ ಬಂಧನ, ಮತ್ತಿಬ್ಬರಿಗಾಗಿ ಶೋಧ

ಮೈಸೂರು: ಶೀಲ ಶಂಕಿಸಿ ಮಗನೇ ತಾಯಿಯನ್ನು ಕೊಲೆ ಮಾಡಿ ಸುಡಲು ಯತ್ನಿಸಿದ ಪ್ರಕರಣವನ್ನು ಭೇಧಿಸುವಲ್ಲಿ ಮೈಸೂರು ಜಿಲ್ಲಾ ಪೊಲೀಸರು ಯಶಸ್ವಿಯಾಗಿದ್ದಾರೆ.

ಈ ಸಂಬಂಧ ಸುದ್ದಿಗೋಷ್ಠಿ ನಡೆಸಿದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಮಾತನಾಡಿ, ತಾಲ್ಲೂಕಿನ ಮಾದಹಳ್ಳಿ ಗ್ರಾಮದ ಸುಧಾ(48)ಮೃತರಾಗಿದ್ದು, ಸುಧಾ ಅವರನ್ನು ಆಕೆಯ ಪುತ್ರ ಶಿವರುದ್ರಪ್ಪ (35) ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದು,ಬಳಿಕ ಕೊಲೆಯಾಗಿರುವುದು ಯಾರಿಗೂ ತಿಳಿಯಬಾರದು ಎಂದು ತಂದೆ ನಂಜುಂಡಯ್ಯ(55), ಸೋದರ ಸಂಬಂಧಿಗಳಾದ ಆಕಾಶ್(24), ಅಭಿ(22) ಅವರೊಂದಿಗೆ ಸೇರಿಕೊಂಡು ಸುಟ್ಟು ಹಾಕಿದ್ದಾರೆ.

ಮೈಸೂರಿನ ಜೆಪಿ ನಗರದಲ್ಲಿ ಶಿವರುದ್ರಪ್ಪ ವಾಸವಿದ್ದು, ತಾಯಿ ಸುಧಾ ನಡತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿ ಆಗಾಗ್ಗೆ ಜಗಳ ವಾಡುತ್ತಿದ್ದರು. ಈ ಮಧ್ಯೆ ಸುಧಾ ಬೈಕಿನಲ್ಲಿ ಯಾರೊಂದಿಗೋ ಹೋಗುತ್ತಿರುವುದನ್ನು ಸ್ನೇಹಿತರೋಬ್ಬರು ವಿಡಿಯೋ ಮಾಡಿ ಕಳುಹಿಸಿದ್ದರು. ಇದರಿಂದ ಕುಪಿತ ಗೊಂಡ ಶಿವರುದ್ರಪ್ಪ ಭಾನುವಾರ ಬೆಳಗ್ಗೆ 9 ಗಂಟೆಯ ಹೊತ್ತಿಗೆ ಮನೆಗೆ ಬಂದಿದ್ದು, ಮನೆಯಲ್ಲಿ ತಾಯಿ ಸುಧಾ ಅವರೊಂದಿಗೆ ಜಗಳವಾಡಿ ದೊಣ್ಣೆಯಿಂದ ಹೊಡೆದಿದ್ದಾನೆ. ಹಲ್ಲೆಯಿಂದ ಸುಧಾ ಅವರುತೀವ್ರವಾಗಿ ಗಾಯಗೊಂಡು ಅಸ್ವಸ್ಥರಾಗಿದ್ದಾರೆ. ತಕ್ಷಣ ನೆರೆಯ ಮನೆಯಲ್ಲಿದ್ದ ಸುಧಾ ಅವರ ತಾಯಿ ಕೆಂಪಮ್ಮ ಮತ್ತು ಸಂಬಂಧಿಕರಾದ ಅಭಿ ಮತ್ತು ಆಕಾಶ್ ಆಗಮಿಸಿದ್ದು, ಅಸ್ವಸ್ಥಗೊಂಡಿದ್ದ ಸುಧಾರನ್ನು ಆಸ್ಪತ್ರೆಗೆ ಕಾರಿನಲ್ಲಿ ಸಾಗಿಸುವ ಪ್ರಯತ್ನ ಮಾಡಿದ್ದಾರೆ. ಆಸ್ಪತ್ರೆಗೆ ತೆರಳು ಮಾರ್ಗ ಮಧ್ಯೆ ಸುಧಾ ಕಾರಿನಲ್ಲಿಯೇ ಮೃತಪಟ್ಟಿದ್ದಾರೆ.ಈ ವಿಚಾರವನ್ನು ಅಭಿ ಮತ್ತು ಆಕಾಶ್, ಶಿವರುದ್ರಪ್ಪನಿಗೆ ತಿಳಿಸಿದ್ದಾರೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಶಿವರುದ್ರಪ್ಪ ತಂದೆ ನಂಜುಂಡಯ್ಯ ವಿಷಯ ತಿಳಿಸಿದ್ದು, ಶವವನ್ನು ತೋಟದಲ್ಲಿ ಸುಟ್ಟು ಬಿಡೋಣ ಎಂದು ಹೇಳುತ್ತಾನೆ. ಅದಕ್ಕೆ ನಂಜುಂಡಯ್ಯ ಕೂಡ ಸಮ್ಮತಿ ನೀಡಿ, ಅಭಿ ಮತ್ತು ಆಕಾಶ್ ಅವರ ಮೂಲಕ ಶವವನ್ನು ತೋಟಕ್ಕೆ ಸಾಗಿಸುವುದಲ್ಲದೇ ಟ್ರಾಕ್ಟರ್‌ನಲ್ಲಿ ಸೌದೆಯನ್ನು ತರಿಸಿ 11 ಗಂಟೆಯ ಹೊತ್ತಿಗೆ ಶವವನ್ನು ಸುಟ್ಟು ಹಾಕಿ ಬಳಿಕ ಗ್ರಾಮಕ್ಕೆ ಹಿಂದಿರುಗುತ್ತಾರೆ.

ಈ ವೇಳೆ ಆಸ್ಪತ್ರೆಗೆ ಕರೆದೋಯ್ಯುವುದಾಗಿ ಹೇಳಿ ಸುಧಾರನ್ನು ಕರೆದುಕೊಂಡು ಹೋದವರು ಬರಿಗೈಯಲ್ಲಿ ವಾಪಸ್ ಬಂದಿರುವ ಬಗ್ಗೆ ನೆರೆಯ ನಿವಾಸಿಗಳು ಅನುಮಾನ ವ್ಯಕ್ತಪಡಿಸಿದ್ದು, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಜಯಪುರ ಠಾಣೆ ಪೊಲೀಸರು ಹತ್ಯೆ ನಡೆಸಿದ ಶಿವರುದ್ರಪ್ಪ ನನ್ನು ಬಂಧಿಸುವುದರೊಂದಿಗೆ ಕೊಲೆಯ ಸಾಕ್ಷ್ಯ ನಾಶ ಪಡಿಸಲು ಸಹಕರಿಸಿ ಶಿವರುದ್ರಪ್ಪ ಅವರ ತಂದೆ ನಂಜುಂಡಯ್ಯ ಮತ್ತು ಸಂಬಂಧಿಗಳಾದ ಅಭಿ ಮತ್ತು ಆಕಾಶ್‌ನನ್ನು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಅಲ್ಲದೆ ಸುಡುತ್ತಿದ್ದ ಶವವನ್ನು ಆರಿಸಿ ವಶಕ್ಕೆ ಪಡೆದಿದ್ದಾರೆ. ಮೃತಳ ತಾಯಿ ಕೆಂಪಮ್ಮ ನೀಡಿದ ದೂರಿನ ಮೇರೆಗೆ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯಾವ ಸಾಧನೆಗಾಗಿ ಸಮಾವೇಶ?

## ಸಿಎಂ ಸಿದ್ದರಾಮಯ್ಯ ವಿರುದ್ಧ ಎ.ಎಚ್.ವಿಶ್ವನಾಥ್ ತೀವ್ರ ವಾಗ್ದಾಳಿ

ಮೈಸೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಾವ ಮಹತ್ಸಾಧನೆ ಮಾಡಿದೆ ಎಂದು 'ಸಾಧನಾ ಸಮಾವೇಶ' ನಡೆಸಲು ಹೊರಟಿದೆ? ಜನರ ಹಿತವನ್ನು ಸಂಪೂರ್ಣವಾಗಿ ಮರೆತಿರುವ ಈ ಸರ್ಕಾರದ ನಡೆ ಅತ್ಯಂತ ಕೆಟ್ಟ ಸಂಸ್ಕೃತಿಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎ.ಎಚ್. ವಿಶ್ವನಾಥ್ ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ನಗರದಲ್ಲಿ ಸೋಮವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ವೈಫಲ್ಯಗಳು, ಗ್ಯಾರಂಟಿ ಯೋಜನೆಗಳ ಲೋಪಗಳು ಹಾಗೂ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯ ಕುರಿತು ಎಳೆಎಳೆಯಾಗಿ ಬಿಚ್ಚಿಟ್ಟರು.

ಸ್ವಯಂ ಪ್ರಶಂಸೆಯ ಸಮಾವೇಶ ಮತ್ತು ಹೈಕಮಾಂಡ್ಗೆ ಬೆದರಿಕೆ ಆಡಳಿತ ನಡೆಸುವವರ ಕೆಲಸಗಳನ್ನು ನೋಡಿ ಜನ ತಾವಾಗಿಯೇ ಕೊಂಡಾಡಬೇಕು. ಅದನ್ನು ಬಿಟ್ಟು, ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವ ಈ ಸಮಾವೇಶದ ಔಚಿತ್ಯವೇನು ಎಂದು ವಿಶ್ವನಾಥ್ ಪ್ರಶ್ನಿಸಿದರು. ಇಂತಹ ಸಮಾವೇಶಗಳಿಗೆ ಸರ್ಕಾರದ ಬೊಕ್ಕಸದಿಂದ ಕೋಟ್ಯಂತರ ರೂಪಾಯಿ ಹಣ



ಪೋಲಾಗುತ್ತಿದ್ದು, ಆ ಹಣಕ್ಕೆ ಬೆಲೆಯೇ ಇಲ್ಲವೇ ಎಂದು ಕಿಡಿಕಾರಿದರು. ರಾಜ್ಯದಲ್ಲಿ ದಿನ ಬೆಳಗಾದರೆ ಮುಖ್ಯಮಂತ್ರಿ ಕುರ್ಚಿಗಾಗಿ ನಾಯಕರ ನಡುವೆ ಕಿತ್ತಾಟ ನಡೆಯುತ್ತಿದೆ. ಈ ಹಂತದಲ್ಲಿ ಸಮಾವೇಶ ನಡೆಸುವ ಮೂಲಕ ಸಿಎಂ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಹುಲ್ ಗಾಂಧಿ ಅವರಿಗೆ ತಮ್ಮ ಶಕ್ತಿ ಪ್ರದರ್ಶನ ಮಾಡಲು ಹೊರಟಿದ್ದಾರೆ. ತಾನೇ ಅತ್ಯಂತ ಶಕ್ತಿವಂತ ನಾಯಕ ಎಂದು ಬಿಂಬಿಸಿಕೊಂಡು ವರಿಷ್ಠರನ್ನು ಬೆದರಿಸುವ ತಂತ್ರ ಇದರ ಹಿಂದಿದೆ ಎಂದು ಅವರು ಗಂಭೀರ ಆರೋಪ ಮಾಡಿದರು.

**ಗ್ಯಾರಂಟಿ ಹೆಸರಿನಲ್ಲಿ ತೆರಿಗೆ ಹಣ ಪೋಲು, ರಾಜ್ಯ ದಿವಾಳಿ**

ರಾಜ್ಯದ ಜನತೆ ಬೆವರು ಸುರಿಸಿ ಕಟ್ಟುವ ತೆರಿಗೆ ಹಣವನ್ನು ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅನರ್ಹರಿಗೂ ಹಂಚಲಾಗುತ್ತಿದ್ದು, ಇದರಿಂದ ರಾಜ್ಯದ ಬೊಕ್ಕಸ ಸಂಪೂರ್ಣವಾಗಿ ದಿವಾಳಿಯಾಗಿದೆ. ಕೇವಲ ಐದು ಕೆ.ಜಿ. ಅಕ್ಕಿ ನೀಡಿದ್ದೇವೆ ಎಂದು ಹೇಳಿಕೊಳ್ಳುವುದನ್ನು ಬಿಟ್ಟರೆ ಸರ್ಕಾರದ ಬಳಿ ಹೇಳಿಕೊಳ್ಳಲು ಬೇರೆ ಯಾವುದೇ ಸಾಧನೆಗಳಿಲ್ಲ. ಮತ್ತೊಂದೆಡೆ ಸಾರಾಯಿ ದರವನ್ನು ವಿಪರೀತವಾಗಿ ಏರಿಕೆ ಮಾಡಲಾಗಿದೆ. ಇದರಿಂದಾಗಿ ಮದ್ಯ ಖರೀದಿಸಲಾಗದ ಯುವಜನತೆ ಅಗ್ಗವಾಗಿ ಸಿಗುವ ಗಾಂಜಾಕ್ಕೆ ದಾಸರಾಗುತ್ತಿದ್ದಾರೆ. ರಾಜ್ಯದ ಯುವಶಕ್ತಿಯನ್ನು ಸರ್ಕಾರವೇ ವ್ಯವಸ್ಥಿತವಾಗಿ ಹಾಳು ಮಾಡುತ್ತಿದೆ ಎಂದು ಅವರು ತೀವ್ರ ಬೇಸರ ವ್ಯಕ್ತಪಡಿಸಿದರು.

### ಮಾದಕ ದ್ರವ್ಯಗಳ ತಾಣವಾದ ಸಿಎಂ ತವರು ಜಿಲ್ಲೆ

ಮುಖ್ಯಮಂತ್ರಿಗಳ ತವರು ಜಿಲ್ಲೆಯಾದ ಮೈಸೂರು ಇಂದು ಗಾಂಜಾ, ಅಫೀಮು ಮುಂತಾದ ಮಾದಕ ದ್ರವ್ಯಗಳ ಅಕ್ರಮ ಜಾಲದ ಪ್ರಮುಖ ಕೇಂದ್ರವಾಗಿ ಮಾರ್ಪಟ್ಟಿದೆ. ಜಿಲ್ಲೆಯಲ್ಲಿ ಸುಮಾರು ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಮಾದಕ ವಸ್ತುಗಳ ವ್ಯವಹಾರ ಎಗ್ಗಿಲ್ಲದೆ ನಡೆಯುತ್ತಿದೆ. ಲಂಚ ಕೊಟ್ಟು ತಮಗೆ ಬೇಕಾದ ಜಾಗಗಳಿಗೆ ವರ್ಗಾವಣೆ ಮಾಡಿಸಿಕೊಳ್ಳುವ ಭ್ರಷ್ಟ ಪೊಲೀಸ್ ಅಧಿಕಾರಿಗಳು ಸಹ ಈ ದಂಧೆಯಲ್ಲಿ ಶಾಮೀಲಾಗಿದ್ದಾರೆ. ಇಷ್ಟೆಲ್ಲಾ ಅಕ್ರಮಗಳು ನಡೆಯುತ್ತಿದ್ದರೂ ಸರ್ಕಾರ ಮೌನವಾಗಿರುವುದು ಮುಖ್ಯಮಂತ್ರಿಯವರ ತವರು ಜಿಲ್ಲೆ ಎನ್ನುವ ಹೆಗ್ಗಳಿಕೆಗೆ ತಕ್ಕುದಾಗಿದೆಯೇ ಎಂದು ಅವರು ಪ್ರಶ್ನಿಸಿದರು.

### ಅಹಿಂದ ನಿರ್ಲಕ್ಷ್ಯ ಮತ್ತು ವಿರೋಧ ಪಕ್ಷದ ವೈಫಲ್ಯ

ಮುಖ್ಯಮಂತ್ರಿಗಳು ಈವರೆಗೆ ನಡೆಸಿದ ವಿಮಾನ ಹಾಗೂ ಹೆಲಿಕಾಪ್ಟರ್ ಓಡಾಟಕ್ಕಾಗಿಯೇ ಬರೋಬ್ಬರಿ ಐವತ್ತೆಂಟು ಕೋಟಿ ರೂಪಾಯಿ ಖರ್ಚಾಗಿದೆ. ಮೈಸೂರಿಗೆ ಪದೇ ಪದೇ ಭೇಟಿ ನೀಡುವ ಅಗತ್ಯವಾದರೂ ಏನಿದೆ ಎಂದು ಅವರು ಕೇಳಿದರು. ತಮ್ಮನ್ನು ತಾವು ಅಹಿಂದ ನಾಯಕ ಎಂದು ಕರೆದುಕೊಳ್ಳುವ ಸಿದ್ದರಾಮಯ್ಯನವರು, ಅಹಿಂದ ವರ್ಗದ ಅಭಿವೃದ್ಧಿಗೆ ನೀಡಿದ ಕೊಡುಗೆ ಶೂನ್ಯ. ಕುರುಬ ಸಮುದಾಯದವರು ತಮ್ಮ ಕೆಲಸದ ಸ್ಥಳಗಳಲ್ಲಿ ತೀವ್ರ ಅಪಾಯಗಳನ್ನು ಎದುರಿಸುತ್ತಿದ್ದರೂ, ಅವರಿಗೆ ಕನಿಷ್ಠ ರಕ್ಷಣೆ ಒದಗಿಸಲು ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂದು ದೂರಿದರು. ರಾಜ್ಯದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ ಅವರು ಆಂತರಿಕವಾಗಿ ಒಂದಾಗಿದ್ದಾರೆ. ಇದೇ ಕಾರಣಕ್ಕೆ ರಾಜ್ಯದಲ್ಲಿ ವಿರೋಧ ಪಕ್ಷ ಎಂಬುದು ಅಸ್ತಿತ್ವದಲ್ಲಿಯೇ ಇಲ್ಲದಂತಾಗಿದೆ. ಪ್ರಬಲ ವಿರೋಧ ಪಕ್ಷ ಇದ್ದಿದ್ದರೆ ಸರ್ಕಾರದ ಈ ಎಲ್ಲ ವೈಫಲ್ಯಗಳನ್ನು ತೀವ್ರವಾಗಿ ಪ್ರಶ್ನಿಸುತ್ತಿತ್ತು ಎಂದು ವಿಶ್ವನಾಥ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

### ಅನಗತ್ಯ ಹಿಜಾಬ್ ವಿವಾದ ಮತ್ತು ಶಿಕ್ಷಣ ವ್ಯವಸ್ಥೆಯ ದುಸ್ಥಿತಿ

ರಾಜ್ಯದಲ್ಲಿ ಸದ್ಯಕ್ಕೆ ಹಿಜಾಬ್ ವಿಚಾರವನ್ನು ಯಾರು ಪ್ರಸ್ತಾಪಿಸಿದ್ದರು? ಮುಖ್ಯಮಂತ್ರಿಗಳೇ ಖುದ್ದಾಗಿ ಕೇಸರಿ ಶಾಲಿಗೆ ಅವಕಾಶವಿಲ್ಲ ಎಂದು ಹೇಳುವ ಮೂಲಕ ತಣ್ಣಗಾಗಿದ್ದ ವಿವಾದವನ್ನು ಮರಳಿ ಜೀವಂತಗೊಳಿಸಿದ್ದಾರೆ. ಈ ಮೂಲಕ ವಿದ್ಯಾರ್ಥಿಗಳ ನಡುವೆ ವಿಷಬೀಜ ಬಿತ್ತಿ ಒಡಕು ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಇನ್ನೊಂದೆಡೆ ರಾಜ್ಯದಲ್ಲಿ ಸುಮಾರು ಹದಿನಾರು ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಶಿಕ್ಷಣ ವ್ಯವಸ್ಥೆಯನ್ನು ಉಳಿಸಲು ತಕ್ಷಣವೇ ತಜ್ಞರ ಸಮಿತಿಯೊಂದನ್ನು ರಚಿಸಬೇಕಾದ ತುರ್ತು ಅಗತ್ಯವಿದೆ. ಒಂದು ನಾಡಿನ ಅಕ್ಷರ ಮತ್ತು ಆರೋಗ್ಯ ವ್ಯವಸ್ಥೆಗಳು ಹಾಳಾದರೆ ಇಡೀ ರಾಜ್ಯವೇ ಅಧೋಗತಿಗೆ ತಲುಪುತ್ತದೆ ಎಂದು ಅವರು ಎಚ್ಚರಿಸಿದರು.

**ಡಿಸಿ ಲಕ್ಷ್ಮೀಕಾಂತ ರೆಡ್ಡಿ ಸೂಚನೆ**

# ಸಾರಿಗೆ ನೌಕರರ ಮುಷ್ಕರ: ಪರ್ಯಾಯ ವ್ಯವಸ್ಥೆ ಮಾಡಿ

ಮೈಸೂರು: ಕೆ.ಎಸ್.ಆರ್.ಟಿ.ಸಿ ನೌಕರರು ಮೇ 20 ರಿಂದ ಅನಿರ್ದಿಷ್ಟ ಅವಧಿಯ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಖಾಸಗಿ ವಾಹನ ಮಾಲೀಕರ ಸಂಘ ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಕೆ.ಎಸ್.ಆರ್.ಟಿ.ಸಿ ನಗರ ವಿಭಾಗದಲ್ಲಿ 534 ಬಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, 517 ಶೆಡ್ಯೂಲ್‌ಗಳಿವೆ. ಗ್ರಾಮೀಣ ವಿಭಾಗದಲ್ಲಿ 720 ಬಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, 691 ಶೆಡ್ಯೂಲ್‌ಗಳಿವೆ.ಕೆ.ಎಸ್.ಆರ್.ಟಿ.ಸಿ ನೌಕರರು ಮೇ 20 ರಂದು ಬಸ್‌ಗಳನ್ನು ಚಾಲನೆ ಮಾಡದಿದ್ದಲ್ಲಿ, ರೂಟ್ ಮ್ಯಾಪ್ ಸಿದ್ಧಪಡಿಸಿಕೊಳ್ಳ ಬೇಕು ಎಂದರು.





ಕೆ.ಎಸ್.ಆರ್.ಟಿ.ಸಿ, ಪ್ರಾದೇಶಿಕ ಸಾರಿಗೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಒಟ್ಟಾಗಿ ಕಾರ್ಯನಿರ್ವಹಿಸಿ ಸಾರ್ವಜನಿಕರ ಪ್ರಮಾಣಕ್ಕೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು. ಕೆ.ಎಸ್.ಆರ್.ಟಿ.ಸಿ ಸಬ್ ಅರ್ಬನ್ ಹಾಗೂ ಸಿಟಿ ಬಸ್ ನಿಲ್ದಾಣದಲ್ಲಿ ಕಂಟ್ರೋಲ್ ರೂಂಗಳಲ್ಲಿ ಖಾಸಗಿ ಬಸ್ ,ಮಾಕ್ಸಿ ಕ್ಯಾಬ್, ಮಿನಿಬಸ್ ಗಳ ಟ್ರಿಪ್ ಗಳ ಕುರಿತು ಮಾಹಿತಿ ಸಂಗ್ರಹಿಸಿ ಹಿರಿಯ ಅಧಿಕಾರಿಗಳಿಗೆ ನೀಡಬೇಕು ಎಂದರು.

ಜಿಲ್ಲೆಯಲ್ಲಿರುವ ಖಾಸಗಿ ಬಸ್, ಮಿನಿ ಬಸ್ ಹಾಗೂ ಮ್ಯಾಕ್ಸಿ ಕ್ಯಾಬ್‌ಗಳ ವಿವರವನ್ನು ಪಡೆದುಕೊಂಡು ಟ್ರಿಪ್ ಗಳ ವಿವರದೊಂದಿಗೆ ಪಟ್ಟಿಯನ್ನು ಸಿದ್ಧಪಡಿಸಿಕೊಂಡರೆ, ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯವಸ್ಥೆ ಮಾಡಬಹುದು ಎಂದರು.

ಕಳೆದ ಬಾರಿ ಕೆ.ಎಸ್.ಆರ್.ಟಿ.ಸಿ ನೌಕರರು ಮುಷ್ಕರ ಕೈಗೊಂಡ ಸಂದರ್ಭದಲ್ಲಿ ಯಶಸ್ವಿಯಾಗಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸನ್ನಿವೇಶವನ್ನು ನಿಭಾಯಿಸಲಾಗಿತ್ತು, ಅದೇ ರೀತಿ ಈ ಬಾರಿಯು ಯೋಜನೆ ರೂಪಿಸಿಕೊಳ್ಳಿ ಎಂದರು.

ಕೆ.ಎಸ್.ಆರ್.ಟಿ.ಸಿ ನೌಕರರ ಮುಷ್ಕರವನ್ನು ಮುಂದಿಟ್ಟುಕೊಂಡು ಖಾಸಗಿ ಬಸ್, ಮಿನಿ ಬಸ್ ಸಾರ್ವಜನಿಕರ ಬಳಿ ಹೆಚ್ಚುವರಿ ಶುಲ್ಕ ವಸೂಲಿ ಮಾಡದೇ ಈಗಾಗಲೇ ತಾವು ನಿಗಧಿಪಡಿಸಿರುವ ರೀತಿ ದರವನ್ನು ಪಡೆದುಕೊಳ್ಳಿ ಎಂದರು

ಸಬ್‌ಅರ್ಬನ್ ಬಸ್ ನಿಲ್ದಾಣ, ನಗರ ಬಸ್ ನಿಲ್ದಾಣ, ತಾಲ್ಲೂಕು ಸೇರಿ ಇತರೆ ಬಸ್ ನಿಲ್ದಾಣಗಳಲ್ಲಿ ಅಗತ್ಯ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲು ಹಾಗೂ ಬಂದೋಬಸ್ತ್ ಗೆ ಸಿದ್ಧತೆ ಮಾಡಿಕೊಳ್ಳುವುದು. ಮುಷ್ಕರದ ಸಂದರ್ಭದಲ್ಲಿ ಕಲ್ಲು ತೂರಾಟ ಹಾಗೂ ಅಹಿತಕರ ಘಟನೆ ಸಂಭವಿಸುವ ರೀತಿ ಸನ್ನಿವೇಶ ಸೃಷ್ಟಿಸಿದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿ.ಸಿ.ಪಿಸುಂದರ್ ರಾಜ್, ಪ್ರಾದೇಶಿಕ ಸಾರಿಗೆ ಆಯುಕ್ತರಾದ ಚೌಹಾನ್, ಮಾಧುರಿ, ಕೆ.ಎಸ್.ಆರ್ ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ನಗರ ವೀರೇಶ್, ಗ್ರಾಮೀಣ ವಿಭಾಗ ಶ್ರೀನಿವಾಸ್ ಇತರರು ಇದ್ದರು.

ಮೊದಲ ಪುಟದಿಂದ

## ಕೇರಳ ಸಿಎಂ ಸತೀಶನ್ ಪ್ರಮಾಣ ವಚನ ಸ್ವೀಕಾರ

ಸಹೋದ್ಯೋಗಿಗಳಾದ ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್, ಕೆ. ಮುರಳೀಧರನ್, ಎ.ಪಿ.ಅನಿಲ್ ಕುಮಾರ್, ಪಿ.ಸಿ.ವಿಷ್ಣುನಾಥ್, ರೋಜಿ ಎಂ ಜಾನ್, ಬಿಂದು ಕೃಷ್ಣ, ಎಂ.ಲಿಜು, ಟಿ ಸಿದ್ದಿಕ್, ಕೆ.ಎ.ತುಳಸಿ ಮತ್ತು ಒ.ಜೆ.ಜನೀಶ್ ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಕಾಂಗ್ರೆಸ್ ಮಿತ್ರ ಪಕ್ಷಗಳಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ಐಯುಎಂಎಲ್ ಐದು ಸಚಿವ ಸ್ಥಾನಗಳನ್ನು ಹೊಂದಿವೆ. ಪಿ.ಕೆ.ಪಿ.ಕೆ. ಕುಟ್ಟಿ, ಕೆ.ಎಂ.ಶಾಜಿ, ವಿ.ಅಬ್ದುಲ್ ಗಫೂರ್, ಎನ್.ಶಂಸುದ್ದೀನ್ ಮತ್ತು ಪಿ.ಕೆ.ಬಶೀರ್ ಸಚಿವ ಸ್ಥಾನ ಪಡೆದಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ನಾಯಕರಾದ ರಾಹುಲ್ ಗಾಂಧಿ ಮತ್ತು ಸಂಸದೆ ಪ್ರಿಯಾಂಕಾ ಗಾಂಧಿ, ನಿರ್ಗಮಿತ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಗವಹಿಸಿದ್ದರು.

## ಮದಗಜಗಳ ಭೀಕರ ಕಾಳಗ: ಆನೆ ಕೆಳಗೆ ಸಿಕ್ಕಿ ಮಹಿಳೆ ಸಾವು

ನೀರಿನಲ್ಲಿ ಬಿದ್ದ ಜಿನ್ಸು ಅವರನ್ನು ಗಮನಿಸಿದ ಸ್ಥಳೀಯರು ತಕ್ಷಣ ನೀರಿಗೆ ಇಳಿದು ಅವರನ್ನು ಹೊರತೆಗೆಯಲು ಪ್ರಯತ್ನಿಸಿದ್ದಾರೆ. ಜಿನ್ಸು ಅವರನ್ನು ನದಿಯಿಂದ ಹೊರಗೆ ತಂದು ಚಿಕಿತ್ಸೆಗಾಗಿ ಕರೆದೊಯ್ಯಲಾಯಿತಾದರೂ ಆಕೆ ಬದುಕುಳಿಯಲಿಲ್ಲ. ಈ ಸಂಬಂಧ ಕುಶಾಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇನ್ನೂ 2 ದಿನ ಭಾರೀ ಮಳೆ

1ರ ವೇಳೆಗೆ ಮುಂಗಾರು ಮಳೆ ಆರಂಭವಾಗುತ್ತದೆ.

ಭಾರತದಲ್ಲಿ ಈ ವರ್ಷ ಮುಂಗಾರು ಋತುವಿನಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು. ದೇಶದಲ್ಲಿ 1971ರಿಂದ 2020ರವರೆಗೆ ಮುಂಗಾರು ಅವಧಿಯಲ್ಲಿ ಸರಾಸರಿ 87 ಸೆಂ.ಮೀ ಮಳೆಯಾಗುತ್ತಿತ್ತು. ಆದರೆ, ಈ ಬಾರಿ 80 ಸೆಂ.ಮೀ ಮಳೆಯಾಗುವ ಸಾಧ್ಯತೆಯಿದೆ. ಎಲ್ ನಿನೊ ಕಾರಣದಿಂದ ಈ ವರ್ಷ ದೇಶದಲ್ಲಿ ಕಡಿಮೆ ಮಳೆಯಾಗುವ ಸಂಭವವಿದೆ ಎಂದು ಐಎಂಡಿ ತಿಳಿಸಿದೆ.

## ಸಿದ್ದು ರಾಜೀನಾಮೆ ನೀಡಿದರೆ ಪರಂಗೆ ಪಟ್ಟ

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಂದು ಕೇರಳಕ್ಕೆ ಹೋಗಿದ್ದಾರೆ. ಅಲ್ಲಿ ಏಕೆ ಈ ಬಗ್ಗೆ ಚರ್ಚಿಸಬಾರದು? ಅದು ಕೂಡ ಒಂದು ಸಾಧ್ಯತೆ ಎಂದು ಅವರು ಅಭಿಪ್ರಾಯಪಟ್ಟರು.

ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷಗಳ ಪರಮೇಶ್ವರ್ ಅವರ ಅಧಿಕಾರಾವಧಿಯನ್ನು ನೆನಪಿಸಿಕೊಂಡ ರಾಜಣ್ಣ, 2013ರಲ್ಲಿ ಪರಮೇಶ್ವರ್ ಗೆದ್ದಿದ್ದರೆ ಅವರೇ ಮುಖ್ಯಮಂತ್ರಿ ಆಗುತ್ತಿದ್ದರು ಎಂದರು. ಮುಖ್ಯಮಂತ್ರಿಯವರ ಪ್ರವಾಸ ಯೋಜನೆಯನ್ನು ಉಲ್ಲೇಖಿಸಿದ ಅವರು, ಸಿಎಂ ಬೆಳಗ್ಗೆ 10 ಗಂಟೆಗೆ ಕೇರಳ ಮುಖ್ಯಮಂತ್ರಿಗಳ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸುತ್ತಾರೆ. ಇದು 45 ನಿಮಿಷಗಳಲ್ಲಿ ಮುಗಿಯುತ್ತದೆ. ನಂತರ ಹಿಂತಿ ರುಗಬಹುದಿತ್ತು. ಆದರೆ ಅವರು ಮಧ್ಯಾಹ್ನ 3 ಗಂಟೆಯವರೆಗೆ ಅಲ್ಲಿಯೇ ಇರುತ್ತಾರೆ. ನನ್ನ ನಿರೀಕ್ಷೆಯೆಂದರೆ ನಾಯಕತ್ವ ಬದಲಾವಣೆ ಅಂತಿಮವಾಗಬಹುದು. ಎಲ್ಲರೂ ಇರುವುದರಿಂದ ಏನನ್ನಾದರೂ ಚರ್ಚಿಸಬಹುದು ಎಂದು ನಾನು ಭಾವಿಸುತ್ತಿದ್ದೇನೆ ಎಂದು ರಾಜಣ್ಣ ಹೇಳಿ ದರು. ಅವರೆಲ್ಲಾ ಒಟ್ಟಾಗಿ ಸೇರಿ ಐದು ನಿಮಿಷ ಮಾತನಾಡಿ ಒಂದು ಅಭಿಪ್ರಾಯ ಮಂಡಿಸು ತ್ತಾರೆ. ರಾಹುಲ್ ಗಾಂಧಿಯವರ ಬಾಯಿಂದ ಏನೇ ಬಂದರೂ ಅದನ್ನು ಜಾರಿಗೆ ತರಲಾಗುತ್ತದೆ ಎಂದರು.

## ಜೂ.15ರಿಂದ ಉಚಿತ ಬಸ್

9,000 ರೂ.ನಿಂದ 12,000 ರೂ.ಗಳಿಗೆ ಏರಿಕೆಯಾಗಲಿದೆ. ಜೊತೆಗೆ ಅಂಗನವಾಡಿ ಕಾರ್ಯಕರ್ತೆಯರು, ಅಡುಗೆ ಕಾರ್ಮಿಕರು (ಬಿಸಿಯೂಟ ಸಿಬ್ಬಂದಿ) ಹಾಗೂ ಪೂರ್ವ ಪ್ರಾಥಮಿಕ ಶಿಕ್ಷಕರು ಮತ್ತು ಆಯಾಗಳ ವೇತನವನ್ನು ತಲಾ 1,000 ರೂ. ಹೆಚ್ಚಿಸಲಾಗಿದೆ ಎಂದು ಘೋಷಿಸಿದ್ದಾರೆ.

## ಇಂದು ಸಾಧನಾ ಸಮಾವೇಶ

ಅಂದಿದ್ದರು. ಅದನ್ನು ಕೈಬಿಡಿ ಅಂದಿದ್ದೇವೆ. ಕಪ್ಪು ಬಾವುಟ ಪ್ರದರ್ಶನ ಕೈಬಿಡುತ್ತೇವೆ ಎಂದು ನೌಕರರು ತಿಳಿಸಿದ್ದಾರೆ ಎಂದು ಹೇಳಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ನಾಣ್ಣುಡಿಯಂತೆ ಮಕ್ಕಳನ್ನು ಬೆಳೆಸಿದ್ದರಿಂದ ಮಾನಸಿಕ ಬೆಳವಣಿಗೆ ಉತ್ತಮ



ಚಾಮರಾಜನಗರ: ಜಾನಪದರು ನಾಣ್ಣುಡಿಯಂತೆ ಮಕ್ಕಳನ್ನು ಬೆಳೆಸಿದ್ದೇ ಆದರೇ ಅವರು ಮಾನಸಿಕ ಬೆಳವಣಿಗೆ ಉತ್ತಮವಾಗಿರುತ್ತದೆ ಎಂದು ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಮತ್ತು ವಕೀಲ ಶಿವರಾಂ ತಿಳಿಸಿದರು

.ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಪಿಡಬ್ಲ್ಯೂಡಿ ಸರ್ಕಾರಿ ಶಾಲೆ ಆವರಣದಲ್ಲಿ ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಬೇಸಿಗೆ ಶಿಬಿರದ ಅಂಗವಾಗಿ ಶನಿವಾರ ಆಯೋಜಿಸಿದ್ದ ಮಕ್ಕಳ ಸಂತೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್ ಬಳಕೆಯಲ್ಲಿ ಹೆಚ್ಚು ಮುಳುಗಿದ್ದಾರೆ. ಅದರಲ್ಲೂ ಈ ಬೇಸಿಗೆಯಲ್ಲಿ ಮಕ್ಕಳನ್ನು ಮನೆಯಲ್ಲಿ ಹಿಡಿದಿಟ್ಟುಕೊಳ್ಳುವುದೇ ಕಷ್ಟ. ಇಂತಹ ಸಂದರ್ಭದಲ್ಲಿ ಮಕ್ಕಳಿಗೆ ಬೇಸಿಗೆ ಶಿಬಿರಗಳು ಅತ್ಯಂತ ಸಹಕಾರಿಯಾಗಿದೆ ಎಂದು ತಿಳಿಸಿದರು.

ಮಕ್ಕಳು ದೇವರಿಗೆ ಸಮಾನ ಎಂದು ಕರೆಯುತ್ತಾರೆ. ಜಾನಪದರು ಮಕ್ಕಳ ಕುರಿತು ಸಾಕಷ್ಟು ನುಡಿಗಟ್ಟುಗಳನ್ನು ಕಟ್ಟಿದ್ದಾರೆ. ಅದರಂತೆ ಮಕ್ಕಳನ್ನು ಬೆಳೆಸಿದ್ದೇ ಆದರೇ ಅವರು ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಉತ್ತಮವಾಗಿರುತ್ತದೆ. ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ವತಿಯಿಂದ ಪ್ರತಿವರ್ಷವೂ ವಿಭಿನ್ನವಾಗಿ ಬೇಸಿಗೆ ಶಿಬಿರವನ್ನು ಆಯೋಜಿಸಿಕೊಂಡು ಬರುತ್ತಿರುವುದು ಮಕ್ಕಳಿಗೆ ಸಹಕಾರಿಯಾಗಿದೆ ಎಂದರು.ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ಅಧ್ಯಕ್ಷ ಶಿವು ಜನ್ನೂರು ಮಾತನಾಡಿ, ಕಳೆದ 8 ವರ್ಷಗಳಿಂದಲೂ ನಿರಂತರವಾಗಿ ಆಯೋಜನೆ ಮಾಡಿಕೊಂಡು ಬರುತ್ತಿದೆ. ಈ ವರ್ಷ ಮಕ್ಕಳ ಮಾನಸಿಕ ಉಲ್ಲಾಸ ಮತ್ತು ಬೆಳವಣಿಗೆ ಎಂಬ ಶೀರ್ಷಿಕೆಯಡಿಯಲ್ಲಿ ಶಿಬಿರ ಹಮ್ಮಿಕೊಂಡಿದ್ದೇವೆ. ಮಕ್ಕಳು ಆಡುತ್ತಾ, ನಲಿಯುತ್ತಾ ಕಲಿಯಬೇಕು. ಇಂತಹ ಸಂದರ್ಭದಲ್ಲಿ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಶಿಬಿರಕ್ಕೆ ಕಳುಹಿಸಿ ಪ್ರೋತ್ಸಾಹ ನೀಡುತ್ತಿರುವ ಪೋಷಕರಿಗೆ ಧನ್ಯವಾದ ತಿಳಿಸಿದರು.ಉಪನ್ಯಾಸಕ ಬಸವಣ್ಣ ಮೂಕಹಳ್ಳಿ ಮಾತನಾಡಿ, ಔಪಚಾರಿಕ ಶಿಕ್ಷಣದಷ್ಟೇ ಮಕ್ಕಳಿಗೆ ಅನೌಪಚಾರಿಕ ಶಿಕ್ಷಣವೂ ಅಗತ್ಯವಾಗಿದೆ. ಬಯಲು ವಿಶ್ವವಿದ್ಯಾಲಯ ಇದ್ದಂತೆ, ಬಯಲಿನಲ್ಲಿ ಮಕ್ಕಳು ಜೀವನ ವಿಧಾನಗಳನ್ನು ಕಲಿಯಬಹುದಾಗಿದೆ. ಮಕ್ಕಳಲ್ಲಿರುವ ಪ್ರತಿ ಅನಾವರಣಕ್ಕೆ ಬೇಸಿಗೆ ಶಿಬಿರ ಅತ್ಯಂತ ಸಹಕಾರಿಯಾಗಿದೆ ಎಂದರು.ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಶಂಕರ ಸಿ. ಅಂಕನಶೆಟ್ಟಿಪುರ ಮಾತನಾಡಿ, ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಹಾಗೂ ಅವರಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯ ಅನಾವರಣಕ್ಕೆ ಬೇಸಿಗೆ ಶಿಬಿರಗಳು ಸಹಕಾರಿಯಾಗಿದೆ. ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ಕಲೆ, ಸಾಹಿತ್ಯ ಮತ್ತು ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವ ಮೂಲಕ ಉತ್ತಮ ಕೆಲಸವನ್ನು ಮಾಡುತ್ತಿದೆ ಎಂದು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಆತ್ಮೀಯ ರಂಗ ಪ್ರಯೋಗಾಲಯ ಟ್ರಸ್ಟ್ ಖಜಾಂಚಿ ಶಿವಶಂಕರ್ ಚಟ್ಟು, ಸದಸ್ಯರಾದ ಮಹೇಶ್ ಕೋಲು, ರಮೇಶ್ ಪಾಪಯ್ಯ, ಮಂಜೇಶ್ ಎಂ.ಜೆ.ನಾಗವಳ್ಳಿ, ಸಿದ್ದಣ್ಣ ರಾಮಸಮುದ್ರ, ಪೋಷಕರು ಹಾಗೂ ಶಿಬಿರಾರ್ಥಿಗಳು ಭಾಗವಹಿಸಿದ್ದರು.

# ಕನಕಪುರ ಬಿಇಒ ಕಚೇರಿಯಲ್ಲಿ ಭ್ರಷ್ಟಾಚಾರ ಆರೋಪ

### ತನಿಖೆಗೆ ಶ್ರೀರಾಮ ಸೇನೆ ಮನವಿ



ರಾಮನಗರ: ಕನಕಪುರ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಆಡಳಿತ ವೈಫಲ್ಯ, ಭ್ರಷ್ಟಾಚಾರದ ಆರೋಪಗಳು ಕೇಳಿ ಬರುತ್ತಿವೆ ಈ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿರುವ ಶ್ರೀರಾಮ ಸೇನೆಯ ಪದಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಆಡಳಿತ) ಇವರಿಗೆ ಮನವಿ ಸಲ್ಲಿಸಿದ್ದಾರೆ.

ಕನಕಪುರ ಬಿಇಒ ಅವರ ಕಚೇರಿಯಲ್ಲಿ ಕಡತಗಳ ಉದ್ದೇಶಪೂರ್ವಕ ವಿಳಂಬವಾಗುತ್ತಿದೆ. ಹಣ ನೀಡಿದವರ ಕಡತಗಳು ಮಾತ್ರ ವಿಲೇವಾರಿ ಆಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿ ಬಂದಿವೆ. ಇದರಿಂದಾಗಿ ಶಿಕ್ಷಕರು ಹಾಗೂ ಸಾರ್ವಜನಿಕರಿಗೆ ಅನಗತ್ಯ ಕಿರುಕುಳ ಮತ್ತು ತೊಂದರೆಯಾಗುತ್ತಿದೆ. ಕನಕಪುರ ಬಿಇಒ ಕಚೇರಿಯಲ್ಲಿನ ಆಡಳಿತ ವೈಫಲ್ಯಗಳ ಕುರಿತು ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳ ಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಕನಕಪುರ ಬಿಇಒ ಕಚೇರಿಯ ಕಾರ್ಯವೈಖರಿಯಿಂದ ಶಿಕ್ಷಕರು ಹಾಗೂ ಸಾರ್ವಜನಿಕರು ತೀವ್ರ ಅಸಮಾಧಾನಗೊಂಡಿದ್ದಾರೆ. ಹಣ ನೀಡದ ಶಿಕ್ಷಕರ ಕಡತಗಳನ್ನು ವಿಳಂಬಗೊಳಿಸಿ, ಹಣ ನೀಡಿದವರ ಕೆಲಸಗಳಿಗೆ ಮಾತ್ರ ಆದ್ಯತೆ ನೀಡಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ. ಈ ಕುರಿತು ನಿಷ್ಪಕ್ಷಪಾತ ತನಿಖೆ ಇದೆ ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ವರ್ಗಾವಣೆಗೊಂಡ ಶಿಕ್ಷಕರ ಎಸ್‌ಆರ್, ಎಲ್‌ಪಿಸಿ ಹಾಗೂ ಸೇವಾ ದಾಖಲಾತಿಗಳ ರವಾನೆಯಲ್ಲಿ ವಿಳಂಬ, ನಿವೃತ್ತ ಶಿಕ್ಷಕರ ಪಿಂಚಣಿ ಹಾಗೂ ಗಳಿಕೆ ರಜೆ ನಗದೀಕರಣ ಕಡತಗಳ ನಿರ್ಲಕ್ಷ್ಯ, ಹೊಸ ಶಿಕ್ಷಕರ ಸೇವಾ ದೃಢೀಕರಣ ಕಡತಗಳ ಬಾಕಿ, ಡಿಎಸ್ ಮೂಲಕ ಸಲ್ಲಿಸಲಾದ ಕಡತಗಳನ್ನು ಉದ್ದೇಶಪೂರ್ವಕವಾಗಿ ಬಾಕಿ ಇಡುವುದು ಸೇರಿದಂತೆ ಹಲವು ಗಂಭೀರ ಆರೋಪಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದಲ್ಲದೆ ಶಾಲಾ ತಪಾಸಣಾ ಸಂದರ್ಭಗಳಲ್ಲಿ ಮುಖ್ಯ ಶಿಕ್ಷಕರಿಗೆ ಅನಗತ್ಯ ಕಿರುಕುಳ, ಕಚೇರಿಯಲ್ಲಿ ಸಮಯಪಾಲನೆ ಕೊರತೆ, ಸಿಸಿಟಿವಿ ಹಾಗೂ ಬೆರಳಚ್ಚು ಹಾಜರಾತಿ ವ್ಯವಸ್ಥೆಗಳ ಸಮರ್ಪಕ ಬಳಕೆ ಇಲ್ಲದಿರುವುದು, ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ನಿಯಮಬಾಹಿರತೆ ಸೇರಿದಂತೆ ಹಲವು ವಿಷಯಗಳ ಕುರಿತು ತನಿಖೆ ನಡೆಸುವಂತೆ ಆಗ್ರಹಿಸಲಾಗಿದೆ. 2024ರಿಂದ ಇಂದಿನವರೆಗೆ ನಡೆದ ವರ್ಗಾವಣೆ ಕಡತಗಳು, ನಿವೃತ್ತಿ ಕಡತಗಳು, ಎಸ್‌ಆರ್/ಎಲ್‌ಪಿಸಿ ರವಾನೆ, ಗಳಿಕೆ ರಜೆ ಬಿಲ್‌ಗಳು, ಡಿಎಸ್ ಕಡತಗಳು ಹಾಗೂ ತಪಾಸಣಾ ವರದಿಗಳ ವಿಶೇಷ ಪರಿಶೀಲನೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿರುದ್ಧ ಇಲಾಖಾತ್ಮಕ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ. ಡಿಡಿಪಿಐ ಅವರಿಗೆ ಮನವಿ ಸಲ್ಲಿಸಿದ ವೇಳೆ ಶ್ರೀರಾಮನ ಸೇನೆಯ ರಾಜ್ಯ ಕಾರ್ಯದರ್ಶಿ ನಾಗಾರ್ಜುನ ಗೌಡ, ಜಿಲ್ಲಾ ಅಧ್ಯಕ್ಷ ಪರಮೇಶ್ ಗೌಡ, ಜಿಲ್ಲಾ ಕಾರ್ಯದರ್ಶಿ ರಾಜಗೋಪಾಲ್, ಪದಾಧಿಕಾರಿಗಳಾದ ಹಾರೋಹಳ್ಳಿ ಕುಮಾರ್, ಸ್ವಾಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಕಡತಗಳ ಅನಗತ್ಯ ವಿಳಂಬ

**ತಮ್ಮ ಹಂತದಲ್ಲೇ ಇತ್ಯರ್ಥಗೊಳಿಸಬಹುದಾದ ಕಡತಗಳನ್ನು ಸಹ ಕನಕಪುರ ಬಿಇಒ ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಪದೇಪದೇ ಮೇಲಾಧಿಕಾರಿಗಳಿಗೆ ಕಳುಹಿಸುವ ಮೂಲಕ ಕಡತಗಳ ಅನಗತ್ಯ ವಿಳಂಬಕ್ಕೆ ಕಾರಣವಾಗುತ್ತಿರುವುದು ತಿಳಿದುಬಂದಿರುತ್ತದೆ. ಕಚೇರಿಯಲ್ಲಿ ಸಿಸಿಟಿವಿ ಹಾಗೂ ಬೆರಳಚ್ಚು ಹಾಜರಾತಿ ವ್ಯವಸ್ಥೆ ಇದ್ದರೂ ಅವು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂಬ ಆರೋಪ ಕೇಳಿಬರುತ್ತಿದೆ. ವರ್ಗಾವಣೆಗೊಂಡ ಶಿಕ್ಷಕರ ಬಿಡುಗಡೆ ವಿಷಯದಲ್ಲಿ ಆಯುಕ್ತರ ಆದೇಶಗಳನ್ನು ಸಮರ್ಪಕವಾಗಿ ಅನುಸರಿಸದೇ ಕೆಲವರಿಗೆ ಮಾತ್ರ ವಿಶೇಷ ಸೌಲಭ್ಯ ನೀಡಲಾಗಿದೆ ಎಂಬ ಪ್ರಶ್ನೆಗಳು ಶಿಕ್ಷಕರ ವಲಯದಲ್ಲಿ ಕೇಳಿಬರುತ್ತಿವೆ ಎಂದು ಶ್ರೀರಾಮ ಸೇನೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.**

# ಮ.ಬೆಟ್ಟಕ್ಕೆ ಹರಿದುಬಂದ ಭಕ್ತ ಸಾಗರ


## ವಿವಿಧ ಸೇವೆಗಳಿಂದ 98 ಲಕ್ಷ ರೂ. ಆದಾಯ । ದೇಗುಲಕ್ಕೆ ಲಕ್ಷಾಂತರ ಭಕ್ತರ ಭೇಟಿ



ಹನೂರು: ರಾಜ್ಯದ ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳವಾದ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಕಳೆದ ಮೂರು ದಿನಗಳಿಂದ ಲಕ್ಷಾಂತರ ಭಕ್ತರು ಭೇಟಿ ನೀಡಿ ಮಾದಪ್ಪನ ದರ್ಶನ ಪಡೆದಿದ್ದಾರೆ.

ಶುಕ್ರವಾರದ ಎಣ್ಣೆ ಮಜ್ಜನ ಸೇವೆ, ಶನಿವಾರದ ಬಾದಾಮಿ ಅಮಾವಾಸ್ಯೆ ಹಾಗೂ ಭಾನುವಾರದ ವಾರಾಂತ್ಯದ ರಜೆಯ ಹಿನ್ನೆಲೆಯಲ್ಲಿ ರಾಜ್ಯದ ನಾನಾ ಮೂಲೆಗಳಿಂದ ಭಕ್ತರ ದಂಡೇ ಹರಿದು ಬಂದಿದೆ. ಜೊತೆಗೆ, ಮುಂದಿನ ವಾರದಿಂದ ಶಾಲೆಗಳು ಪುನರಾರಂಭಗೊಳ್ಳುತ್ತಿರುವ ಕಾರಣ ಪೋಷಕರು ತಮ್ಮ ಮಕ್ಕಳೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಇಷ್ಟಾರ್ಥ ಸಿದ್ಧಿಗಾಗಿ ಹರಕೆಗಳನ್ನು ಸಮರ್ಪಿಸಿದ್ದಾರೆ.

### ಮಾದಪ್ಪನಿಗೆ ವಿಶೇಷ ಪೂಜಾ ಕೈಂಕರ್ಯಗಳು



ಭಾನುವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ಸಂಪ್ರದಾಯಬದ್ಧವಾಗಿ ವಿಶೇಷ ಪೂಜೆಗಳು ಮತ್ತು ವಿಧಿವಿಧಾನಗಳು ಶ್ರದ್ಧಾಭಕ್ತಿಯಿಂದ ಜರುಗಿದವು. ಸ್ವಾಮಿಗೆ ಸಂಕಲ್ಪ, ಏಕವಾರ ರುದ್ರಾಭಿಷೇಕ, ಪಂಚಾಮೃತ ಅಭಿಷೇಕದ ಜೊತೆಗೆ ಶತನಾವ ಬಿಲ್ವಾರ್ಚನೆ ನೆರವೇರಿಸಲಾಯಿತು. ಎಳನೀರು, ಜೇನುತುಪ್ಪ, ಮೊಸರು, ಸಕ್ಕರೆ, ಖರ್ಜೂರ, ದ್ರಾಕ್ಷಿ ಹಾಗೂ ಹಾಲಿನ ಅಭಿಷೇಕದ ಮೂಲಕ ಮಾದಪ್ಪನನ್ನು ಆರಾಧಿಸಲಾಯಿತು. ಎರಡನೇ ಅಭಿಷೇಕದ ವಿಶೇಷ ಪೂಜೆಯ ಬಳಿಕ ನವರತ್ನ ಕಿರೀಟಧಾರಣೆಯೊಂದಿಗೆ ಸ್ವಾಮಿಯ ಮೂರ್ತಿಯನ್ನು ವಿವಿಧ ಪುಷ್ಪಗಳಿಂದ ಕಣ್ಮನ ಸೆಳೆಯುವಂತೆ ಶೃಂಗರಿಸಲಾಗಿತ್ತು. ಧೂಪ, ದೀಪಾರತಿ ಹಾಗೂ ಮಹಾಮಂಗಳಾರತಿ ಬೆಳಗುವ ಮೂಲಕ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

### ಭಕ್ತರ ಭಕ್ತಿ ಸಮರ್ಪಣೆ ಹಾಗೂ ನಾನಾ ಸೇವೆಗಳು

ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಉದ್ದನೆಯ ಸರತಿ ಸಾಲಿನಲ್ಲಿ ಕಾದು ನಿಂತು ದೇವರ ದರ್ಶನ ಪಡೆದು ಪುನೀತರಾದರು. ಭಕ್ತಾದಿಗಳು ಮುಡಿಸೇವೆ, ಉರುಳು ಸೇವೆ ಹಾಗೂ ಪಂಜಿನ ಸೇವೆಗಳನ್ನು ಮಾಡುವ ಮೂಲಕ ತಮ್ಮ ಭಕ್ತಿ ಮೆರೆದರು. ಚಿನ್ನದ ತೇರು, ಬೆಳ್ಳಿ ತೇರು, ಹುಲಿ, ರುದ್ರಾಕ್ಷಿ ಹಾಗೂ ಬಸವ ವಾಹನೋತ್ಸವಗಳಲ್ಲಿ ಪಾಲ್ಗೊಂಡು ದಂಡಿನ ಕೋಲನ್ನು ಹೊತ್ತು ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿ ಹರಕೆ ತೀರಿಸಿದರು. ಇನ್ನು ಹಲವು ಭಕ್ತರು ದೇವಾಲಯದ ಮುಂಭಾಗ ಗಂಧದ ಕಡ್ಡಿ, ಕರ್ಪೂರ ಬೆಳಗಿ, ಈಡುಗಾಯಿ ಒಡೆಯುವ ಮೂಲಕ ಭಕ್ತಿ ಸಮರ್ಪಿಸಿದರು.

### ಲಕ್ಷಾಂತರ ಲಾಡು ಮಾರಾಟ, ಪ್ರಾಧಿಕಾರದ ಆದಾಯ

**ಅಮಾವಾಸ್ಯೆಯ ಪ್ರಯುಕ್ತ ಶುಕ್ರವಾರದಿಂದ ಭಾನುವಾರದವರೆಗೆ ಆಗಮಿಸಿದ ಭಕ್ತರು ದಾಖಲೆ ಪ್ರಮಾಣದಲ್ಲಿ, ಅಂದರೆ ಸುಮಾರು ಒಂದೂವರೆ ಲಕ್ಷ ಲಾಡು ಪ್ರಸಾದವನ್ನು ಖರೀದಿಸಿದ್ದಾರೆ. ಸೋಮವಾರವೂ ಭಕ್ತರ ಆಗಮನ ಮುಂದುವರೆಯುವ ನಿರೀಕ್ಷೆಯಿದೆ. ವಿವಿಧ ಉತ್ಸವಗಳು ಹಾಗೂ ಸೇವೆಗಳಿಂದ ಶ್ರೀಮಲೆಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಭಾರಿ ಆದಾಯ ಹರಿದು ಬಂದಿದೆ. ಭಕ್ತರು ಹರಕೆ ರೂಪದಲ್ಲಿ ನಡೆಸಿದ 600 ಬಂಗಾರದ ರಥೋತ್ಸವ, 63 ಬೆಳ್ಳಿ ರಥೋತ್ಸವ, 1908 ಹುಲಿವಾಹನ, 484 ಬಸವ ವಾಹನ ಹಾಗೂ 165 ರುದ್ರಾಕ್ಷಿ ವಾಹನೋತ್ಸವಗಳಿಂದ ಒಟ್ಟಾರೆ 26 ಲಕ್ಷಕ್ಕೂ ಅಧಿಕ (26, 95,513 ರೂ.) ಆದಾಯ ಸಂಗ್ರಹವಾಗಿದೆ. ಇದರ ಜೊತೆಗೆ ಮಾಹಿತಿ ಕೇಂದ್ರ, ಲಾಡು ಮಾರಾಟ, ತೀರ್ಥ ಪ್ರಸಾದ, ಕಲ್ಲು ಸಕ್ಕರೆ ಬ್ಯಾಗ್, ಅಕ್ಕಿ ಸೇವೆ, ವಿಶೇಷ ಪ್ರವೇಶ ಶುಲ್ಕ ಹಾಗೂ ನಗದು ಕಾಣಿಕೆ ಸೇರಿದಂತೆ ಇತರೆ ಮೂಲಗಳಿಂದ ಬರೋಬ್ಬರಿ 98 ಲಕ್ಷ ರೂಪಾಯಿಗಳ ಆದಾಯ ಪ್ರಾಧಿಕಾರದ ಬೊಕ್ಕಸಕ್ಕೆ ಜಮೆಯಾಗಿದೆ.**

### ಮೂಲ ಸೌಕರ್ಯ ಹಾಗೂ ಬಿಗಿ ಭದ್ರತೆ

**ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಸೇರುತ್ತಿದ್ದರೂ ಯಾರಿಗೂ ಯಾವುದೇ ರೀತಿಯ ತೊಂದರೆಯಾಗದಂತೆ ಶ್ರೀಮಲೆಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ನಿರಂತರ ದಾಸೋಹ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲಾ ಅಗತ್ಯ ಮೂಲ ಸೌಕರ್ಯಗಳನ್ನು ಅಚ್ಚುಕಟ್ಟಾಗಿ ಕಲ್ಪಿಸಿತ್ತು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ದೇವಾಲಯದ ಆವರಣದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಅಲ್ಲದೆ, ಭಕ್ತರ ದಟ್ಟಣೆಗೆ ಅನುಗುಣವಾಗಿ ಸಾರಿಗೆ ಸಂಸ್ಥೆಯಿಂದ ಹೆಚ್ಚುವರಿ ಬಸ್ ಸೌಕರ್ಯವನ್ನೂ ಒದಗಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿತ್ತು.**

# ಎಸ್‌ಎಸ್‌ಎಲ್‌ಸಿ ಪಾಸಾದ ಪ.ಜಾತಿ ವಿದ್ಯಾರ್ಥಿಗಳ ಪ್ರೋತ್ಸಾಹಧನಕ್ಕೆ ಅರ್ಜಿ

ಮೈಸೂರು– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

2025–26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ. 60 ರಿಂದ ಶೇ. 74.99 ಅಂಕ ಪಡೆದ ಪ.ಜಾತಿಯ ವಿದ್ಯಾರ್ಥಿಗಳಿಗೆ ರೂ. 7000/– ಮತ್ತು ಶೇ. 75ಕ್ಕಿಂತ ಹೆಚ್ಚು ಅಂಕ ಪಡೆದ ಪ.ಜಾತಿ ವಿದ್ಯಾರ್ಥಿಗಳಿಗೆ ರೂ. 15000/– ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ಆದಾಯ ಮಿತಿ ಇರುವುದಿಲ್ಲ.

ರಾಜ್ಯ ಪಠ್ಯಕ್ರಮಅಃಖಇ ಮತ್ತು ಖಅಖಅ ಪಠ್ಯಕ್ರಮದಲ್ಲಿ 2026 ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ. 60 ಕ್ಕೂ ಹೆಚ್ಚಿನ ಅಂಕ ಪಡೆದ ಎಲ್ಲಾ ಪ.ಜಾತಿ ವಿದ್ಯಾರ್ಥಿಗಳೂ ತಮ್ಮ ಖಾತೆಗೆ ಆಧಾರ್ ಸೀಡ್ ಆಗಿರುವ ಬಗ್ಗೆ ಖಚಿತಪಡಿಸಿಕೊಂಡು https://swdservices.karnataka.gov.in/PrizeMoneyClientApp/register or swdservices.karnataka.gov.in ? Prize Money Application ? Register/Apply ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬೇಕು. ನಂತರ ಆನ್‌ಲೈನ್ ಸ್ವೀಕೃತಿಯೊಂದಿಗೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಆಧಾರ್ ಪ್ರತಿ, ಜಾತಿ ಪ್ರಮಾಣ ಪತ್ರದ ನಕಲು ಪ್ರತಿಗಳನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರಿಂದ ದೃಢೀಕರಿಸಿ ಸಹಾಯಕ ನಿರ್ದೇಶಕರು ಗ್ರೇಡ್–1, ರವರ ಕಛೇರಿ ಸಮಾಜ ಕಲ್ಯಾಣ ಇಲಾಖೆ, ಬಾಬು ಜಗಜೀವನರಾಂ ಕಟ್ಟಡ ಆದಿಪಂಪರಸ್ತೆ, ಪಡುವಾರಹಳ್ಳಿ ಮೈಸೂರು ಇವರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ: 0821–2520910 ನ್ನು ಸಂಪರ್ಕಿಸಬಹುದು.

# ಹೆಚ್‌ಡಿಡಿ ಹುಟ್ಟುಹಬ್ಬ: ವಿಶೇಷ ಪೂಜೆ



ಚಾಮರಾಜನಗರ: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆದ ಸಿಹಿ ಹಂಚಿ ಸಂಭ್ರಮಿಸಲಾಯಿತು.

ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಅಧ್ಯಕ್ಷ ಚಾ.ರಂ.ಶ್ರೀ.ನಿವಾಸಗೌಡ ಅವರ ನೇತೃತ್ವದಲ್ಲಿ ಚಾಮರಾಜೇಶ್ವರ ದೇವಸ್ಥಾನದಲ್ಲಿ ಹೆಚ್.ಡಿ. ದೇವೇಗೌಡ ಹೆಸರಿನಲ್ಲಿ ಅರ್ಚನೆ ಮಾಡಿಸಿ, ವಿಶೇಷ ಪೂಜೆ ಸಲ್ಲಿಸಿ ಈಡುಗಾಯಿ ಒಡೆದು ಸಿಹಿ ಹಂಚಲಾಯಿತು. ಶ್ರೀನಿವಾಸಗೌಡ ಮಾತನಾಡಿ, ಮಣ್ಣಿನ ಮಗ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದೇಶ, ರಾಜ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಶ್ರೀಚಾಮರಾಜೇಶ್ವರ ಸ್ವಾಮಿ ಅವರಿಗೆ ಹೆಚ್ಚಿನ ಆರೋಗ್ಯ, ಆಯಸ್ಸು ಕರುಣಿ ಮತ್ತೊಮ್ಮೆ ರಾಜ್ಯ ಸಭಾ ಸದಸ್ಯರಾಗಿ ಜನ ಸೇವೆ ಮಾಡುವ ಅವಕಾಶ ದೊರೆಯುವಂತಾಗಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಲಕ್ಷ್ಮೀ ನರಸಿಂಹ, ನಗರಸಭಾ ಮಾಜಿ ಸದಸ್ಯಗಣೇಶ ದೀಕ್ಷಿತ್, ಕರಿಯನಕಟ್ಟೆ ಚಿನ್ನುಮುತ್ತು, ಅರುಣ್ ಕುಮಾರ್ ಗೌಡ, ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಮಹೇಶ್, ಪಣ್ಯದಹುಂಡಿ ರಾಜು, ಹೊಮ್ಮ ಲೋಕೇಶ್, ಮಹೇಶ್ ಗೌಡ, ತಮಿಳು ಸಂಘದ ಜಗದೀಶ್, ಚಾ.ವೆಂ.ರಾಜಗೋಪಾಲ್, ರವಿಚಂದ್ರ ಪ್ರಸಾದ್ ಕಳಲೆ, ರಾಚಪ್ಪ, ಕಲಾವಿದ ಶಿವಣ್ಣ, ಮುತ್ತುರಾಜು, ರಾಜಣ್ಣ, ಸಿದ್ದಶೆಟ್ಟಿ, ಎಲ್ ಐಸಿ ರಾಜು, ಮಹದೇವಯ್ಯ ಹಾಜರಿದ್ದರು.

# ಜಿಂಕೆ ಬೇಟೆಯಾಡ್ಡಿವನ ಬಂಧನ



ಚಾಮರಾಜನಗರ: ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಜಿಂಕೆ ಬೇಟೆಯಾಡುತ್ತಿದ್ದವನನ್ನು ಅರಣ್ಯ ಇಲಾಖೆಯವರು ಬಂಧಿಸಿದ್ದಾರೆ.

ಕೋಟಂಬಳ್ಳಿ ಗ್ರಾಮದ ಉಮೇಶ್ (25) ಬಂಧನಕ್ಕೆ ಒಳಗಾದವನು. ಈತ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಚಾಮರಾಜನಗರ ಪ್ರಾದೇಶಿಕ ವಲಯದಲ್ಲಿ ಕಳೆದ ವರ್ಷ ಸೆ.24 ರಂದು ಚನ್ನಪ್ಪನಪುರ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒಂದು ಜಿಂಕೆಯನ್ನು ಬೇಟೆ ಮಾಡಿದ್ದನು. ಈ ಸಂದರ್ಭದಲ್ಲಿ ಒಂದು ಜಿಂಕೆ, ಒಂದು ಬೈಕ್ ಹಾಗೂ ಒಂದು ಚೂರಿಯನ್ನು ವಶಪಡಿಸಿಕೊಳ್ಳಲಾಗಿತ್ತು.

ಈ ವೇಳೆ ಸದರಿ ಆರೋಪಿಯು ತಪ್ಪಿಸಿಕೊಂಡು, ತಲೆಮರೆಸಿಕೊಂಡಿದ್ದನು. ಆರೋಪಿಯನ್ನು ಅರಣ್ಯ ಇಲಾಖೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಉಳಿದ ಆರೋಪಿಗಳ ಪತ್ತೆಗೂ ಪೊಲೀಸರು ಬಲೆ ಬೀಸಿದ್ದಾರೆ.

# ಮೂವರು ವನ್ಯಜೀವಿ ಬೇಟೆಗಾರರ ಬಂಧನ

ಚಾಮರಾಜನಗರ, ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿ ಕೆರೆಯಲ್ಲಿ ವನ್ಯಜೀವಿ ಭೇಟೆ ಮಾಡಲು ಬಂದಿದ್ದ ಮೂವರನ್ನು ಅರಣ್ಯ ಇಲಾಖೆಯವರು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದ ಬಳಿಕ ಪೊಲೀಸರಿಗೆ ಒಪ್ಪಿಸಿರುವ ಘಟನೆ ವರದಿಯಾಗಿದೆ.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿ ಕೆರೆಯ ಬಳಿ ಸಂತೋಷ್ ಕುಮಾರ್, ಕೃಷ್ಣ ಹಾಗೂ ಗೋಪಾಲಶೆಟ್ಟಿ ರವರುಗಳು ವನ್ಯ ಜೀವಿ ಭೇಟೆಯಲ್ಲಿ ತೊಡಗಿದ್ದಾರೆಂದು ಬಂದ ಖಚಿತ ಮಾಹಿತಿ ಮೇರೆಗೆ ಗುಂಡ್ಲುಪೇಟೆ ಬಫರ್ ಜೋನ್ ವಲಯ ಅರಣ್ಯಾಧಿಕಾರಿ ಶಿವಕುಮಾರ್ ರವರು ದಾಳಿ ನಡೆಸಿ ಮೂವರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದ ಬಳಿಕ ಆರೋಪಿಗಳನ್ನು ಬೇಗೂರು ಪೊಲೀಸರಿಗೆ ಒಪ್ಪಿಸಿದ್ದಾರೆ. ಬಂಧಿತ ಮೂವರು ಆರೋಪಿಗಳಿಂದ ಪರವಾನಗಿ ರಹಿತದ ನಾಡಬಂದೂಕು, ಹಾಗೂ ಸ್ಫೋಟಕ ವಸ್ತುಗಳನ್ನು ಜಪ್ತಿಪಡಿಸಿಕೊಳ್ಳಲಾಗಿದೆ. ಬಂಧಿತ ಆರೋಪಿಗಳನ್ನು ಬೇಗೂರು ಸಬ್ ಇನ್ಸ್ಪೆಕ್ಟರ್ ನವೀನ್ ಹೆಚ್.ಕೆ ರವರು ನ್ಯಾಯಾಲಯ ಹಾಜರು ಪಡಿಸಿದ್ದು, ನ್ಯಾಯಾಲಯವು ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

### ಹಟ್ಟಿ ಹೈಕಳ ಜಗುಲಿ" ಮಕ್ಕಳ ಬೇಸಿಗೆ ಶಿಬಿರ'

# ರಂಗ ಗೀತೆಗಳಲ್ಲಿ ಮೇಳೈಸಿದ ಬೇಸಿಗೆ ಶಿಬಿರ ಸಮಾರೋಪ



ಚಾಮರಾಜನಗರ: ಮಕ್ಕಳು ರಂಗಗೀತೆಗಳನ್ನು ಹಾಡುತ್ತಿದ್ದರೇ, ಹಿರಿಯ ರಂಗಕರ್ಮಿಗಳು, ಪೋಷಕರು ಹಾಗೂ ಪ್ರೇಕ್ಷಕರು ತಲೆದೂಗಿದರು. ವಿವಿಧ ತಿಂಡಿ–ತಿನಿಸುಗಳನ್ನು ಪುಟಾಣಿ ಮಕ್ಕಳು ಮಾರಾಟ ಮಾಡಿ ಮಕ್ಕಳ ಸಂತೆಗೆ ಮೆರುಗು ತಂದರು.

ನಗರದ ವರನಟ ಡಾ.ರಾಜ್ ಕುಮಾರ್ ರಂಗ ಮಂದಿರದಲ್ಲಿ ಅಭ್ಯಾಸಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ "ಹಟ್ಟಿ ಹೈಕಳ ಜಗುಲಿ" ಮಕ್ಕಳ ಬೇಸಿಗೆ ಶಿಬಿರ ಸಮಾರೋಪ ಸಮಾರಂಭದಲ್ಲಿ ಮಕ್ಕಳು ಗಮನ ಸೆಳೆದ ರೀತಿ ಇದಾಗಿತ್ತು. ಅವರು ತಾಳಕ್ಕೆ ತಕ್ಕಂತೆ ರಂಗಗೀತೆಗಳಿಗೆ ಧ್ವನಿಯಾಗುತ್ತಿರುವುದನ್ನು ನೋಡುವುದೇ ಒಂದು ಸೊಗಸು ಎಂಬುದನ್ನು ಹಿರಿಯ ರಂಗಕರ್ಮಿಗಳ ಕಂಗಳು ಹೇಳುತ್ತಿತ್ತು. ಆಟದ ಜೊತೆಗೆ ಪಾಠವನ್ನು ಕಲಿಸುವ ಬೇಸಿಗೆ ಶಿಬಿರಕ್ಕೆ ಸೂಕ್ತ ವೇದಿಕೆ ನಿರ್ಮಾಣವಾಗಿದೆ ಎಂದು ಗಣ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ರಂಗಾಯಣ ಮಾಜಿ ನಿರ್ದೇಶಕ ಜನಾರ್ದನ್ (ಜನ್ನಿ) ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಖಾಸಗಿ ಶಾಲೆಗಳು ಹಣ ಮಾಡುವ ಕೇಂದ್ರಗಳಾಗಿವೆ. ಇಂತಹ ಸಂದರ್ಭದಲ್ಲಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೇಸಿಗೆ ಶಿಬಿರಗಳು ಸಹಕಾರಿಯಾಗಲಿದೆ. ದೊಡ್ಡವರು ಮುಗ್ಧತೆಯನ್ನು ಕಳೆದುಕೊಂಡಿದ್ದು, ಪರಿಪೂರ್ಣ ಮಾಣಿಕ್ಯಗಳಾದ ಮಕ್ಕಳನ್ನು ಸೂಕ್ಷ್ಮತೆಯಿಂದ ಗಮನಿಸಿ ಅವರಿಗೆ ಸೂಕ್ತ ವಾತಾವರಣವನ್ನು ಕಲ್ಪಿಸಿಕೊಡಬೇಕಿದೆ ಎಂದರು.

ಈ ಭಾಗದ ಶ್ರೀ ಮಂಟೇಸ್ವಾಮಿ, ಶ್ರೀ ಮಹದೇಶ್ವರ ಜಗತ್ತಿನ ಸಾಂಸ್ಕೃತಿಕ, ಸತ್ಯ ಮತ್ತು ಸಮಾನತೆಯ ಪ್ರಜ್ಞೆಯಾಗಿದ್ದಾರೆ. ಮುಗ್ಧತೆ ಇದ್ದ ಕಡೆ ಸತ್ಯ ಮತ್ತು ಸಂಸ್ಕೃತಿ ಇರುತ್ತದೆ. ಮಕ್ಕಳು ಮುಕ್ತವಾದ ದೀವಿಗೆಯಾಗಿದ್ದಾರೆ. ಅವರ ವಿಚಾರದಲ್ಲಿ ದೋಷ ಮಾಡಬಾರದು. ನಮ್ಮ ಹಿರಿಯರಿಂದ ನಡೆ, ನುಡಿ, ಸಂಸ್ಕೃತಿ ಮತ್ತು ಸಂಬಂಧವನ್ನು ಕಲಿತುಕೊಂಡಿದ್ದೇವೆ. ಆದರೆ ಸಮಾಜದಲ್ಲಿ ಇಂದು ಯುದ್ಧ, ಜಗಳವೇ ಪ್ರಧಾನವಾಗಿರುವುದರಿಂದ ಭವಿಷ್ಯದ ಕುರಿತು ಆತಂಕವಾಗುತ್ತಿದೆ ಎಂದು ತಿಳಿಸಿದರು.

ಚೇತನವೊಂದೆ ಮನುಷ್ಯನಿಗೆ ಸದೃಢವಾದ ಆಯುಧವಾಗಿದೆ. ಅಂತಹ ಚೇತನಗಳು ಉಳಿಯಬೇಕಾದರೇ ಮಕ್ಕಳೊಂದಿಗೆ ನಾವು ಬದುಕುವುದನ್ನು ಕಲಿಯಬೇಕು. ಮಕ್ಕಳಿಗೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡಬೇಕಿದೆ. ಕಿರಣ್ ಗಿರ್ಗಿ ಅತ್ಯಂತ ಬದ್ಧತೆ ಮತ್ತು ಶಿಸ್ತಿನಿಂದ ಶಿಬಿರಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜವಳಿ ವರ್ತಕರ ಸಂಘದ ಅಧ್ಯಕ್ಷ ಬಿ.ವಿ.ವೆಂಕಟನಾಗಪ್ಪ ಶೆಟ್ಟಿ, ಸಾಹಿತಿ ಮತ್ತು ಸಂಶೋಧಕರಾದ ಪಿ.ನಾಗರತ್ನಮ್ಮ ಮಳವಳ್ಳಿ, ಬೆಂಗಳೂರು ಅಬಕಾರಿ ಅಧೀಕ್ಷಕ ಎಸ್.ಎಂ. ಮಹೇಶ, ಪ್ರಾಧಿಕಾರ ಸದಸ್ಯ ಎಸ್.ರಾಜು, ಉದ್ಯಮಿ ಸಿ.ಕಾಂತರಾಜ್, ನವೋದಯ ಎಜುಕೇಶನ್ ಟ್ರಸ್ಟ್ ಸಂಸ್ಥಾಪಕ ಎಸ್.ಎಸ್.ಮೋಹನ್ ಕುಮಾರ್, ಹಿರಿಯ ಸಂಗೀತ ವಿದ್ವಾಂಸ ಕಿರಗಸೂರು ರಾಜಪ್ಪ, ವಿದ್ವಾನ್ ರಘುನಾಥ್, ಅಭ್ಯಾಸಿ ಟ್ರಸ್ಟ್ ಅಧ್ಯಕ್ಷ ಕಿರಣ್ ಗಿರ್ಗಿ, ಶಿಬಿರದ ಸಂಚಾಲಕಿ ನಂದಿನಿ ರವಿಕುಮಾರ್ ಹಾಗೂ ಇತರರು ಹಾಜರಿದ್ದರು.

# 10ಲಕ್ಷ ಗೆದ್ದ ಬೆಂಗಳೂರಿನ ಸೆಲ್ಫ್ ಚಾರ್ಜಿಂಗ್ ಸ್ಕೂಟರ್




ಮೈಸೂರು: ವಿದ್ಯಾರ್ಥಿಗಳು ಮನಸ್ಸು ಮಾಡಿದರೆ ಏನನ್ನೂ ಬೇಕಾದರೂ ಸಾಧಿಸಬಹುದು ಎಂಬುದನ್ನು ರಾಜ್ಯದ ಇಂಜಿನಿಯರಿಂಗ್ ವಿದ್ಯಾರ್ಥಿಗಳ ತಂಡ ಸಾಬೀತು ಮಾಡಿದ್ದು, ಅದರಲ್ಲೂ ಬೆಂಗಳೂರಿನ ವಿದ್ಯಾರ್ಥಿಗಳ ತಂಡ ಒಂದೇ ಬೈಕ್‌ನಲ್ಲಿ ಪೆಟ್ರೋಲ್ ಹಾಗೂ ಚಾರ್ಜಿಂಗ್ ಎರಡನ್ನು ಬಳಸಬಹುದಾದ ತಂತ್ರಜ್ಞಾನವನ್ನು ಕಂಡು ಹಿಡಿದು 10 ಲಕ್ಷ ಬಹುಮಾನವನ್ನು ಗೆದ್ದು ಬೀಗಿದರು.

ಮೈಸೂರಿನ ಹೆಬ್ಬಾಳದಲ್ಲಿರುವ ಎಐ, ಡಿಜಿಟಲ್ ಮತ್ತು ಇಆರ್&ಡಿ ಕನ್ಸಲ್ಟಿಂಗ್ ಸೇವೆಗಳಲ್ಲಿ ಜಾಗತಿಕ ಮುಂಚೂಣಿಯಲ್ಲಿರುವ ಎಲ್&ಟಿ ಟೆಕ್ನಾಲಜಿ ಸರ್ವಿಸಸ್ ಸಂಸ್ಥೆಯು ಭಾರತದ ಡೀಪ್–ಟೆಕ್ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಜಗತ್ತಿಗೆ ಸಾರುವ ಸಲುವಾಗಿ, ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಟೆಕ್‌ಜಿಯಂಲ ನ ಒಂಬತ್ತನೇ ಆವೃತ್ತಿಯ ಎಂಜಿನಿಯರಿಂಗ್ ಸ್ಪರ್ಧಾ ವೇದಿಕೆಯಲ್ಲಿ ಬೆಂಗಳೂರಿನ ಎಂ.ಎಸ್.ರಾಮಯ್ಯ ಇನ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ತಂಡ 'ನೆಕ್ಸ್ಟ್ ಜೆನ್ ಸೆಲ್ಫ್– ಚಾರ್ಜಿಂಗ್ ಹೈಬ್ರಿಡ್ ಸ್ಕೂಟರ್" ಪ್ರದರ್ಶಿಸಿ ಪ್ರಥಮ ಸ್ಥಾನದೊಂದಿಗೆ 10ಲಕ್ಷ ನಗದು ಬಹುಮಾನ ಪಡೆದುಕೊಂಡಿತು. ಬೆಂಗಳೂರಿನ ಆರ್‌ಎನ್‌ಎಸ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತಂಡದ ಟೆಟ್ರೋಬೋಟ್–ಮಾಡ್ಯುಲರ್ ರೋಬೋಟಿಕ್ ಆರ್ಮ್ ಯೋಜನೆಗೆ ದ್ವಿತೀಯ, ತಮಿಳುನಾಡಿನ ಪಿಎಸ್‌ಎನ್‌ಎ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ತಂಡ ಏರಿಸ್– ಸ್ಟೆಬಿಲಿಟಿ ಸ್ಟಾರ್ಟ್ಸ್ ವಿತ್ ಕಂಫರ್ಟ್ ಯೋಜನೆಗೆ ತೃತೀಯ ಬಹುಮಾನ ಪಡೆದುಕೊಂಡವು. ಸದರಿ ಸ್ಪರ್ಧೆಯಲ್ಲಿ 62,000ಕ್ಕೂ ಹೆಚ್ಚು ನೋಂದಣಿಯಾಗಿ, ದೇಶಾದ್ಯಂತ 540ಕ್ಕೂ ಹೆಚ್ಚು ಎಂಜಿನಿಯರಿಂಗ್ ಸಂಸ್ಥೆಗಳಿಂದ ಸ್ಪರ್ಧಿಗಳು ಹೆಸರು ನೋಂದಣಿ ಮಾಡಿದ್ದರು. ಅಂತಿಮವಾಗಿ 160 ನೊಂದಣಿಗಳನ್ನು ಫೈನಲ್ ಮಾಡಿ ಅಂತಿಮವಾಗಿ 34 ತಂಡಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ವೈದ್ಯಕೀಯ ರೋಗನಿರ್ಣಯಕ್ಕಾಗಿ ರೋಬೋಟಿಕ್ ಆಟೋಮೇಷನ್, ಎಐ–ಚಾಲಿತ ಬಹುಭಾಷಾ ವೀಡಿಯೋ ಲೋಕಲೈಸೇಷನ್, ಲೈವ್ ಎಐ ಕ್ಯಾಪ್ಶನಿಂಗ್ ವ್ಯವಸ್ಥೆಗಳು, ಸ್ಮಾರ್ಟ್ ಹೋಮ್ ಮಾನಿಟರಿಂಗ್ ಗಾಗಿ ವೈ–ಫೈ ಸೆನ್ಸಿಂಗ್ ಮತ್ತು ಸುರಕ್ಷಿತ ಕೈಗಾರಿಕಾ ಕಾರ್ಯಾಚರಣೆಗಳಿಗಾಗಿ ಅಡಾಪ್ಟಿವ್ ರೋಬೋಟಿಕ್ ಆರ್ಮ್ ಗಳು ಪ್ರಮುಖವಾಗಿದ್ದವು. ಪೀಪಲ್ಸ್ ಚಾಯ್ಸ್ ಅವಾರ್ಡ್: ಒಡಿಶಾದ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಿಕಲ್ ಎಜುಕೇಶನ್ ಆಂಡ್ ರಿಸರ್ಚ್– ಐಟಿಇಆರ್ ತಂಡ ರೂಪಿಸಿರುವ ಚಿರಂಜೀವಿ ಯೋಜನೆಗೆ ಸಾರ್ವಜನಿಕರಿಂದ ಅತ್ಯಧಿಕ ಮತಗಳು ಲಭಿಸಿ ಆಕರ್ಷಿಸಿದವು.

ಸಿಎಸ್‌ಐಆರ್ ಎನ್‌ಎಎಲ್ ನ ಹಿರಿಯ ವಿಜ್ಞಾನಿ ಹಾಗೂ ಪದ್ಮಶ್ರೀ ಪುರಸ್ಕೃತ ಡಾ.ಶುಭಾ ವಿ.ಅಯ್ಯಂಗಾರ್ ಸಮಾರಂಭದ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, "ಟೆಕ್‌ಜಿಯಂಲ ವೇದಿಕೆಯು ಎಂಜಿನಿಯರಿಂಗ್ ಆವಿಷ್ಕಾರದ ಭವಿಷ್ಯದ ಮೇಲೆ ಬೆಳಕು ಚೆಲ್ಲುವಂತಿದೆ. ವಿದ್ಯಾರ್ಥಿಗಳ ಪರಿಕಲ್ಪನೆಗಳನ್ನು ನೈಜ ಜಗತ್ತಿನ ಪರಿಣಾಮಕಾರಿ ಮತ್ತು ಕೈಗಾರಿಕೆಗೆ ಪೂರಕವಾದ ಪರಿಹಾರಗಳನ್ನಾಗಿ ಪರಿವರ್ತಿಸುವ ಈ ವೇದಿಕೆಯ ಸಾಮರ್ಥ್ಯ ಶ್ಲಾಘನೀಯ. ಮುಂದಿನ ತಲೆಮಾರಿನ ಎಂಜಿನಿಯರಿಂಗ್ ಆವಿಷ್ಕಾರಗಳನ್ನು ಪೋಷಿಸಲು ಇಂತಹ ಯೋಜನೆಗಳು ಅತ್ಯಗತ್ಯ," ಎಂದು ತಿಳಿಸಿದರು. ಎಲ್&ಟಿ ಟೆಕ್ನಾಲಜಿ ಸರ್ವಿಸಸ್ ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಮುಖ್ಯ ಹಣಕಾಸು ಅಧಿಕಾರಿ ರಾಜೀವ್ ಗುಪ್ತಾ ಮಾತನಾಡಿ, "ಭಾರತದ ಉದಯೋನ್ಮುಖ ಡೀಪ್– ಟೆಕ್ ಎಂಜಿನಿಯರಿಂಗ್ ಸಾಮರ್ಥ್ಯ ಮತ್ತು ನಮ್ಮ ಯುವ ಪ್ರತಿಭೆಗಳ ನಾವೀನ್ಯತೆಯ ಶಕ್ತಿ ಪ್ರದರ್ಶನಕ್ಕೆ ಟೆಕ್‌ಜಿಯಂಲ ಒಂದು ಪ್ರಬಲ ವೇದಿಕೆಯಾಗಿ ಹೊರಹೊಮ್ಮಿದೆ. ಕಳೆದ ಒಂಬತ್ತು ಆವೃತ್ತಿಗಳಲ್ಲಿ, ಈ ವೇದಿಕೆಯು ಶೈಕ್ಷಣಿಕ ಕ್ಷೇತ್ರ ಮತ್ತು ಕೈಗಾರಿಕೆಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವ ರಾಷ್ಟ್ರಮಟ್ಟದ ಅಪೂರ್ವ ಆವಿಷ್ಕಾರ ವ್ಯವಸ್ಥೆಯಾಗಿ ಬೆಳೆದಿದೆ. ಈ ವರ್ಷ ಪ್ರದರ್ಶಿಸಲಾದ ತಾಂತ್ರಿಕ ಪರಿಹಾರಗಳ ವ್ಯಾಪ್ತಿ ಮತ್ತು ಗುಣಮಟ್ಟವು ನಮ್ಮ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ ತಿಳಿಸಿದರು.

# ಲಾಟರಿ ಮಾರುತ್ತಿದ್ದವನ ಬಂಧನ

ಗುಂಡ್ಲುಪೇಟೆ: ಪಟ್ಟಣ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕೇರಳಂ ರಾಜ್ಯ ಲಾಟರಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿ, ಲಾಟರಿ ಟಿಕೆಟ್ ವಶಪಡಿಸಿಕೊಂಡಿದ್ದಾರೆ.

ಸ್ಥಳೀಯ ನಿವಾಸಿ ಗೋವಿಂದನಾಯಕ(30) ಬಂಧಿತ. ಈತ ಪಟ್ಟಣದಲ್ಲಿ ಕೇರಳಂ ರಾಜ್ಯ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದ, ಈ ಬಗ್ಗೆ ಬಂದ ಖಚಿತ ಮಾಹಿತಿ ಹಿನ್ನೆಲೆಯಲ್ಲಿ ದಾಳಿ ನಡೆಸಲಾಯಿತು. ದಾಳಿ ವೇಳೆ ಈತನಿಂದ 200 ಟಿಕೆಟ್, ಒಟ್ಟು ಬೆಲೆ ರೂ.10,000 ಗಳ ಲಾಟರಿ ಟಿಕೆಟ್ ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಪಿಎಸ್‌ಐ ನರೇಶ್‌ಕುಮಾರ್, ಪೊಲೀಸ್ ಸಿಬ್ಬಂದಿಗಳಾದ ನಟೇಶ್, ಮಣಿ, ಸಂತೋಷ್‌ಕುಮಾರ್ ಪಾಲ್ಗೊಂಡಿದ್ದರು. ಈತನ ವಿರುದ್ಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ

ಮೈಸೂರು ಮೇ. 18 (ಕರ್ನಾಟಕ ವಾರ್ತೆ):– ವಿ.ವಿ. ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯ 66/11 ಕೆ.ವಿ ವಿಜಯನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಸೆಂಟ್ ಜೋಸೆಫ್ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಮೇ 19 ರಂದು ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿಜಯನಗರ 2ನೇ ಹಂತ, ಕೆನರಾ ಬ್ಯಾಂಕ್ ಸುತ್ತಮುತ್ತ, ಹೈಟೆನ್ಷನ್‌ರಸ್ತೆಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತಯ್ಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿವಮೊಗ್ಗ ಹೋರಾಟಕ್ಕೆ ಬೆಂಬಲ




ಮೈಸೂರು: ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಅರೆಬೆಳಚಿ ಗ್ರಾಮದಲ್ಲಿ ಪರಿಶಿಷ್ಟ ಸಮುದಾಯದ ಕಾಲೋನಿ ನಿವಾಸಿಯ ದಲಿತ ಸಮುದಾಯದವರು ತಿರುಗಾಡುವ ರಸ್ತೆಯನ್ನು ಸವರ್ಣೀಯರು ಒತ್ತುವರಿ ಮಾಡಿಕೊಂಡು ಕಿರುಕುಳ ನೀಡುತ್ತಿದ್ದಾರೆ. ಇದನ್ನು ಖಂಡಿಸಿ ಅಲ್ಲಿನ ದಲಿತ ಸಂಘರ್ಷ ಸಮಿತಿ–ಅಂಬೇಡ್ಕರ್ ವಾದ ನಡೆಸುತ್ತಿರುವ ಧರಣಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ–ಅಂಬೇಡ್ಕರ್ ವಾದದ ಜಿಲ್ಲಾ ಸಮಿತಿ ಬೆಂಬಲ ನೀಡಲಿದೆ ಎಂದು ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಮಾಡಿದರೂ ಸಹಾ ಒತ್ತುವರಿ ತೆರವಿಗೆ ಕ್ರಮ ಕೈಗೊಂಡಿಲ್ಲ. ಹೀಗಾಗಿ ಅಲ್ಲಿ ಹೋರಾಟ ನಡೆಸಲಾಗುತ್ತಿದೆ. ಜೊತೆಗೆ ಗ್ರಾಪಂ ಪಿಡಿಓರನ್ನು ಕೂಡಲೇ ಅಮಾನತುಗೊಳಿಸಬೇಕೆಂದು ಆಗ್ರಹಿಸಲಾಗುತ್ತಿದೆ ಎಂದರು.

ವಿಭಾಗೀಯ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬೆಳಕುಣಿ ಗ್ರಾಮದ ದಲಿತ ಸಮುದಾಯಕ್ಕೆ ಸೇರಿದ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಹಾಗೂ ರಾಜ್ಯ ಮಟ್ಟದ ಕಬಡ್ಡಿ ಆಟಗಾರ್ತಿಯಾಗಿದ್ದ ಶೋಭಾ ಎಂಬ ಅಪ್ರಾಪ್ತೆಯನ್ನು ಯಾರೋ ಕಿಡಿಗೇಡಿಗಳು ಲೈಂಗಿಕ ದೌರ್ಜನ್ಯ ಎಸಗಿ, ಕೊಲೆ ಮಾಡಿದ್ದಾರೆ. ಪ್ರಕರಣ ಸಂಬಂಧ ಓರ್ವನನ್ನು ಬಂಧಿಸಿದ್ದು, ಈತ ಕಾನೂನಿನಿಂದ ತಪ್ಪಿಸಿಕೊಳ್ಳದಂತೆ ಎಚ್ಚರ ವಹಿಸಬೇಕು. ಜೊತೆಗೆ ಮರಣದಂಡನೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಇನ್ನಿತರ ಪದಾಧಿಕಾರಿಗಳಾದ ದೊಡ್ಡಸಿದ್ದು ಹಾದನೂರು, ವಾಟಾಳ್ ನಾಗರಾಜು, ಧಮ್ಮ ಅಶೋಕ ಇದ್ದರು.

# ಆರ್‌ಟಿಒನಲ್ಲಿನ ಸಮಸ್ಯೆ ಇತ್ಯರ್ಥಕ್ಕೆ ಆಗ್ರಹ



ಮೈಸೂರು: ಚಾಲಕರ ಡಿಎಲ್ ನೀಡುವಲ್ಲಿ ಅನಗತ್ಯ ವಿಳಂಬ ಮತ್ತು ವಾಹನ ಸಂಬಂಧಿತ ಸೇವೆಯಲ್ಲಿ ಆಗುತ್ತಿರುವ ಅವ್ಯವಸ್ಥೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಜಿಲ್ಲಾ ಪ್ರವಾಸಿ ವಾಹನ ಚಾಲಕರ ಮತ್ತು ಮಾಲೀಕರ ಯೋಗಕ್ಷೇಮಾಭಿವೃದ್ಧಿ ಸಂಘದಿಂದ ಸೋಮವಾರ ಪ್ರತಿಭಟನೆ ನಡೆಯಿತು.

ನಗರದ ಸರಸ್ವತಿಪುರಂನಲ್ಲಿರುವ ಪಶ್ಚಿಮ ಆರ್‌ಟಿಒ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಾಲಕರು ತಿಂಗಳ ಹಿಂದೆಯೇ ಅರ್ಜಿ ಸಲ್ಲಿಸಿದ್ದರೂ, ಚಾಲನಾ ಪರವಾನಿಗೆ (ಡಿಎಲ್) ಪ್ರಮಾಣಪತ್ರ ವಿತರಿಸಿಲ್ಲ. ಈ ರೀತಿಯ ಅನಗತ್ಯ ವಿಳಂಬದಿಂದ ಚಾಲಕರ ಜೀವನೋಪಾಯಕ್ಕೆ ಅಡಚಣೆ ಉಂಟಾಗಿದೆ. ಮೈಸೂರಿನವರು ಬೇರೆ ಜಿಲ್ಲೆಗೆ ಹೋಗಿ ಡಿಎಲ್ ಮಾಡಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದೂ ದೂರಿದರು. ಡಿಎಲ್ ನವೀಕರಣ, ವಾಹನಗಳ ಎಫ್‌ಸಿ, ವಾಹನಗಳ ದಾಖಲಾತಿ ವರ್ಗಾವಣೆ, ಸಿಸಿ ಪಡೆಯಲೂ ಸಾಧ್ಯವಾಗುತ್ತಿಲ್ಲ. ವಾಹನಗಳ ಆರ್‌ಸಿ ಕಾರ್ಡ್ ನೀಡುತ್ತಿಲ್ಲ. ಎಮಿಷನ್ ಟೆಸ್ಟ್ ಮಾಡಿಸಲು ತೊಂದರೆ ಆಗುತ್ತಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸರ್ವರ್, ಅಪ್‌ಡೇಟ್ ಸಮಸ್ಯೆ ಸೃಷ್ಟಿಯಾಗುತ್ತಿದೆ. ಜತೆಗೆ, ಈ ರೀತಿಯ ಅಧಿಕಾರಿಗಳ ಧೋರಣೆ ಸಾರ್ವಜನಿಕ ಸೇವೆಯ ನಿಯಮಗಳಿಗೆ ವಿರುದ್ಧವಾಗಿದೆ. ಇದರಿಂದ ವಾಹನ ಮಾಲೀಕರು, ಚಾಲಕರು ಆರ್ಥಿಕ, ವೃತ್ತಿಸಂಬಂಧಿತ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಈ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು. ಸಂಘದ ಎಸ್.ನಾಗರಾಜ್, ಆರ್.ಪ್ರಭಾಕರ್, ಕೆ.ಟಿ.ದಿವಾಕರ್, ಚಂದ್ರಶೇಖರ್ ಸ್ವಾಮಿ ಇನ್ನಿತರರಿದ್ದರು.

# ರಾಜ್ಯದ ಮೀಸಲಾತಿ ಸಂವಿಧಾನ ಸೇರಲಿ

## ಕೇಂದ್ರದ ಮೇಲೆ ಒತ್ತಡ ಹೇರಲು ಸಿಎಂಗೆ ವಿ.ಎಸ್.ಉಗ್ರಪ್ಪ ಆಗ್ರಹ




ಚಾಮರಾಜನಗರ: ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವನ್ನು ಶೇ.56ಕ್ಕೆ ಹೆಚ್ಚಳ ಮಾಡಿರುವ 2022ರ ಕಾಯ್ದೆಯನ್ನು ಕೂಡಲೇ 'ಸಂವಿಧಾನದ 9ನೇ ಶೆಡ್ಯೂಲ್'ಗೆ ಸೇರ್ಪಡೆ ಮಾಡಬೇಕು. ಇಲ್ಲವಾದಲ್ಲಿ ರಾಜ್ಯದ ಬೃಹತ್ ಜನವರ್ಗಕ್ಕೆ ತೀವ್ರ ಅನ್ಯಾಯವಾಗಲಿದೆ ಎಂದು ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ಹಾಗೂ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಅವರು ಸರ್ಕಾರವನ್ನು ಎಚ್ಚರಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮೀಸಲಾತಿ ಹೆಚ್ಚಳ ಕಾಯ್ದೆಗೆ ಇತ್ತೀಚೆಗೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆಯಿಂದಾಗಿ ಹಿಂದುಳಿದ ವರ್ಗಗಳ ಭವಿಷ್ಯಕ್ಕೆ ಆಗಿರುವ ಆತಂಕವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

**ದೇವೇಗೌಡರು, ಕುಮಾರಸ್ವಾಮಿ ಮಧ್ಯಪ್ರವೇಶಕ್ಕೆ ಮನವಿ**

ಇದೇ ವೇಳೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರಿಗೂ ಉಗ್ರಪ್ಪ ವಿಶೇಷ ಮನವಿ ಮಾಡಿದರು. "ಹಿಂದೆ ಚಂದ್ರಶೇಖರ್ ಅವರು ಪ್ರಧಾನಿಯಾಗಿದ್ದ ಕಾಲದಲ್ಲಿ ದೇವೇಗೌಡರು ಮೀಸಲಾತಿ ವಿಚಾರವನ್ನು ಪ್ರಸ್ತಾಪಿಸಿ ಪ್ರಮಾಣ ಹೆಚ್ಚಳಕ್ಕೆ ಕಾರಣರಾಗಿದ್ದರು. ಅವರಿಗೆ ಮೀಸಲಾತಿ ವಿಚಾರದಲ್ಲಿ ಕಳಕಳಿ ಇದೆ. ಈಗಲೂ ದೇವೇಗೌಡರು ಮತ್ತು ಕುಮಾರಸ್ವಾಮಿಯವರು ಮನಸ್ಸು ಮಾಡಿದರೆ, ಮೋದಿಯವರ ಮೇಲೆ ಪ್ರಭಾವ ಬೀರಿ ರಾಜ್ಯದ ಶೇ.56ರ ಮೀಸಲಾತಿಯನ್ನು 9ನೇ ಷೆಡ್ಯೂಲ್ನಲ್ಲಿ ನಮೂದಿಸುವಂತೆ ಮಾಡಬಹುದು" ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ನಾಯಕ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಪು. ಶ್ರೀನಿವಾಸನಾಯಕ, ಮುಖಂಡರಾದ ಸುರೇಶ್ ನಾಯಕ, ಕಂಡಕ್ಟರ್ ಚಾ.ಸಿ. ಸೋಮನಾಯಕ, ರೇವತಿನಾಯಕ್, ರಾಜಪ್ಪ, ಜಯಶ್ರೀ, ಹನುಮಂತರಾಯಪ್ಪ, ಸೈಯದ್ ಎಂ.ಡಿ. ಮುಜಾಯಿದ್ ಪಾಷಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ನಿಯೋಗ ಕೊಂಡೊಯ್ಯಲು ಆಗ್ರಹ

"ಹೈಕೋರ್ಟ್ ತಡೆಯಾಜ್ಞೆಯಿಂದಾಗಿ ಮೀಸಲಾತಿ ಸೌಲಭ್ಯದಿಂದ ವಂಚಿತರಾಗುತ್ತಿರುವ ಸಮುದಾಯಗಳಿಗೆ ನ್ಯಾಯ ಒದಗಿಸಲು ರಾಜ್ಯ ಸರ್ಕಾರ ತುರ್ತು ಹೆಜ್ಜೆ ಇಡಬೇಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೂಡಲೇ ಸರ್ವಪಕ್ಷಗಳ ನಿಯೋಗವನ್ನು ದೆಹಲಿಗೆ ಕರೆದೊಯ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಬೇಕು. ರಾಜ್ಯದ ಕಾಯ್ದೆಯನ್ನು ಸಂವಿಧಾನದ 9ನೇ ಶೆಡ್ಯೂಲ್ಗೆ ಸೇರಿಸುವಂತೆ ಕೇಂದ್ರದ ಮೇಲೆ ತೀವ್ರ ಒತ್ತಡ ಹೇರಬೇಕು" ಎಂದು ಉಗ್ರಪ್ಪ ಒತ್ತಾಯಿಸಿದರು. ಈಗಾಗಲೇ ತಾವು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ವಿಚಾರವಾಗಿ ಮನವಿ ಮಾಡಿದ್ದು, ನ್ಯಾಯಾಲಯದ ತಡೆಯಾಜ್ಞೆ ತೆರವಿಗೆ ಕಾನೂನು ಹೋರಾಟ ನಡೆಸುವಂತೆಯೂ ಆಗ್ರಹಿಸಿರು ವುದಾಗಿ ಅವರು ತಿಳಿಸಿ ದರು.ಮುಖ್ಯ ಮಂತ್ರಿಗಳು ಸಹ ಈ ವಿಚಾರಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಕೂಡಲೇ ಕಾರ್ಯಪ್ರವೃತ್ತರಾಗುವ ವಿಶ್ವಾಸವಿದೆ ಎಂದರು.

### ಕೇಂದ್ರದ ನಿರ್ಲಕ್ಷ್ಯದ ಬಗ್ಗೆ ಅಸಮಾಧಾನ

ಹಿಂದಿನ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಅವಧಿಯಲ್ಲಿ, ಅಂದಿನ ಮುಖ್ಯ ಕಾರ್ಯದರ್ಶಿಗಳು ಮೀಸಲಾತಿ ಹೆಚ್ಚಳ ಕಾಯ್ದೆಯನ್ನು 9ನೇ ವಿಧಿಗೆ ಸೇರಿಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆದರೆ, ಕೇಂದ್ರ ಸರ್ಕಾರ ಆ ಮನವಿಯನ್ನು ತಿರಸ್ಕರಿಸಲೂ ಇಲ್ಲ, ಪುರಸ್ಕರಿಸಲೂ ಇಲ್ಲ. ಕೇಂದ್ರದ ಈ ವಿಳಂಬ ಧೋರಣೆಯೇ ಇಂದಿನ ಸಮಸ್ಯೆಗೆ ಕಾರಣ ಎಂದು ಉಗ್ರಪ್ಪ ಅಸಮಾಧಾನ ವ್ಯಕ್ತಪಡಿಸಿದರು.

### 4 ಕೋಟಿ ಕನ್ನಡಿಗರಿಗೆ ಅನ್ಯಾಯ

ಆತಂಕ ವ್ಯಕ್ತಪಡಿಸಿದ ಉಗ್ರಪ್ಪ ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ ಒಟ್ಟಾರೆ ಮೀಸಲಾತಿ ಪ್ರಮಾಣ ಶೇ.50ರ ಮಿತಿಯನ್ನು ಮೀರುವಂತಿಲ್ಲ. ಆದರೆ, ವಿಶೇಷ ಮಾರ್ಗದರ್ಶನಗಳ ಅನ್ವಯ ಸೂಕ್ತ ಕಾರಣಗಳಿದ್ದಾಗ ಮೀಸಲಾತಿ ಏರಿಸಲು ಅವಕಾಶವಿದೆ. "ಕಳೆದ 2023–24 ಹಾಗೂ 2024–25ನೇ ಸಾಲಿನಲ್ಲಿ ಎಸ್ಸಿ, ಎಸ್ಟಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು ಈ ಶೇ.56ರ ಮೀಸಲಾತಿ ಅಡಿಯಲ್ಲಿ ಉನ್ನತ ಶಿಕ್ಷಣದಲ್ಲಿ ಪ್ರವೇಶಾತಿ ಹಾಗೂ ಉದ್ಯೋ ಗದಲ್ಲಿ ಬಡ್ತಿ ಪಡೆದುಕೊಂಡಿದ್ದರು. ಇದೀಗ ಹೈಕೋರ್ಟ್ ಏಕಾಏಕಿ ತಡೆ ನೀಡಿರುವುದರಿಂದ ರಾಜ್ಯದ ಸುಮಾರು 4 ಕೋಟಿ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಒಂದು ವೇಳೆ ಈ ಮೊದಲೇ ಕಾಯ್ದೆಯನ್ನು 9ನೇ ವಿಧಿಗೆ ಸೇರಿಸಿದ್ದರೆ ನ್ಯಾಯಾಲಯದ ತಡೆಗೆ ಅವಕಾಶವೇ ಇರುತ್ತಿರಲಿಲ್ಲ" ಎಂದು ವಿವರಿಸಿದರು.

# ಎಸ್‌ಎಸ್‌ಎಲ್‌ಸಿ ಮರು ಮೌಲ್ಯ ಮಾಪನದಲ್ಲಿ ಎಂಟು ಅಂಕ ಹೆಚ್ಚಳ

ಗುಂಡ್ಲುಪೇಟೆ: ತಾಲ್ಲೂಕಿನ ಹೆಗ್ಗಡಹಳ್ಳಿ ಗ್ರಾಮದ ಫೋಟೋಗ್ರಾಫರ್ ಸಿದ್ದಪ್ಪ ಮತ್ತು ಸವಿತ ದಂಪತಿಯ ಪುತ್ರಿ ವಿದ್ಯಾರ್ಥಿನಿ ಅರುಣ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 587 ಅಂಕ ಪಡೆದಿದ್ದಳು, ನನಗೆ ಇನ್ನೂ ಅಂಕ ಬರಬೇಕು ಎಂದು ಮರು ಮೌಲ್ಯಮಾಪನ ಮೊರೆ ಹೋಗಿದ್ದು ಹೆಚ್ಚುವರಿ 8 ಅಂಕ ಪಡೆದಿದ್ದು ಒಟ್ಟಾರೆ 595 ಅಂಕ ಪಡೆದಿದ್ದು ಪೋಷಕರಿಗೆ ಹೆಮ್ಮೆ ತಂದಿದ್ದಾಳೆ

ಮಗಳ ಸಾಧನೆ ಮೆಚ್ಚಿ ತಂದೆ ತಾಯಿ ವಿದ್ಯಾರ್ಥಿನಿ ಅರುಣಗೆ ಕೇಕ್ ತಿನ್ನಿಸುವ ಮೂಲಕ ಮುಂದಿನ ಶೈಕ್ಷಣಿಕ ಜೀವನಕ್ಕೆ ಒಳಿತು ಭಯಸಿದ್ದು ನಮ್ಮ ಮಕ್ಕಳು ಎಷ್ಟು ಓದಿದರು ಓದಿಸುತ್ತೇವೆ ಅವರ ಆಸೆ ಅಕಾಂಕ್ಷೆಗೆ ಅಡ್ಡಿ ಮಾಡುವುದಿಲ್ಲ ನಾವಂತು ಓದಲಿಲ್ಲ ಮಕ್ಕಳಾದರೂ ಓದಲಿ ಎಂಬುದೇ ನಮ್ಮ ಬಯಕೆ ಎಂದರು.



# ನಾಳೆ ಅಂಬಾರಿ ತಂಡದ ಲೋಕಾರ್ಪಣೆ



ಮೈಸೂರು: ಬೆಂಗಳೂರು ಮೂಲದ ಕನ್ನಡಿಗರ ವ್ಯಾಪಾರ ವೇದಿಕೆ ರಾಜ್ಯದಾದ್ಯಂತ ವ್ಯಾಪಾರ ವಹಿವಾಟಿನಲ್ಲಿ ತೊಡಗಿರುವ ಕನ್ನಡಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸ್ಥಾಪಿತವಾಗಿದ್ದು, ಇದರ ಮೈಸೂರಿನ ಎರಡನೇ ಘಟಕವಾದ ಅಂಬಾರಿ ತಂಡದ ಉದ್ಘಾಟನೆ ಮೇ 20 ರಂದು ಬೆಳಗ್ಗೆ 7.30ಕ್ಕೆ ಹೆಬ್ಬಾಳ ಕೈಗಾರಿಕಾ ಪ್ರದೇಶದ ನಾರ್ತ್ ಅವೆನ್ಯೂದಲ್ಲಿ ನಡೆಯಲಿದೆ ಎಂದು ಸಂಸ್ಥಾಪಕ ಶರತ್ ಖಾದ್ರಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕನ್ನಡ ಮಾತನಾಡುವ ವ್ಯಾಪಾರಿಗಳನ್ನು ಒಟ್ಟುಗೂಡಿಸಿ, ಅವರ ವ್ಯವಹಾರ ಬೆಳವಣಿಗೆಗೆ ನೆರವು ನೀಡುವ ವೇದಿಕೆ ಅಗತ್ಯವಾಗಿದೆ ಎಂಬ ಆಲೋಚನೆಯಿಂದ ಇದನ್ನು ಆರಂಭಿಸಲಾಗಿದೆ. ರಾಜ್ಯಾದ್ಯಂತ ಸುಮಾರು 650 ಸದಸ್ಯರಿದ್ದಾರೆ. ಕಳೆದ ಒಂದೂವರೆ ವರ್ಷದಲ್ಲಿ ಸುಮಾರು 65 ಕೋಟಿ ರೂ.ಗಳ ವಹಿವಾಟು ಇವರು ಈ ವೇದಿಕೆ ಮೂಲಕ ನಡೆಸಿದ್ದಾರೆ. ಸದಸ್ಯತ್ವ ಶುಲ್ಕ 5000 ಸಾವಿರ ರೂ.ಗಳಾಗಿವೆ. ಹೆಚ್ಚಿನ ಮಾಹಿತಿಯನ್ನು ಕನ್ನಡಿಗರ ವ್ಯಾಪಾರ ವೇದಿಕೆ.ಕಾಂನಲ್ಲಿ ಪಡೆಯಬಹುದಾಗಿದೆ ಎಂದರು. ಭಾನುಪ್ರಸಾದ್, ಅರ್ಚನ್, ಸಂಜನಾ ಕದಂ ಇದ್ದರು.

# ಮೇ22ರಿಂದ ಮೈರಿಯಾಲಿಟಿ




ಮೈಸೂರು: ಮೈಸೂರು ಬಿಲ್ಡರ್ಸ್ ಸಂಸ್ಥೆಯ ಮೈಸೂರ ಘಟಕದ ವತಿಯಿಂದ ಮೇ 22 ರಿಂದ 25 ರವರೆಗೆ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಮೈರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನ ಆಯೋಜಿಸಲಾಗಿದೆ ಎಂದು ಆಯೋಜನಾ ಸಮಿತಿ ಅಧ್ಯಕ್ಷ ಅಶ್ವಿನ್ ಆರ್. ಪಾಳೇಗಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರವೇಶದರ 20 ರೂ.ಗಳಾಗಿವೆ. 22 ರಂದು ಬೆಳಗ್ಗೆ 11ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ ಮಹದೇವಪ್ಪ ಚಾಲನೆ ನೀಡುವರು. ಇದರಲ್ಲಿ 7 ಪ್ಲಾಟಿನಂ, 6 ಗೋಲ್ಡ್ಸ್, 6 ಸಿಲ್ವರ್ ಹಾಗೂ 31 ಸಾಮಾನ್ಯ ಮಳಿಗೆ ಇರಲಿವೆ. ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಪ್ರಮೋಟರ್‌ಗಳು, ಬ್ಯಾಂಕ್‌ಗಳನ್ನು ಒಂದೇ ಸೂರಿನಡಿ ತರುವ ಉದ್ದೇಶ ಇದರದ್ದಾಗಿದೆ. ರಿಯಲ್ ಎಸ್ಟೇಟ್‌ನಲ್ಲಿನ ಇತ್ತೀಚಿನ ವಿದ್ಯಮಾನ, ನಾವೀನ್ಯತೆ, ಅವಕಾಶಗಳ ವಿವರ ಇಲ್ಲಿರಲಿದೆ. ಅಪಾರ್ಟ್ಮೆಂಟ್, ಲೇಔಟ್, ವಿಲ್ಲಾ, ರೋಹೌಸ್ ಮೊದಲಾದವುಗಳ ಮಾಹಿತಿ ದೊರೆಯಲಿದೆ ಎಂದರು. ಇನ್ನಿತರ ಪದಾಧಿಕಾರಿಗಳಾದ ಪ್ರವೀಣ್ ಪಾಲ್, ಹರೀಶ್‌ಶೆಣೈ, ಪ್ರಭಾಕರ್ ರಾವ್, ಕೆ.ಎಸ್. ಪ್ರಕಾಶ್ ಇದ್ದರು.

# ಎನ್‌ಟಿಎ ಸಂಸ್ಥೆಯನ್ನು ವಜಾಗೊಳಿಸಿ



ಮೈಸೂರು: ನೀಟ್ ಪರೀಕ್ಷೆ ನಡೆಸಲು ಪದೇ ಪದೇ ವಿಫಲಗೊಳ್ಳುತ್ತಿರುವ ಎನ್‌ಟಿಎ ಸಂಸ್ಥೆಯನ್ನು ವಜಾಗೊಳಿಸಬೇಕೆಂಬುದು ಸೇರಿ ತಮ್ಮ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ನಗರದಲ್ಲಿ ದಲಿತ ಸಂಘರ್ಷ ಸಮಿತಿ ಪ್ರತಿಭಟಿಸಿದರು.

ನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಕಾರ್ಯಕರ್ತರು ನೀಟ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯ ನಡೆಯನ್ನು ಖಂಡಿಸಿದರು. ಭಾರತದ ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಪ್ರಾದೇಶಿಕ ಪರೀಕ್ಷಾ ಪದ್ಧತಿಯನ್ನು ಜಾರಿಗೊಳಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದ ಎಲ್ಲಾ ಆರೋಪಿಗಳ ಆಸ್ತಿಯನ್ನು ಸರ್ಕಾರ ಮುಟ್ಟಿಗೋಲು ಹಾಕಿಕೊಂಡು ಎಲ್ಲರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಆಯಾ ರಾಜ್ಯಗಳ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರಗಳು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಬೇಕು. ರಾಜ್ಯ ಸರ್ಕಾರಗಳು ನಡೆಸುವ ಶಿಕ್ಷಣ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ಹಸ್ತಕ್ಷೇಪ ನಡೆಸಬಾರದು ಎಂಬಿತ್ಯಾದಿ ಹಕ್ಕೊತ್ತಾಯಗಳನ್ನು ಮಂಡಿಸಿದರು. ದಲಿತ ಸಂಘರ್ಷ ಜಿಲ್ಲಾ ಸಮಿತಿಯ ಚೋರನಹಳ್ಳಿ ಶಿವಣ್ಣ, ಯಡತೊರೆ ಮಹದೇವಯ್ಯ, ರವಿಕುಮಾರ್, ನವೀನ್, ಪ್ರಸನ್ನ, ಅಣ್ಣಯ್ಯ ಇನ್ನಿತರರು ಉಪಸ್ಥಿತರಿದ್ದರು.

### ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ

# ರಾಜೀವ್ ಜ್ಯೋತಿ ಯಾತ್ರೆಗೆ ಸ್ವಾಗತ



ಚಾಮರಾಜನಗರ, ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಅವರ ಜನ್ಮದಿನದ ಅಂಗವಾಗಿ ಕೆಪಿಸಿಸಿಯ ಕಾರ್ಮಿಕ ಘಟಕ ಹಮ್ಮಿಕೊಂಡಿರುವ ರಾಜೀವ್ ಗಾಂಧಿ ಜ್ಯೋತಿ ಯಾತ್ರೆಗೆ ಕಾಂಗ್ರೆಸ್ ಕಾರ್ಯಕರ್ತರು ಸ್ವಾಗತಿಸಿದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾತನಾಡಿ, ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರು ದೇಶದಲ್ಲಿ ಮಾಹಿತಿ ತಂತ್ರಜ್ಞಾನ ಕ್ರಾಂತಿ, ದೂರಸಂಪರ್ಕ ವಲಯದ ಅಭಿವೃದ್ಧಿ, 18 ವರ್ಷಕ್ಕೆ ಮತದಾನದ ಹಕ್ಕು, ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆ ಮತ್ತು ಸ್ಥಳೀಯ ಆಡಳಿತದಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮೂಲಕ ಆಧುನಿಕ ಭಾರತದ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಕೆಪಿಸಿಸಿ ಕಾರ್ಮಿಕ ಘಟಕದ ಅಧ್ಯಕ್ಷ ಆರ್. ದೊರೈವೇಲು ಮಾತನಾಡಿ, ಬೆಂಗಳೂರುದಿಂದ ಮೇ 15ರಂದು ಕಳೆದ 35 ವರ್ಷಗಳಿಂದ ಹೊರಡಿಸಲಾಗುತ್ತಿರುವ ರಾಜೀವ್ ಜ್ಯೋತಿ ಯಾತ್ರೆ ರಾಜೀವ್ ಗಾಂಧೀಜಿ ಅವರಿಗೆ ಗೌರವ ಸಲ್ಲಿಸಲು ರಾಜೀವ್ ಜ್ಯೋತಿ ಯಾತ್ರೆ ನೆಲಮಂಗಲ, ಕುಣಿಗಲ್, ಯಡಿಯೂರು, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ, ಕೆ.ಆರ್.ನಗರ ಮತ್ತು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಮೂಲಕ ಸಾಗಿ, ನಂತರ ತಮಿಳುನಾಡಿಗೆ ಸತ್ಯಮಂಗಲಂ, ಕೊಯಮತ್ತೂರು, ಅವಿನಾಶ್, ಪೆರುಮನಲ್ಲೂರು, ಈರೋಡ್, ಭವಾನಿ, ಸೇಲಂ, ಅತ್ತೂರು, ಧರ್ಮಪುರಿ, ಕೃಷ್ಣಗಿರಿ, ತಿರುಪ್ಪತ್ತೂರು, ಉತ್ತಂಗರಾಲ್, ಸಿಂಗಾರಪೇಟೆ, ಚೆಂಗಂ, ತಿರುವಣ್ಣಾಮಲೈ, ಜಿಂಜೀ, ತಿಂದಿವನಂ ಮೂಲಕ ಪ್ರವೇಶಿಸಿ ಪಾಂಡಿಚೇರಿಗೆ ಪ್ರವೇಶಿಸುತ್ತದೆ. ರಾಜೀವ್ ಜ್ಯೋತಿ ಯಾತ್ರೆ ಚೆನ್ನೈಗೆ ಮೇ 21 ರಂದು ಶ್ರೀಪೆರಂಬದೂರಿನಲ್ಲಿ ಸಮಾಪ್ತಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ನಾಗರತ್ನ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಪದ್ಮಪುರುಷೋತ್ತಮ, ಕಾಗಲವಾಡಿ ಚಂದ್ರ, ನಾಗಯ್ಯ, ರೂಪೇಶ್, ಜಿಲ್ಲಾ ಕಾಂಗ್ರೆಸ್ ಕಚೇರಿ ಕಾರ್ಯದರ್ಶಿ ಎ.ಎಚ್. ನಸ್ರುಲ್ಲಾ ಖಾನ್, ನಾಗರಾಜು, ಕುಮಾರ್ ಇತರರು ಭಾಗವಹಿಸಿದ್ದರು.

## ಸಂಕ್ಷಿಪ್ತ ಸುದ್ದಿ

### ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ರಾಮನಗರ:** ಕನಕಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 2026–27ನೇ ಸಾಲಿಗೆ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 5ನೇ ತರಗತಿಯಿಂದ ಪದವಿಯವರೆಗೆ ದಾಖಲಾತಿಗಳು ಪ್ರಾರಂಭವಾಗಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಹಾಗೂ ಇತರೆ ವರ್ಗದ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು/ಆಶ್ರಮ ಶಾಲೆಗಳನ್ನು (1ನೇ ತರಗತಿಯಿಂದ 8ನೇ ತರಗತಿಯವರೆಗೆ) ನಡೆಸಲಾಗುತ್ತಿದ್ದು, ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಇಲಾಖೆಯ ಅಧಿಕೃತ ವೆಬ್‌ಸೈಟ್ WWW.SW.KAR.NIC.INಮೂಲಕ ಅರ್ಜಿ ಹಾಕಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ಸಹಾಯಕ ನಿರ್ದೇಶಕರ (ಶ್ರೇಣಿ–1) ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಕನಕಪುರ ತಾಲ್ಲೂಕು, ಕನಕಪುರ, ಈ ಕಚೇರಿಯನ್ನು ಸಂಪರ್ಕಿಸುವಂತೆ ಕನಕಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿಪ್ರ ಸ್ವ ಉದ್ಯಮ ನೇರ ಸಾಲ ಯೋಜನೆ ಫಲಾನುಭವಿಗಳ ಭೇಟಿ

**ರಾಮನಗರ:** ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಅಸಗೋಡು ಜಯಸಿಂಹ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ದೀಪಶ್ರೀ ಅವರು ಇತ್ತೀಚೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಮತ್ತು ಚನ್ನಪಟ್ಟಣ ತಾಲ್ಲೂಕುಗಳಲ್ಲಿನ ವಿಪ್ರ ಸ್ವ–ಉದ್ಯೋಗ ನೇರ ಸಾಲ ಯೋಜನೆಯ ಫಲಾನುಭವಿಗಳನ್ನು ಭೇಟಿ ಮಾಡಿ ಈ ಯೋಜನೆಯಿಂದ ಪಡೆದಿರುವ ಸಾಲದ ಮೊತ್ತವನ್ನು ವಿವಿಧ ಸ್ವ–ಉದ್ಯೋಗಕ್ಕಾಗಿ ಬಳಸಿಕೊಂಡು ಸದುಪಯೋಗ ಮಾಡುವ ಬಗ್ಗೆ ಹಾಗೂ ಸಾಲವನ್ನು ನಿಗಧಿತ ಸಮಯದಲ್ಲಿ ಮರುಪಾವತಿ ಮಾಡುವ ಬಗ್ಗೆ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ವಿಪ್ರ ಸ್ವ–ಉದ್ಯೋಗ ನೇರ ಸಾಲ ಯೋಜನೆಯ ಫಲಾನುಭವಿಗಳು ಮಾತನಾಡಿ, ಈ ಯೋಜನೆಯಿಂದ ತಮ್ಮ ಸಮುದಾಯದ ಬಡ ಜನರಿಗೆ ಸ್ವ–ಉದ್ಯೋಗ ಮಾಡಲು ತುಂಬಾ ಅನುಕೂಲವಾಗಿದ್ದು, ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ, ಕಂದಾಯ ಸಚಿವರಿಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದಗಳನ್ನು ತಿಳಿಸಿದರು.

### ಅಪರಿಚಿತ ವ್ಯಕ್ತಿಯ ಶವ ಪತ್ತೆ

**ಮೈಸೂರು:** ಕೆ.ಆರ್.ವನಂ, ಮಾನಂದವಾಡಿ ರಸ್ತೆಯ ಕೆ.ಎಸ್.ಐ.ಸಿ. ಸಿಲ್ಕ್ ಫ್ಯಾಕ್ಟರಿ ಹತ್ತಿರ, ಆಂಜನೇಯ ದೇವಸ್ಥಾನದ ಮುಂಭಾಗ ಎದುರುಗಡೆ ಎಡ ಭಾಗದ ರಸ್ತೆಯಲ್ಲಿ ಒಬ್ಬ ವ್ಯಕ್ತಿ ಮುಖ ಕೆಳಗೆ ಮಾಡಿಕೊಂಡು ಬಿದ್ದಿದ್ದ ಅಪರಿಚಿತ ವ್ಯಕ್ತಿಯನ್ನು ಅಂಬುಲೆನ್ಸ್‌ನಲ್ಲಿ, ಕೆ.ಆರ್. ಆಸ್ಪತ್ರೆಗೆ ದಾಖಲಿಸಿದ್ದು,

ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಪ್ರಕರಣ ಕೆ.ಆರ್ ಸಂಚಾರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

**ಚಹರೆ:** ವಯಸ್ಸು ಸುಮಾರು 35 ರಿಂದ 45 ವರ್ಷ, 5.6 ಅಡಿ ಎತ್ತರ, ಕೋಲು ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ, ಕಪ್ಪು ತಲೆ ಕೂದಲು ಮೀಸೆ ಕುರುಚಲು ಗಡ್ಡ ಇರುತ್ತದೆ. ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಕಪ್ಪು ಮತ್ತು ಕೆಂಪು ಬಣ್ಣದ ಟೀ ಶರ್ಟ್ ಧರಿಸಿರುತ್ತಾರೆ. ಬಲ ಎದೆಯ ಮೇಲೆ ಸಾಕಮ್ಮ, ಅಂಬಿಕಾ, ಸುನಿತಾ, ನಿಮಿ, ಸವಿತಾ, ಚಿನ್ನಿ ಎಂಬ ಹಸಿರು ಬಣ್ಣದ ಕನ್ನಡ ಅಕ್ಷರದ ಹಚ್ಚೆ ಇದೆ ಹಾಗೂ ಬಲ ಕೈ ನಲ್ಲಿ ಖಒಖಒಖಏಖಂಐಖ ಎಂಬ ಹಸಿರು ಬಣ್ಣದ ಇಂಗ್ಲಿಷ್ ಅಕ್ಷರದ ಹಚ್ಚೆ ಇರುತ್ತದೆ. ಎಡ ಕುತ್ತಿಗೆ ಬಳಿ ಸಾಸಿವೆ ಗಾತ್ರದ ಕಪ್ಪು ಬಣ್ಣದ ಕಾರಳ್ಳು ಇದ್ದು, ಎಡ ಕೈ ನ ಕಿರು ಬೆರಳು ಕಟ್ ಆಗಿರುತ್ತದೆ,

ಮೃತನ ವಾರಸುದಾರರ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆ ಫೋನ್ ನಂಬರ್ 0821–2418330, 9480802249, ಅಥವಾ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ನಂ 0821 2418339 ನ್ನು ಸಂಪರ್ಕಿಸಬಹುದೆಂದು ಕೆ.ಆರ್.ಸಂಚಾರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ. –2026 ರವರಿಗೆ ಗೃಹ ಲಕ್ಷ್ಮಿ ಹಣ ಪಾವತಿ: ಚಿಕ್ಕಲಿಂಗಯ್ಯ

## ಯುವನಿಧಿ ಯೋಜನೆ ಕುರಿತು ಕಾಲೇಜು ಹಂತದಲ್ಲಿ ಅರಿವು ಮೂಡಿಸಿ

**ಮಂಡ್ಯ:** ಗೃಹ ಲಕ್ಷ್ಮೀ ಯೋಜನೆಯಡಿಯಲ್ಲಿ ಗೃಹಲಕ್ಷ್ಮಿ ಹಣವನ್ನು ಫೆಬ್ರವರಿ ವರಿಗೆ ಫಲಾನುಭವಿಗಳಿಗೆ ಹಣವನ್ನು ಪಾವತಿಸಲಾಗಿದ್ದು, ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣ ಪಾವತಿಗಾಗಿ ಖಜಾನೆಗೆ ಬಿಲ್ ಅನ್ನು ಸಲ್ಲಿಸಿದ್ದು ಮುಂದಿನ 2 ದಿನಗಳಲ್ಲಿ ಫಲಾನುಭವಿಗಳ ಖಾತೆಗೆ ಪಾವತಿಸಲಾಗುವುದು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ಚಿಕ್ಕಲಿಂಗಯ್ಯರವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಅನ್ನಭಾಗ್ಯ ಯೋಜನೆಯಡಿ ನ್ಯಾಯ ಬೆಲೆ ಅಂಗಡಿಗಳಲ್ಲಿ ಕಾಳ ಸಂತೆಯಲ್ಲಿ ಅಕ್ಕಿ ಮಾರಾಟ ಮಾಡುವವರ ಮೇಲೆ ಕ್ರಮ ವಹಿಸಬೇಕು ಹಾಗೂ ಕಾಳ ಸಂತೆಯಲ್ಲಿ ಮಾರಾಟ ಮಾಡುವುದು ಕಾನೂನು ಅಪರಾಧ ಎಂಬ ಬಗ್ಗೆ ಅರಿವು ಮೂಡಿಸಬೇಕು ಹಾಗೂ ಈ ಸಂಬಂಧ ಕಾನೂನು ಕಾಯಿದೆಯ ಬಗ್ಗೆ ನಾಮಫಲಕಗಳಲ್ಲಿ ಅಳವಡಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.




ಅನ್ನಭಾಗ್ಯ ಯೋಜನೆಯಡಿ ಫೆಬ್ರವರಿ 2025 ರಿಂದ ಏಪ್ರಿಲ್ 2026 ರವರೆಗೆ 10,75,910 ಕ್ವಿಂ ಅಕ್ಕಿಯನ್ನು ಅನ್ನ ಭಾಗ್ಯ ಯೋಜನೆಯ ಡಿ ಹಂಚಿಕೆ ಮಾಡಲಾಗುತ್ತಿದೆ ಹಾಗೂ ಅಕ್ಕಿಯ ಗುಣಮಟ್ಟವನ್ನು ಪರಿಶೀಲನೆ ಮಾಡಿ ಫಲನುಭವಿಗಳಿಗೆ ವಿತರಿಸುವಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಕೆ ಹನುಮಂತಯ್ಯ ರವರು ಮಾತನಾಡಿ ಅನ್ನ ಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ ಎ.ಪಿ.ಎಲ್. ನಿಂದ ಬಿ.ಪಿ.ಎಲ್. ಗೆ ಪರಿವರ್ತಿಸಲು ಜಿಲ್ಲೆಯಲ್ಲಿ ಒಟ್ಟು 718 ಪಡಿತರ ಅರ್ಜಿ ಬಂದಿದ್ದು ಎಪಿಎಲ್ ನಿಂದ ಬಿಪಿಎಲ್ ಗೆ 437 ಪಡಿತರ ಚೀಟಿಗಳನ್ನು ಪರಿವರ್ತಿಸಲಾಗಿದೆ. ಹಾಗೂ 281 ಪಡಿತರ ಚೀಟಿಗಳು ಬಾಕಿ ಉಳಿದಿದ್ದು ಮುಂದಿನ ದಿನಗಳಲ್ಲಿ ಫಲಾನುಭವಿಗಳ ದಾಖಲೆಗಳನ್ನು ಪರಿಶೀಲಿಸಿ ಬಿಪಿಎಲ್ ಗೆ ಪರಿವರ್ತಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಶಿವಣ್ಣ ರವರು ಮಾತನಾಡಿ ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಜೂನ್ 2025 ರಿಂದ ಏಪ್ರಿಲ್ 2026 ರ ವರೆಗೆ ಒಟ್ಟು 21,01,53,013 ಮಹಿಳೆಯರು ಪ್ರಯಾಣಿಸಿದ್ದು 583,44,74,314 ರೂ ಸಾರಿಗೆ ಇಲಾಖೆಗೆ ಆದಾಯವಾಗಿದೆ ಎಂದು ತಿಳಿಸಿದರು. ಹಾಗೂ ಮಂಡ್ಯ ಜಿಲ್ಲೆಯಲ್ಲಿ ಕೆ.ಎಸ್ ಆರ್ ಟಿ ಸಿ ವಾಹನ ಚಾಲಕರು ಹಾಗೂ ಕಂಡಕ್ಟರ್ ಗಳು ಬಸ್ಸಿನಲ್ಲಿ ಪ್ರಯಾಣಿಸುವವರನ್ನು ಅತ್ಯಂತ ಸೌಜನ್ಯದಿಂದ ಮಾತನಾಡಿಸಿ ವರ್ತಿಸುವ ಬಗ್ಗೆ ತಿಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಯುವನಿಧಿ ಯೋಜನೆ ಕುರಿತು ಎಲ್ಲಾ ಕಾಲೇಜು ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಯೋಜನೆ ಕುರಿತು ಅರಿವು ಕಾರ್ಯಕ್ರಮ ಮಾಡಬೇಕು ಹಾಗೂ ಯೋಜನೆ ಕುರಿತು ಶಾಲಾ ಕಾಲೇಜು ಸುತ್ತಮುತ್ತ ನಾಮಫಲಕಗಳನ್ನು ಅಳವಡಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಧನುಷ್, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ನವೀನ್ ಕುಮಾರ್ ಹಾಗೂ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳು ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಕುಡಿಯುವ ನೀರಿನ ಸಂಬಂಧ ಸಾರ್ವಜನಿಕರಿಂದ ಅಹವಾಲುಗಳು ಆಲಿಕೆ

**ಚಾಮರಾಜನಗರ:** ಪಶುಸಂಗೋಪನೆ, ರೇಷ್ಮೆ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಕುಡಿಯುವ ನೀರಿನ ಸಂಬಂಧ ಚಾಮರಾಜನಗರ ಪಟ್ಟಣದ ವಿವಿಧ ವಾರ್ಡ್‌ಗಳಿಗೆ ಇಂದು ಭೇಟಿ ನೀಡಿ ಸಾರ್ವಜನಿಕರಿಂದ ಸಮಸ್ಯೆ, ಅಹವಾಲುಗಳನ್ನು ಸ್ವೀಕರಿಸಿದರು.



ಇಂದು ಬೆಳಿಗ್ಗೆಯೇ ಚಾಮರಾಜನಗರಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಎಂ.ಎಸ್.ಐ.ಎಲ್ ಅಧ್ಯಕ್ಷ ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಹಾಗೂ ಅಧಿಕಾರಿಗಳೊಂದಿಗೆ ಪಟ್ಟಣದ 1ನೇ ವಾರ್ಡಿನ ಸೋಮವಾರಪೇಟೆ ಹಾಗೂ 2ನೇ ವಾರ್ಡಿನ ಗಾಳೀಪುರ ಬಡಾವಣೆಗಳಿಗೆ ಭೇಟಿಕೊಟ್ಟು ಕುಡಿಯುವ ನೀರಿನ ಪೂರೈಕೆ ಕುರಿತು ಜನರ ಕುಂದುಕೊರತೆಗಳನ್ನು ಆಲಿಸಿದರು.

ಮೊದಲಿಗೆ ಒಂದನೇ ವಾರ್ಡಿನ ಸೋಮವಾರಪೇಟೆ ಬಡಾವಣೆಯ ಹೊರಭಾಗದಲ್ಲಿರುವ ಹಂದಿಜೋಗಿ ಕಾಲೋನಿಗೆ ಸಚಿವರು ಭೇಟಿ ನೀಡಿದರು. ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿದೆಯೇ, ಏನಾದರೂ ಸಮಸ್ಯೆ ಇದೆಯೇ ಎಂದು ಸಚಿವರು ಅಲ್ಲಿನ ನಿವಾಸಿಗಳನ್ನು ವಿಚಾರಿಸಿದರು.

ಕುಡಿಯುವ ನೀರು ನಿಯಮಿತವಾಗಿ ಪೂರೈಕೆಯಾಗುತ್ತಿಲ್ಲ. ನಗರಸಭೆಯಿಂದ ಟ್ಯಾಂಕರ್ ಮೂಲಕ ಆಗಾಗ್ಗೆ ನೀರು ಕೊಡುತ್ತಿದ್ದಾರೆ. ಅದು ಸಾಕಾಗುತ್ತಿಲ್ಲ, ಅಲ್ಲದೆ ಖಾಸಗಿಯವರು ನಾವು ವಾಸಿಸುತ್ತಿರುವ ಜಾಗವನ್ನು ತೆರವುಗೊಳಿಸುವಂತೆ ಒತ್ತಡ ಹೇರುತ್ತಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕಾಗಿದೆ, ನಮಗೆ ಮನೆಗಳ ಅವಶ್ಯವಿದೆ ಎಂದು ಮನವರಿಕೆ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಜನರಿಗೆ ಆದ್ಯತೆ ಮೇರೆಗೆ ಕುಡಿಯುವ ನೀರು ಒದಗಿಸಬೇಕು. ಕುಡಿಯುವ ನೀರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅಗತ್ಯವಿದ್ದರೆ ಟ್ಯಾಂಕರ್ ಮೂಲಕ ಸಮರ್ಪಕವಾಗಿ ನೀರು ಪೂರೈಕೆ ಮಾಡುವಂತೆ ಸ್ಥಳದಲ್ಲಿಯೇ ಇದ್ದ ನಗರಸಭೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚಿಸಿದರು.

ಇದೇ ವೇಳೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಕುಡಿಯುವ ನೀರಿನ ಸಮಸ್ಯೆ ಎದುರಾದಲ್ಲಿ ತಕ್ಷಣವೇ ಸ್ಪಂದಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಹಂದಿಜೋಗಿ ಸಮುದಾಯದ ಜನರಿಗೆ ಮನೆಗಳನ್ನು ನೀಡಲು ಉತ್ತುವಳ್ಳಿ ಗ್ರಾಮದಲ್ಲಿ ಜಾಗ ಗುರುತಿಸಲಾಗಿದೆ. ಇಲ್ಲಿನ ನಿವಾಸಿಗಳನ್ನು ಸದ್ಯದಲ್ಲಿಯೇ ನಿಗದಿತ ಜಾಗಕ್ಕೆ ಸ್ಥಳಾಂತರ ಮಾಡಲು ಕ್ರಮ ವಹಿಸಲಾಗುತ್ತದೆ ಎಂದು ಸಚಿವರಿಗೆ ತಿಳಿಸಿದರು.

ಬಳಿಕ ಸೋಮವಾರಪೇಟೆ ಹಾಗೂ ಗಾಳೀಪುರ ಬಡಾವಣೆಗೆ ಆಗಮಿಸಿದ ಉಸ್ತುವಾರಿ ಸಚಿವರು ಅಲ್ಲಿಯೂ ಕುಡಿಯುವ ನೀರು ಸಮಸ್ಯೆ ಕುರಿತು ಜನರೊಂದಿಗೆ ಮಾತನಾಡಿ ಅಹವಾಲುಗಳನ್ನು ಆಲಿಸಿದರು. ಕುಡಿಯುವ ನೀರು ಮೂರು ದಿನಗಳಿಗೊಮ್ಮೆ ಸರಬರಾಜು ಆಗುತ್ತಿದೆ. ಹೆಚ್ಚುವರಿ ಬೋರ್‌ವೆಲ್ ಕೊರೆಸಬೇಕು, ಕಸ ಸಂಗ್ರಹಣೆ ವಾಹನ ವಾರಕ್ಕೊಮ್ಮೆಯಾದರೂ ಬರಬೇಕು, ಚರಂಡಿಗಳು ಸ್ವಚ್ಚತೆಯಿಲ್ಲದೆ ದುರ್ವಾಸನೆಯಿಂದ ಕೂಡಿವೆ. ಅದನ್ನು ಸರಿಪಡಿಸುವಂತೆ ಬಡಾವಣೆಗೆ ನಿವಾಸಿಗಳು ಸಚಿವರಿಗೆ ಮನವಿ ಮಾಡಿದರು.

ಜನ–ಜಾನುವಾರುಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಅಧಿಕಾರಿಗಳು ಮುಂದಾಗಬೇಕು. ಕುಡಿಯುವ ನೀರಿನ ಸಮಸ್ಯೆ, ದೂರುಗಳು ಜನರಿಂದ ಬಾರದಂತೆ ಸೂಕ್ತ ಕ್ರಮ ವಹಿಸಬೇಕು. ಬಡಾವಣೆಗಳು ಸ್ವಚ್ಚತೆಗೆ ಗಮನ ಹರಿಸುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ನಗರಾಭಿವೃದ್ಧಿ ಕೋಶ ಯೋಜನಾ ನಿರ್ದೇಶಕ ವೆಂಕಟೇಶ್, ನಗರಸಭೆ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ್, ಇತರರು ಇದೇ ಸಂದರ್ಭದಲ್ಲಿ ಇದ್ದರು.




## ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಹುಟ್ಟುಹಬ್ಬ: ರಾಮನಗರದಲ್ಲಿ ಜೆಡಿಎಸ್ ಕಾರ್ಯಕರ್ತರ ಸಂಭ್ರಮ

**ರಾಮನಗರ:** ನಗರದೇವತೆ ಶ್ರೀ ಚಾಮುಂಡೇಶ್ವರಿ ಸಮ್ಮನವಿಗೆ ವಿಶೇಷ ಪೂಜಾ ಸೇವೆ ಹಮ್ಮಿಕೊಳ್ಳುವುದರ ಮೂಲಕ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ 94ನೇ ವರ್?ದ ಹುಟ್ಟುಹಬ್ಬವನ್ನು ಆಚರಿಸಿದರು. ತದನಂತರ ದೇವಾಲಯದ ಮುಂಭಾಗ 101 ಈಡುಗಾಯಿ ಒಡೆದು ತಮ್ಮ ನಾಯಕನಿಗೆ ಶುಭ ಹಾರೈಸಿ, ಅವರ ಆರೋಗ್ಯ ಮತ್ತು ಆಯಸ್ಸಿಗೆ ಪ್ರಾರ್ಥಿಸಿದರು.

ಬಳಿಕ ಜೆಡಿಎಸ್ ಕಚೇರಿಯಲ್ಲಿ ಕೇಕ್ ಕತ್ತರಿಸಿ ಸಂಭ್ರಮಿಸಿದರು. ಈ ವೇಳೆ ಮಾತನಾಡಿದ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಇಂದು ನಮ್ಮ ಪಕ್ಷದ ವರಿಷ್ಟ ನಾಯಕ, ರಾಜಕೀಯ ರಂಗದ ಭೀ?ಕನ್ನಡಿಗರ ಅಸ್ಮಿತೆ ದೇವೇಗೌಡರು ದೇವೇಗೌಡರು ಶತಾಯುಷಿಗಳಾಗಿ, ಆರೋಗ್ಯವಂತ ಜೀವನ ನಡೆಸುವ ಶಕ್ತಿಯನ್ನು ದೇವಿಯು ನೀಡಲಿ ಎಂದು ವಿಶೇಷ ಪೂಜೆ ಸಲ್ಲಿಸುವ ಜೊತೆಗೆ ಅರ್ಥಪೂರ್ಣವಾಗಿ ಹೆಚ್ಚಿಡಿ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ ಎಂದರು. ದೇವೇಗೌಡರು ದೇಶದ ರಾಜಕೀಯ ಇತಿಹಾಸದಲ್ಲಿ ವಿಶಿ?ಛಾಪು ಮೂಡಿಸಿದ ನಾಯಕ. ಮಹಿಳೆಯರು, ರೈತರು, ಕಾರ್ಮಿಕರು ಸೇರಿದಂತೆ ಶ್ರಮಿಕ ವರ್ಗದ ಪರ ಚಿಂತನೆಗಳ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದ್ದರು. ಅಲ್ಪಸಂಖ್ಯಾತ, ಹಿಂದುಳಿದ ವರ್ಗ, ದಲಿತರು, ಮಹಿಳೆಯರು ಹೀಗೆ ಎಲ್ಲರಿಗೂ ಅನುಕೂಲವಾಗುವಂತೆ ಮೀಸಲಾತಿಯನ್ನು ಜಾರಿಗೆ ತಂದಿದ್ದರು. ಅವರ ಸರಳತೆ ಮತ್ತು ಜನಪರ ಆಡಳಿತ ಇಂದಿಗೂ ಅನೇಕರಿಗೆ ಪ್ರೇರಣೆ ಎಂದು ಹೇಳಿದರು.

## ಜನ್ನೂರಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ 20ಲಕ್ಷ ರೂ. ಅನುದಾನ: ಎ.ಆರ್.ಕೃಷ್ಣಮೂರ್ತಿ

**ಚಾಮರಾಜನಗರ:** ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಶಾಸಕರ ಅನುದಾನದಲ್ಲಿ 20 ಲಕ್ಷ ರೂ. ನೀಡುವುದಾಗಿ ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.



ತಾಲೂಕಿನ ಜನ್ನೂರು ಗ್ರಾಮದಲ್ಲಿ ವಿಶ್ವ ರತ್ನ, ವಿಶ್ವಜ್ಞಾನಿ, ಸಂವಿಧಾನ ಶಿಲ್ಪಿ, ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಪ್ರಯುಕ್ತ ನಡೆದ ಭೀಮೋತ್ಸವ –2026 ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕ್ಷೇತ್ರದ ಶಾಸಕನಾಗಿ ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿಗೆ ವಿಶೇಷ ಅನುದಾನದ ಜೊತೆಗೆ ಗ್ರಾಮಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಬದ್ದನಾಗಿದ್ದೇವೆ. ಅದೇ ರೀತಿ ಜನ್ನೂರು ಗ್ರಾಮದಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 1.75 ಕೋಟಿ ರೂ.ಗಳನ್ನು ನೀಡಿದ್ದೇವೆ. ನಮ್ಮ ತಂದೆ ಬಿ. ರಾಚಯ್ಯ ಅವರು ಈ ಹಿಂದೆ ಈ ಗ್ರಾಮದಲ್ಲಿ ನಿವೇಶನ ನೀಡಿದ್ದರು. ನಾನು ಶಾಸಕನಾಗಿ ಈ ಬಡಾವಣೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿದ್ದೇವೆ. ಅದೇ ರೀತಿ ಈ ಗ್ರಾಮದ ಕೆರೆಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಗ್ರಾಮಸ್ಥರ ಮನವಿಯಂತೆ ಅಂಬೇಡ್ಕರ್ ಭವನ ನಿರ್ಮಾಣಕ್ಕೆ 20 ಲಕ್ಷ ರೂ. ನೀಡುತ್ತೇನೆ. ಇನ್ನುಳಿದ ಅನುದಾನವನ್ನು ಸಮಾಜ ಕಲ್ಯಾಣ ಸಚಿವರು ಸಂಸದರಿಂದ ಬಿಡುಗಡೆ ಮಾಡಿಸಿಕೊಂಡು, ಸುಸಜ್ಜಿತವಾದ ಭವನವನ್ನು ನಿರ್ಮಿಸಿಕೊಳ್ಳಿ ಎಂದು ಕೃಷ್ಣಮೂರ್ತಿ ತಿಳಿಸಿದರು.

**ಅಂಬೇಡ್ಕರ್ ವಿಶ್ವ ಜ್ಞಾನಿ :** ಸ್ವಾತಂತ್ರ್ಯದ ನಂತರ ಸರ್ವ ಶ್ರೇಷ್ಟವಾದ ಸಂವಿಧಾನವನ್ನು ಭಾರತಕ್ಕೆ ನೀಡುವ ಜೊತೆಗೆ ಕಳೆದ 77 ವರ್ಷಗಳಿಂದ ಪ್ರಬುದ್ದ ಭಾರತ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.ಹೀಗಾಗಿ ಅಂಬೇಡ್ಕರ್ ವಿಶ್ವ ಜ್ಞಾನಿಯಾಗಿದ್ದಾರೆ ಎಂದು ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಸರ್ವವರಿಗೂ ಸಮ ಬಾಳ್ವೆಯನ್ನು ನೀಡುವ ಜೊತೆಗೆ ನೆಮ್ಮದಿಯಿಂದ ಜೀವನ ಮಾಡಲು ಸಂವಿಧಾನ ಕಾರಣವಾಗಿದೆ. ಪ್ರತಿ ಗ್ರಾಮಗಳಲ್ಲಿ ಕಳೆದ ಒಂದು ತಿಂಗಳುಗಳಿಂದ ಅಂಬೇಡ್ಕರ್ ಜಯಂತಿಯನ್ನು ಆಚರಿಸಲಾಗುತ್ತದೆ. ಸ್ವಾಭಿಮಾನದಿಂದ ನಡೆಯುವ ಜಯಂತಿ ಕಾರ್ಯಕ್ರಮಗಳು ನಮ್ಮ ಬದುಕಿಗೆ ಸ್ಪೂರ್ತಿಯಾಗಬೇಕು. ಅವರ ಸ್ಮರಣೆಯೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಶ್ರಮ ಇರಬೇಕು. ಇಂಥ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಅವರ ಸಾಧನೆಗೆ ಪ್ರೋತ್ಸಾಹಿಸುವ ಕೆಲಸವಾಗಬೇಕಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬುದ್ದ, ಬಸವ ಅಂಬೇಡ್ಕರ್ ಅವರ ಭಾವಚಿತ್ರವನ್ನು ಒಂದೆಕಡೆ ಇಟ್ಟು ಪುಷ್ಪ ನಮನ ಸಲ್ಲಿಸಿದ ಗ್ರಾಮಸ್ಥರ ಪ್ರೌಡಿಮೆ ಮೆಚ್ಚುವಂತಾಗಿದೆ. ಜಗ್ಗಹಳ್ಳಿಯಲ್ಲಿ ಎಲ್ಲಾ ಜಾತಿಯ ಜನರು ಸೇರಿ ಅಂಬೇಡ್ಕರ್ ಅವರ ಪುತ್ಥಳಿಯನ್ನು ನಿರ್ಮಾಣ ಮಾಡಿ, ಹಬ್ಬದ ಮಾದರಿಯಲ್ಲಿ ಎಲ್ಲರು ಸಮಾಜದವರು ಸೇರಿ ಅಚರಣೆ ಮಾಡಿದರು. ಇದೊಂದು ಮೆಚ್ಚುಗೆ ಕಾರ್ಯವಾಗಿದೆ. ಹೀಗಾಗಿ ಅಂಬೇಡ್ಕರ್ ಒಂದು ಜಾತಿಯ ನಾಯಕರಲ್ಲ. ಎಲ್ಲಾ ವರ್ಗದವರಿಗೂ ಸಂವಿಧಾನವನ್ನು ನೀಡಿ, ಎಲ್ಲರಿಗೂ ಸಮಾನವಾದ ಅವಕಾಶ ನೀಡಿದ್ದಾರೆ. ಇಂಥ ಮಹಾಪುರುಷರ ಜಯಂತಿ ಎಲ್ಲ ವರ್ಗದವರು ಸ್ವಾಭಿಮಾನದ ದಿನವಾಗಿ ಆಚರಣೆ ಮಾಡುವಂತಹ ವಾತಾವರಣ ನಿರ್ಮಾಣ ಮಾಡಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ತೀ. ನರಸೀಪುರದ ನಳಂದ ಬುದ್ದ ವಿಹಾರದ ಪೂಜ್ಯ ಬೋಧಿರತ್ನ ಬಂತೇಜಿ ಅವರು ಮಾತನಾಡಿ, ಅಂಬೇಡ್ಕರ್ ಅವರು ಕೊನೆಯ ದಿನಗಳಲ್ಲಿ ಭೌದ್ದ ಧರ್ಮವನ್ನು ಸ್ವೀಕಾರ ಮಾಡಿದರು. ಅಲ್ಲದೇ ಅವರು ನನ್ನ ಜನರು ಸಹ ಭೌದ್ದ ಧರ್ಮದತ್ತ ಸಾಗಿ ಸಮಾನತೆಯನ್ನು ಹೊಂದಬೇಕು. ಸ್ವಾಭಿಮಾನದ ಜೀವನ ನಡೆಸುವಂತಾಗಬೇಕು ಎಂಬ ಆಶಯವನ್ನು ಹೊಂದಿದ್ದರು. ಹೀಗಾಗಿ ತಾವೆಲ್ಲರು ಜಾತಿ ವ್ಯವಸ್ಥೆ, ಕಂದಾಚಾರ ಹಾಗೂ ಅನಿಷ್ಠ ಪದ್ದತಿಗಳನ್ನು ಬಿಟ್ಟು ಅಂಬೇಡ್ಕರ್ ಅವರ ಹಾದಿಯಲ್ಲಿ ಸಾಗಬೇಕು ಎಂದರು.

ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಬಿಪಿನ್ ನಾಗರಾಜು ಅವರು ಮುಖ್ಯ ಭಾಷಣ ಮಾಡಿ, ದೇಶಕ್ಕೆ ಸರ್ವ ಶ್ರೇಷ್ಟವಾದ ಸಂವಿಧಾನ ನೀಡಿದ ಅಂಬೇಡ್ಕರ್ ಅವರು ನಮಗೆ ಮೊದಲ ದೇವರು. ಅವರ ತತ್ವ ಸಿದ್ದಾಂತಗಳನ್ನು ಓದಿಕೊಮಡು ಅದರಂತೆ ನಡೆದುಕೊಂಡರು ಜೀವನದಲ್ಲಿ ಉನ್ನತ ಮಟ್ಟಕ್ಕೆ ಸಾಗಲು ಸಾಧ್ಯವಿದೆ. ಮೌಢ್ಯ ಮತ್ತು ಮದ್ಯಪಾನವನ್ನು ತ್ಯಜಿಸಿ, ಸಮೃದ್ದ ಭಾರತ ನಿರ್ಮಾಣ ಮಾಡಲು ಎಲ್ಲರು ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ಹೆಚ್ಚು ಅಂಕ ಪಡೆದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ಅಧಿಕಾರಿಗಳನ್ನು ಗೌರವಿಸಲಾಯಿತು. ವೇದಿಕೆಯಲ್ಲಿ ಚಾಮುಲ್ ನಿರ್ದೇಶಕ ಕಮರವಾಡಿ ರೇವಣ್ಣ, ಮುಖಂಡರಾದ ಗೋವಿಂದರಾಜು, ಮಹದೇವಸ್ವಾಮಿ, ತಮ್ಮಣ್ಣ, ಗ್ರಾ.ಪಂ. ಮಾಜಿ ಅಧ್ಯಕ್ಷೆ ರತ್ನಮ್ಮ, ಪರಶಿವಮೂರ್ತಿ, ನಾಗಯ್ಯ, ಓಡಿಪಿ ನಾಗರಾಜು, ಅಬಕಾರಿ ಶಿವಣ್ಣ, ಜನ್ನೂರು ರೇವಣ್ಣ, ಶಿವು, ನಾಗರಾಜು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಮಂಡ್ಯ– ಮಳವಳ್ಳಿ ತಾಲೂಕಿಗೆ ಮೇ 21–22 ರಂದು ಉಪಲೋಕಾಯುಕ್ತರ ಭೇಟಿ

### ಸಂಬಂಧಿಸಿದ ದೂರುಗಳ ವಿಚಾರಣೆ ಹಾಗೂ ವಿಲೇವಾರಿ ಕಾರ್ಯಕ್ರಮ

**ಮಂಡ್ಯ:** ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು *ಮಂಡ್ಯ ಜಿಲ್ಲೆಗೆ ಮೇ 21 ಮತ್ತು 22 ರಂದು ಭೇಟಿ ನೀಡಲಿದ್ದಾರೆ

ಮಂಡ್ಯ ನಗರದ ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಈಗಾಗಲೇ ದಾಖಲಾಗಿರುವ ದೂರುಗಳ ವಿಚಾರಣೆ ಹಾಗೂ ವಿಲೇವಾರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಈ ಸಂದರ್ಭದಲ್ಲಿ ಮಂಡ್ಯ ಮತ್ತು ಮಳವಳ್ಳಿ ತಾಲ್ಲೂಕಿಗೆ ಸಂಬಂಧಿಸಿದ ದೂರುಗಳನ್ನು ಮಾತ್ರ ವಿಚಾರಣೆ ಇಟ್ಟುಕೊಳ್ಳಲಾಗಿದ್ದು, ಈಗಾಗಲೇ ಲೋಕಾಯುಕ್ತ ಕಛೇರಿಯಿಂದ ನೋಟೀಸ್ ಜಾರಿ ಮಾಡಲಾಗಿರುವ ದೂರುದಾರರು ಮಾತ್ರ ವಿಚಾರಣೆಗೆ ಹಾಜರಾಗಲು ಅವಕಾಶವಿರುತ್ತದೆ.

ಸಾರ್ವಜನಿಕರ ಹೊಸ ದೂರುಗಳನ್ನು ಈ ಸಂದರ್ಭದಲ್ಲಿ ಸ್ವೀಕರಿಸುವುದಿಲ್ಲ. ಯಾವುದೇ ದೂರುಗಳಿದ್ದಲ್ಲಿ ಸಾರ್ವಜನಿಕರು ಎಂದಿನಂತೆ ಪೊಲೀಸ್ ಅಧೀಕ್ಷಕರ ಕಛೇರಿ, ಕರ್ನಾಟಕ ಲೋಕಾಯುಕ್ತ, ಮಂಡ್ಯ ಇಲ್ಲಿ ನಿಗಧಿತ ನಮೂನೆಯಲ್ಲಿ ಸಲ್ಲಿಸಬಹುದಾಗಿರುತ್ತದೆ ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಎಸ್.ಸುರೇಶ್ ಬಾಬು ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




## ನಗರದ ಸ್ವಚ್ಛತೆಗಾಗಿ ಮೊದಲ ಆದ್ಯತೆ ನೀಡಬೇಕಾಗಿದೆ

**ನಂಜನಗೂಡು:** ನಗರದ ಸ್ವಚ್ಚತೆಗಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಉದ್ದೇಶದಿಂದ ಮ್ಯಾರಥಾನ್ ಸ್ಪರ್ಧೆಯನ್ನು ಆ ಯೋಜನೆ ಮಾಡಲಾಗಿದೆ. ನಗರದ ಸಾರ್ವಜನಿಕರು ಸ್ವಚ್ಚತೆಗೆ ಮೊದಲ ಆದ್ಯತೆ ನೀಡಿ ನಗರದ ಸ್ವಚ್ಚತೆಗೆ ಸಹಕರಿಸಬೇಕು ಎಂದು ಶಾಸಕ ದರ್ಶನ್ ದ್ರುವನಾರಾಯಣ್ ಕರೆ ನೀಡಿದರು.




ನಗರದ ಜೂನಿಯರ್ ಕಾಲೇಜು ಕ್ರೀಡಾಂಗಣದಲ್ಲಿ ಭಾನುವಾರ ನಗರಸಭಾ ವತಿಯಿಂದ ಆಯೋಜನೆ ಮಾಡಿದ್ದ ಓಡೋಣ ನಂಜನಗೂಡಿಗಾಗಿ, ಒಂದಾಗೋಣ ಸ್ವಚ್ಚತೆಗಾಗಿ ಎಂಬ ಶೀರ್ಷಿಕೆಯಲ್ಲಿ ಏರ್ಪಡಿಸಿದ್ದ ಮ್ಯಾರಥಾನ್ 2026 ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ನಂಜನಗೂಡು ನಗರ ದಿನೇ ದಿನೇ ವೇಗವಾಗಿ ಬೆಳೆಯುತ್ತಿದೆ. ನಗರದ ವ್ಯಾಪ್ತಿಯಲ್ಲಿ ಎಲ್ಲಿಂದರಲ್ಲಿ ಕಸ ಬಿಸಾಡುವುದು ಪ್ರತಿನಿತ್ಯ ಕಾಣುತ್ತೇವೆ. ಕಸದ ವಾಹನ ದಿನನಿತ್ಯ ಮನೆ ಬಾಗಿಲಿಗೆ ಬರುತ್ತಿದ್ದರು ಕೂಡ, ಪ್ಲಾಸ್ಟಿಕ್ ಕವರ್ ಗಳಲ್ಲಿ ಕಸವನ್ನು ಹಾಕಿಕೊಂಡು ನಾಲೆಗಳು, ಮುಖ್ಯ ರಸ್ತೆಯ ಹೊರಭಾಗಗಳಲ್ಲಿ ಎಲ್ಲಿಂದರಲ್ಲಿ ಬಿಸಾಡುವುದನ್ನು ತಪ್ಪಿಸಬೇಕಾಗಿದೆ. ಹಸಿ ಮತ್ತು ಒಣ ಕಸಗಳನ್ನ ಬೇರ್ಪಡಿಸಿ ವಾಹನಕ್ಕೆ ನೀಡಿ.

ನಗರದ ಪ್ರಮುಖ ಪ್ರವಾಸಿ ತಾಣ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಸ್ನಾನಘಟ್ಟದ ಬಳಿ ಹೊರಭಾಗದಿಂದ ಪ್ರವಾಸಿಗರು ಕಸಕಡ್ಡಿ ಸೇರಿದಂತೆ ಬಟ್ಟೆಗಳನ್ನ ಬಿಸಾಡಿ ಹೋಗುವುದು ಕಂಡುಬರುತ್ತದೆ. ಪ್ರವಾಸಿಗರಿಗೆ ನಗರದ ಸಾರ್ವಜನಿಕರು ಕೂಡ ಸರಿಯಾದ ಮಾಹಿತಿ ನೀಡಿ ನದಿಗೆ ಕಸಕಡ್ಡಿಗಳನ್ನ ಬಿಸಾಡದಂತೆ ಮನವರಿಕೆ ಮಾಡಬೇಕಾಗಿದೆ ಎಂದರು.

ಮ್ಯಾರಥಾನ್ ಹಿನ್ನೆಲೆ ಜೂನಿಯರ್ ಕಾಲೇಜು ಆವರಣದಿಂದ ಮಹಾತ್ಮ ಗಾಂಧಿ ರಸ್ತೆಯ ಮೂಲಕ ನಗರಸಭೆಗೆ ತಲುಪಿ, ರಾಷ್ಟ್ರಪತಿ ರಸ್ತೆ ಮೂಲಕ ಮತ್ತೆ ಜೂನಿಯರ್ ಕಾಲೇಜ್ ಆವರಣಕ್ಕೆ ವೇಗವಾಗಿ ಆಗಮಿಸುವ ಸ್ಪರ್ಧಿಗಳಿಗೆ ಪ್ರಥಮ, ದ್ವಿತೀಯ ಹಾಗೂ ತೃತಿಯ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ನಗರಸಭಾ ಆಯುಕ್ತ ಬಸವರಾಜು, ಡಿವೈಎಸ್ಪಿ ಧರ್ಮೇಂದ್ರ, ಕೃಷ್ಣಕಾಂತ ಕೋಳಿ, ಮಾಜಿ ಅಧ್ಯಕ್ಷ ಶ್ರೀಕಂಠ ಸ್ವಾಮಿ, ಗಾಯತ್ರಿ ಮೋಹನ್, ಮಂಜುನಾಥ್, ಕಮಲೇಶ್ ಸೇರಿದಂತೆ ನೂರಾರು ಸಂಖ್ಯೆಯ ಸ್ಪರ್ಧಿಗಳು ಹಾಗೂ ಮುಖಂಡರು, ನಗರಸಭಾ ಅಧಿಕಾರಿಗಳು ಹಾಜರಿದ್ದರು.

# ನಾಲೆಯಲ್ಲಿ ನೀರು ಹರಿಯುತ್ತಿದ್ದರು ತಾಲೂಕಿನ ಕೆರೆಕಟ್ಟೆಗಳಿಗಿಲ್ಲ ನೀರು

**ಕೆ.ಆರ್.ಪೇಟೆ:** ತಾಲೂಕು ರೈತಸಂಘದ ಸತತ ಹೋರಾಟದ ಫಲವಾಗಿ ಹಾಸನ ಜಿಲ್ಲೆ ಗೊರೂರಿನ ಹೇಮಾವತಿ ಜಲಾಶಯದಿಂದ ಹೇಮಾವತಿ ಎಡದಂಡೆ ನಾಲೆಗೆ ನೀರು ಬಿಟ್ಟಿದ್ದರೂ ಅದರ ಫಲ ಕೆ.ಆರ್.ಪೇಟೆ ತಾಲೂಕಿನ ರೈತ ಸಮುದಾಯಕ್ಕೆ ಇಲ್ಲದಂತಾಗಿದೆ.

ಪ್ರಸಕ್ತ ಹಂಗಾಮಿನಲ್ಲಿ ನಿರೀಕ್ಷಿತ ಮಳೆಯಾಗದ ಕಾರಣ ತಾಲೂಕಿನ ಕೆರೆ ಕಟ್ಟೆಗಳು ಒಣಗಿದ್ದು ಭೀಕರ ಬರದ ಛಾಯೆ ಕಾಣಿಸಿಕೊಂಡಿದೆ. ಕೆರೆಗಳಲ್ಲಿ ನೀರಿಲ್ಲದ ಕಾರಣ ಅಂತರ್ಜಲ ಮಟ್ಟವೂ ಕುಸಿದಿದ್ದು ಸಾವಿರಾರು ಕೊಳವೆ ಬಾವಿಗಳು ನೆಲಕಚ್ಚಿವೆ. ಅಳಿದುಳಿದ ಬೆಳೆಗಳ ಸಂರಕ್ಷಣೆ ಮತ್ತು ಕುಡಿಯುವ ನೀರಿನ ದಾಹ ತಣಿಸಲು ಹೇಮಾವತಿ ಎಡದಂಡೆ ನಾಲೆಯ ಮೂಲಕ ನೀರು ಹರಿಸುವಂತೆ ತಾಲೂಕು ರೈತಸಂಘ ಹೋರಾಟದ ಹಾದಿ ತುಳಿದಿತ್ತು. ತುಮಕೂರು ಭಾಗಕ್ಕೆ ಹೇಮೆಯ ನೀರು ಹರಿಸಿ ಮಂಡ್ಯ ಜಿಲ್ಲಾ ವ್ಯಾಪ್ತಿಯ ಪ್ರದೇಶಕ್ಕೆ ಹೇಮೆಯ ನೀರು ಹರಿಸದ ರಾಜ್ಯ ಸರ್ಕಾರದ ಮಲತಾಯಿ ಧೋರಣೆಯನ್ನು ರೈತ ಸಮುದಾಯ ಪ್ರಶ್ನಿಸಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿದಂತೆ ಮಂಡ್ಯ ಜಿಲ್ಲೆಯ ಹೇಮಾವತಿ ಜಲಾನಯನ ಪ್ರದೇಶದ ಜನಪ್ರತಿನಿಧಿಗಳನ್ನು ರೈತರ ಪರ ಧ್ವನಿಯೆತ್ತುವಂತೆ ಆಗ್ರಹಿಸಿದ್ದರು. ರೈತ ಹೋರಾಟದ ಫಲ ಎನ್ನುವಂತೆ ರಾಜ್ಯ ಸರ್ಕಾರ ಹೇಮಾವತಿ ಎಡದಂಡೆ ನಾಲೆಗೆ ನೀರು ಹರಿಸಿದೆ. ಆದರೆ ಹರಿಯುತ್ತಿರುವ ನೀರು ಕೆ.ಆರ್.ಪೇಟೆ ತಾಲೂಕಿನ ಕೆರೆ ಕಟ್ಟೆಗಳನ್ನು ತುಂಬಿಸುತ್ತಿಲ್ಲ. ತಮ್ಮ ಕಣ್ಣಮುಂದೆಯೇ ನೆರೆಯ ತಾಲೂಕಿಗಳಿಗೆ ಹರಿದು ಹೋಗುತ್ತಿರುವ ನೀರನ್ನು ಕಂಡು ರೈತರು ಸರ್ಕಾರದ ಧೋರಣೆಯ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ.

ಹೇಮಾವತಿ ಜಲಾಶಯದ ನಂ.03 ಉಪ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಜಯರಾಂ ಅವರು ನೀಡಿರುವ ಮಾಹಿತಿಯಂತೆ ಸರ್ಕಾರದ ಸೂಚನೆಯಂತೆ ಹೇಮಾವತಿ ಎಡದಂಡೆ ನಾಲೆಯ ಮೂಲಕ 500 ಕ್ಯೂಸೆಕ್ಸ್ ನೀರು ಬಿಟ್ಟಿದ್ದು ಇದರಿಂದ ಮೇಲುಕೋಟೆ ಕ್ಷೇತ್ರದ ತೊಣ್ಣೂರು ಕೆರೆ ಮತ್ತು ನಾಗಮಂಗಲ ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆ ಮಾಡುವ ಸೂಳೆ ಕೆರೆಯನ್ನು ಮಾತ್ರ ತುಂಬಿಸಲಾಗುವುದು. ಉಳಿದಂತೆ ಹೇಮಾವತಿ ವ್ಯಾಪ್ತಿಯ ಯಾವುದೇ ಕೆರೆಗಳನ್ನು



ತುಂಬಿಸುವುದಿಲ್ಲ. ಮೇ 19 ರ ಮಂಗಳವಾರದವರೆಗೆ ಮಾತ್ರ ಕಾಲುವೆಯಲ್ಲಿ ನೀರು ಹರಿಯಲಿದ್ದು ತೊಣ್ಣೂರು ಮತ್ತು ಸುಳೆಕೆರಗಳು ತುಂಬಿದ ತಕ್ಷಣವೇ ನಾಲೆಯ ನೀರನ್ನು ಬಂದ್ ಮಾಡುವುದಾಗಿ ತಿಳಿಸಿದ್ದಾರಲ್ಲದೆ ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಯಲ್ಲಿ ರೈತರು ಅಕ್ರಮವಾಗಿ ಕೆರೆಗಳಿಗೆ ನೀರು ಹರಿಸಿಕೊಳ್ಳುವುದನ್ನು ತಡೆಯಲು ಕಾಲುವೆ ಏರಿಯ ಮೇಲೆ ನಿರಂತರ ಬೀಟ್ ಆರಂಭಿಸಿದ್ದಾರೆ.

ಸೆಡ್ಡು ಹೊಡೆದ ರೈತರು: ತಾಲೂಕಿನ ಕೆರೆಕಟ್ಟೆಗಳಿಗೆ ನೀರು ಹರಿಸದೆ ನೆರೆಯ ತಾಲೂಕಿನ ಎರಡು ಕೆರೆಗಳಿಗೆ ಮಾತ್ರ ನೀರು ತುಂಬಿಸಲು ಮುಂದಾಗಿರುವ ನೀರಾವರಿ ಇಲಾಖೆಯ ಕಾರ್ಯಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ತಾಲೂಕಿನ ಸಿಂದಘಟ್ಟ ವ್ಯಾಪ್ತಿಯ ರೈತರು ಸಿಂಧಘಟ್ಟ ವ್ಯಾಪ್ತಿಯಲ್ಲಿ ಪ್ರತಿಭಟನಾತ್ಮಕವಾಗಿ ಕಾಲುವೆ ತೂಬು ಎತ್ತಿ ವಿತರಣಾ ನಾಲೆಯ ಮೂಲಕ ಸಿಂದಘಟ್ಟ ಕೆರೆಗೆ ನೀರು ಬಿಟ್ಟಿದ್ದಾರೆ. ಕೆ.ಆರ್.ಪೇಟೆ ತಾಲೂಕಿನ ರೈತರ ಬಗ್ಗೆ ಮಲತಾಯಿ ಧೋರಣೆ ಪ್ರದರ್ಶಿಸಿರುವ ನೀರಾವರಿ ಇಲಾಖೆಯ ಕ್ರಮವನ್ನು ರೈತಮುಖಂಡ ಸಿಂದಘಟ್ಟ ಮುದ್ದುಕುಮಾರ್ ಖಂಡಿಸಿದ್ದು ತಕ್ಷಣವೇ ತಾಲೂಕಿನ ಎಲ್ಲಾ ಕೆರೆ ಕಟ್ಟೆಗಳನ್ನು ಹೇಮೆಯ ನೀರಿನಿಂದ ತುಂಬಿಸದಿದ್ದರೆ ತಾಲೂಕಿನಾದ್ಯಂತ ರೈತರು ತಮ್ಮ ತಮ್ಮ ವ್ಯಾಪ್ತಿಯ ಕೆರೆಗಳ ತೂಬು ಎತ್ತಿ ಕೆರೆಗಳಿಗೆ ನೀರು ತುಂಬಿಸುವ ಹೋರಾಟ ಆರಂಭಿಸಲಿದ್ದಾರೆ. ಹೇಮೆಯ ನೀರಿನ ವಿಚಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಉದ್ದೇಶ ಪೂರ್ವಕವಾಗಿ ರಾಜಕೀಯ ಮಾಡಿದ್ದಾರೆ. ರೈತ ನಾಯಕ ದರ್ಶನ್ ಪುಟ್ಟಣ್ಣಯ್ಯ ಕೂಡ ತಮ್ಮ ಕ್ಷೇತ್ರ ವ್ಯಾಪ್ತಿಯ ತೊಣ್ಣೂರು ಕೆರೆಗೆ ಮಾತ್ರ ನೀರು ಬಿಡಿಸಿಕೊಂಡು ಕೆ.ಆರ್.ಪೇಟೆ ತಾಲೂಕಿನ ರೈತರ ಹಿತವನ್ನು ಮರೆತಿದ್ದಾರೆ. ರೈತರಿಗೆ ಯಾವುದೇ ಪಕ್ಷವಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರಿದ್ದಾರೆನ್ನುವ ಕಾರಣದಿಂದ ರಾಜಕೀಯ ಮಾಡದೆ ತಾಲೂಕಿನ ಕೆರೆ ಕಟ್ಟೆಗಳಿಗೂ ಹೇಮೆಯ ನೀರು ಹರಿಸಲು ಕ್ರಮ ವಹಿಸುವಂತೆ ಆಗ್ರಹಿಸಿದ್ದಾರೆ.

# ಮಾನವ ದೇಹ ಒಂದು ಅದ್ಭುತ ಎಂಜಿನಿಯರಿಂಗ್ ವಿನ್ಯಾಸ

ಮಾನವನ ದೇಹವು ಪ್ರಕೃತಿಯ ಒಂದು ಅದ್ಭುತ ಎಂಜಿನಿಯರಿಂಗ್ ವಿನ್ಯಾಸ. ಲಕ್ಷಾಂತರ ವರ್ಷಗಳ ವಿಕಾಸದ ಹಾದಿಯಲ್ಲಿ, ಮನುಷ್ಯನು ಕಾಡಿನಲ್ಲಿ ಬೇಟೆಯಾಡುತ್ತಾ, ಮೈಲುಗಟ್ಟಲೆ ಓಡುತ್ತಾ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾನೆ. ಈ ಪ್ರಕ್ರಿಯೆಯಲ್ಲಿ ಅವನ ದೇಹಕ್ಕೆ ದತ್ತವಾದ ಅತ್ಯಂತ ಪ್ರಮುಖ ರಕ್ಷಣಾ ಕವಚವೆಂದರೆ 'ಬೆವರುವಿಕೆ'. ಆದರೆ ಇಂದು, ನಾವು ಎಷ್ಟು "ನಾಗರಿಕ"ರಾಗಿದ್ದೇವೆಂದರೆ, ನಿಸರ್ಗ ನೀಡಿದ ಈ ಅದ್ಭುತ ವ್ಯವಸ್ಥೆಯನ್ನೇ 'ಅಸಹ್ಯ' ಎಂದು ಭಾವಿಸಿ ಅದನ್ನು ಕೊಲ್ಲುತ್ತಿದ್ದೇವೆ. , ಅದು ಇಂದಿನ ಅನಾರೋಗ್ಯಕರ ಸಮಾಜದ ಪ್ರತಿಬಿಂಬ.

1. ವಿಕಾಸದ ಹಾದಿಯಲ್ಲಿ ಬೆವರು: ನಾವೇಕೆ ಬೆವರುತ್ತೇವೆ? ಜೈವಿಕವಾಗಿ ನೋಡಿದರೆ, ಇತರ ಪ್ರಾಣಿಗಳಿಗಿಂತ ಮನುಷ್ಯ ಭಿನ್ನವಾಗಿರುವುದು ಅವನ ಬೆವರುವಿಕೆಯ ಸಾಮರ್ಥ್ಯದಿಂದ. ಹೆಚ್ಚಿನ ಪ್ರಾಣಿಗಳು ಬಾಯಿಯ ಮೂಲಕ ಅಥವಾ ನಾಲಿಗೆಯ ಮೂಲಕ ದೇಹದ ಉಷ್ಣತೆಯನ್ನು ಹೊರಹಾಕುತ್ತವೆ (ಉದಾಹರಣೆಗೆ ನಾಯಿ). ಆದರೆ ಮನುಷ್ಯನಿಗೆ ದೇಹದಾದ್ಯಂತ ಲಕ್ಷಾಂತರ ಬೆವರಿನ ಗ್ರಂಥಿಗಳಿವೆ (Eccrine Glands). ಇದು ನಮಗೆ ದೀರ್ಘಕಾಲದವರೆಗೆ ದೈಹಿಕ ಶ್ರಮ ಮಾಡಲು ಸಹಾಯ ಮಾಡುತ್ತದೆ. ನಮ್ಮ ಹಿರಿಯರು ಗಂಟೆಗಟ್ಟಲೆ ಬಿಸಿಲಿನಲ್ಲಿ ಕೆಲಸ ಮಾಡಬಲ್ಲವರಾಗಿದ್ದರು ಎಂದರೆ ಅದಕ್ಕೆ ಕಾರಣ ಅವರ ದೇಹವು ಬೆವರಿನ ಮೂಲಕ ನಿರಂತರವಾಗಿ ತಂಪಾಗುತ್ತಿತ್ತು. ಇಂದು ನಾವು ಆ 'ಕೂಲಿಂಗ್ ಸಿಸ್ಟಮ್' ಅನ್ನು ಸ್ವಿಚ್ ಆಫ್ ಮಾಡಿದ್ದೇವೆ.
2. ಸಾಂಸ್ಕೃತಿಕ ಹಿನ್ನೆಲೆ: ಬೆವರು ಮತ್ತು ಭವ್ಯ ಪರಂಪರೆ : ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಶ್ರಮಕ್ಕೆ ದೇವರ ಸ್ಥಾನವಿತ್ತು. ಹಿಂದಿನ ಕಾಲದ 'ಗರಡಿ ಮನೆ'ಗಳನ್ನು ನೆನಪಿಸಿಕೊಳ್ಳಿ. ಅಲ್ಲಿ ಯುವಕರು ಮಣ್ಣಿನಲ್ಲಿ ಕುಸ್ತಿ ಆಡುತ್ತಾ ಮೈಯೆಲ್ಲಾ ಬೆವರಿನಿಂದ ನೆನೆಯುತ್ತಿದ್ದರು. ಅಂದು ಬೆವರು ಸುರಿಸುವುದು ಪೌರುಷದ ಮತ್ತು ಆರೋಗ್ಯದ ಸಂಕೇತವಾಗಿತ್ತು. ರೈತರು ಹೊಲದಲ್ಲಿ ದುಡಿಯುವಾಗ, ಗೃಹಿಣಿಯರು ಬೀಸುವ ಕಲ್ಲಿನಲ್ಲಿ ಧಾನ್ಯ ಬೀಸುವಾಗ ಹರಿಯುತ್ತಿದ್ದ ಬೆವರು ಅವರ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತಿತ್ತು. ಅಂದು 'ಜಿಮ್' ಎಂಬ ಕೃತಕ ವ್ಯವಸ್ಥೆ ಇರಲಿಲ್ಲ; ಇಡೀ ಜೀವನವೇ ಒಂದು ವ್ಯಾಯಾಮಶಾಲೆಯಾಗಿತ್ತು.
3. ಆಧುನಿಕ ಜೀವನಶೈಲಿ: ಬೆವರನ್ನು ಅಡಗಿಸುವ ಪಿತೂರಿ : ಇಂದಿನ ತಲೆಮಾರು ಬೆವರನ್ನು ಒಂದು ಸಾಮಾಜಿಕ ಕಳಂಕದಂತೆ ನೋಡುತ್ತಿದೆ.

* **ಕೃತಕ ತಂಪು:** ಮನೆಯಿಂದ ಹೊರಬರುವ ಮೊದಲೇ ಎಸಿ ಆನ್ ಆಗುತ್ತದೆ. ಕಾರಿನ ಎಸಿ, ಆಫೀಸ್ ಎಸಿ, ಕೊನೆಗೆ ಮಾರುಕಟ್ಟೆಗೆ ಹೋದರೂ ಅಲ್ಲಿಯೂ ಎಸಿ. ಈ ನಿರಂತರ ಶೀತಲತೆಯು ದೇಹದ ನೈಸರ್ಗಿಕ ಉಷ್ಣತೆಯ ಏರಿಳಿತವನ್ನು ಸ್ಥಗಿತಗೊಳಿಸುತ್ತದೆ.
* **ಸೌಂದರ್ಯ ವರ್ಧಕಗಳ ಹಾವಳಿ:** ಮಾರುಕಟ್ಟೆಯಲ್ಲಿ ಸಿಗುವ 'ಆಂಟಿ-ಪರ್ಸ್ಪಿರಂಟ್' (Anti-perspirants) ಸ್ಪ್ರೇಗಳು ಬೆವರಿನ ರಂಧ್ರಗಳನ್ನು ಕೃತಕವಾಗಿ ಮುಚ್ಚುತ್ತವೆ. ಬೆವರಿನ ವಾಸನೆಯನ್ನು ತಡೆಯುವ ಹೆಸರಿನಲ್ಲಿ ನಾವು ದೇಹದ ಕಲ್ಮಶ ಹೊರಹೋಗುವ ದಾರಿಯನ್ನೇ ಬಂದ್ ಮಾಡುತ್ತಿದ್ದೇವೆ. ಇದು ಚರ್ಮದ ಕ್ಯಾನ್ಸರ್ ಮತ್ತು ಲಿಂಫ್ ನೋಡ್‌ಗಳ ಮೇಲೆ ಪರಿಣಾಮ ಬೀರಬಹುದು ಎಂದು ಸಂಶೋಧನೆಗಳು ಎಚ್ಚರಿಸುತ್ತಿವೆ.

4. ವೈದ್ಯಕೀಯ ದೃಷ್ಟಿಕೋನ: ಬೆವರು ಹರಿಯದಿದ್ದರೆ ಏನಾಗುತ್ತದೆ?




: ವೈದ್ಯಕೀಯವಾಗಿ ಬೆವರುವಿಕೆಯು ಕೇವಲ ನೀರನ್ನು ಹೊರಹಾಕುವುದಿಲ್ಲ. ಅದರೊಂದಿಗೆ ಯೂರಿಯಾ, ಉಪ್ಪು ಮತ್ತು ಅಮೋನಿಯಾ ಹೊರಹೋಗುತ್ತವೆ.

* **ಕಿಡ್ನಿಗಳ ಸಂಕಟ:** ದೇಹದ ತ್ಯಾಜ್ಯವನ್ನು ಹೊರಹಾಕುವ ಜವಾಬ್ದಾರಿ ಕಿಡ್ನಿ ಮತ್ತು ಚರ್ಮದ ಮೇಲಿರುತ್ತದೆ. ಚರ್ಮವು ತನ್ನ ಕೆಲಸ ಮಾಡದಿದ್ದಾಗ, ಕಿಡ್ನಿಗಳ ಮೇಲೆ ಅತಿಯಾದ ಒತ್ತಡ ಬೀಳುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರಲ್ಲಿ ಕಿಡ್ನಿ ಸ್ಟೋನ್ ಸಮಸ್ಯೆ ಹೆಚ್ಚಾಗಲು ಬೆವರು ಹರಿಯದಿರುವುದು ಮತ್ತು ಕಡಿಮೆ ನೀರು ಕುಡಿಯುವುದು ಪ್ರಮುಖ ಕಾರಣ.
* ಲಿಂಫಾಟಿಕ್ ಸಿಸ್ಟಮ್: ಬೆವರು ಹರಿಯುವುದರಿಂದ ನಮ್ಮ ದೇಹದ ಲಿಂಫಾಟಿಕ್ ದ್ರವದ ಸಂಚಲನ ಸುಗಮವಾಗುತ್ತದೆ. ಇದು ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ. ಬೆವರು ಹರಿಯದ ದೇಹವು ರೋಗಕಾರಕ ಬ್ಯಾಕ್ಟೀರಿಯಾಗಳಿಗೆ ಸುಲಭ ತಾಣವಾಗುತ್ತದೆ.

5. **ಮಾನಸಿಕ ಆರೋಗ್ಯ ಮತ್ತು ದೈಹಿಕ ಶ್ರಮ** : ಸಂಶೋಧನೆಗಳ ಪ್ರಕಾರ, ಯಾರು ದಿನಕ್ಕೆ ಕನಿಷ್ಠ 20 ನಿಮಿಷ ಬೆವರುವಂತೆ ವ್ಯಾಯಾಮ ಮಾಡುತ್ತಾರೋ ಅವರಲ್ಲಿ ಖಿನ್ನತೆ (Depression) ಮತ್ತು ಆತಂಕ (Anxiety) ಗಣನೀಯವಾಗಿ ಕಡಿಮೆ ಇರುತ್ತದೆ. ಬೆವರು ಹರಿದಾಗ ಮೆದುಳಿನಲ್ಲಿ 'ಡೋಪಮೈನ್' ಮತ್ತು 'ಸೆರೋಟೋನಿನ್' ಎಂಬ ಸಂತೋಷ ನೀಡುವ ಹಾರ್ಮೋನುಗಳು ಬಿಡುಗಡೆಯಾಗುತ್ತವೆ. ಇಂದಿನ ಯುವಜನತೆಯಲ್ಲಿ ಮಾನಸಿಕ ಅಸ್ಥಿರತೆ ಹೆಚ್ಚಾಗಲು ಅವರು ಬೆವರಿನ ಮೂಲಕ ದೈಹಿಕ ಒತ್ತಡವನ್ನು ಹೊರಹಾಕದಿರುವುದೇ ಕಾರಣ.
6. ಆಧುನಿಕ ಗೃಹ ನಿರ್ಮಾಣದ ದೋಷಗಳು: ನಮ್ಮ ಮನೆಗಳ ವಿನ್ಯಾಸ ಕೂಡ ಇಂದು ಬದಲಾಗಿದೆ. ಹಿಂದೆ ಮನೆಗಳಲ್ಲಿ ವಿಶಾಲವಾದ ಕಿಟಕಿಗಳು, ಅಂಗಳ ಮತ್ತು ಗಾಳಿ ಆಡುವಂತಹ ವ್ಯವಸ್ಥೆ ಇತ್ತು. ಇಂದು 'ಗ್ಲಾಸ್ ಬಿಲ್ಡಿಂಗ್' ಮತ್ತು ಸೀಮಿತ ಸ್ಥಳದ ಫ್ಲಾಟ್‌ಗಳಲ್ಲಿ ವಾಸಿಸುತ್ತಿದ್ದೇವೆ. ಇಲ್ಲಿ ನೈಸರ್ಗಿಕ ಗಾಳಿಗಿಂತ ಫ್ಯಾನ್ ಮತ್ತು ಎಸಿಗಳೇ ಪ್ರಧಾನ. ಈ ರೀತಿಯ ಕೃತಕ ವಾತಾವರಣವು ದೇಹದ ಚಯಾಪಚಯ ಕ್ರಿಯೆಯನ್ನು ಮಂದಗೊಳಿಸುತ್ತದೆ.
7. ಮಾರಕ ಕಾಯಿಲೆಗಳ ಮೂಲ: ಮಧುಮೇಹ ಮತ್ತು ಹೃದಯಾಘಾತ : ಬೆವರು ಹರಿಯದಿದ್ದರೆ ದೇಹದಲ್ಲಿ ಇನ್ಸುಲಿನ್ ಪ್ರತಿರೋಧ (Insulin Resistance) ಹೆಚ್ಚಾಗುತ್ತದೆ. ಇದು ಮಧುಮೇಹಕ್ಕೆ ನೇರ ದಾರಿ. ರಕ್ತದಲ್ಲಿನ ಸಕ್ಕರೆಯ ಅಂಶ ವ್ಯಯವಾಗಬೇಕೆಂದರೆ ದೇಹವು ಶ್ರಮ ಪಡಬೇಕು. ಬೆವರು ಹರಿಯುವಷ್ಟು ಶ್ರಮವಿಲ್ಲದಿದ್ದಾಗ ರಕ್ತನಾಳಗಳಲ್ಲಿ ಕೊಬ್ಬು (Cholesterol) ಶೇಖರಣೆಯಾಗಿ ಹೃದಯಾಘಾತದ ಅಪಾಯವನ್ನು ಹೆಚ್ಚಿಸುತ್ತದೆ. ಇಂದಿನ "ಸ್ಥೂಲಕಾಯ" (Obesity) ಎಂಬ ಸಾಂಕ್ರಾಮಿಕಕ್ಕೆ ಬೆವರದ ಜೀವನಶೈಲಿಯೇ ಮೂಲ.
8. **ನಾವು ಮಾಡಬೇಕಾದ ಬದಲಾವಣೆಗಳು:** ಒಂದು ಮಾರ್ಗದರ್ಶಿ :

* ನಡಿಗೆಯನ್ನು ಪ್ರೀತಿಸಿ: ಕನಿಷ್ಠ 2–3 ಕಿಲೋಮೀಟರ್ ವ್ಯಾಪ್ತಿಯ ಕೆಲಸಗಳಿಗೆ ವಾಹನ ಬಳಸಬೇಡಿ. ನಡಿಗೆಯಿಂದ ಹರಿಯುವ ಬೆವರು ನಿಮ್ಮ ಆಯುಷ್ಯವನ್ನು ಹೆಚ್ಚಿಸುತ್ತದೆ.
* ಮನೆಯ ಕೆಲಸಗಳಲ್ಲಿ ಪಾಲ್ಗೊಳ್ಳಿ: ಬಟ್ಟೆ ಒಗೆಯುವುದು, ನೆಲ ಒರೆಸುವುದು ಅಥವಾ ಗಿಡಗಳಿಗೆ ನೀರು ಹಾಕುವುದು – ಇವು ಕೇವಲ ಕೆಲಸಗಳಲ್ಲ, ಇವು ಉಚಿತ ವ್ಯಾಯಾಮಗಳು.
* ಯೋಗ ಮತ್ತು ಪ್ರಾಣಾಯಾಮ: ಯೋಗದ ವಿವಿಧ ಆಸನಗಳು ಆಂತರಿಕ ಅಂಗಗಳನ್ನು ಪ್ರಚೋದಿಸಿ ನೈಸರ್ಗಿಕವಾಗಿ ಬೆವರು ಬರುವಂತೆ ಮಾಡುತ್ತವೆ.
* ನೀರಿನ ಬಳಕೆ: ಬೆವರು ಹರಿಯಬೇಕೆಂದರೆ ದೇಹದಲ್ಲಿ ಸಾಕಷ್ಟು ನೀರಿರಬೇಕು. ದಿನಕ್ಕೆ ಕನಿಷ್ಠ 3–4 ಲೀಟರ್ ನೀರು ಕುಡಿಯಿರಿ. ಬೆವರು ಸುರಿಸುವುದು ಎಂದರೆ ಕೇವಲ ಕಷ್ಟಪಡುವುದಲ್ಲ, ಅದು ನಮ್ಮನ್ನು ನಾವೇ ಪ್ರೀತಿಸುವ ಒಂದು ರೀತಿ. ಪ್ರಕೃತಿ ನಮಗೆ ನೀಡಿದ ಈ "ಸ್ವಯಂ-ಶುದ್ಧೀಕರಣ" ಪ್ರಕ್ರಿಯೆಯನ್ನು ನಾವು ಗೌರವಿಸಬೇಕು. ಐಷಾರಾಮಿ ಜೀವನದ ಹೆಸರಿನಲ್ಲಿ ಎಸಿ ಕೋಣೆಗಳಲ್ಲಿ ಕುಳಿತು ನಮ್ಮ ದೇಹವನ್ನೇ ತುಕ್ಕು ಹಿಡಿಸುವುದು ಬುದ್ಧಿವಂತಿಕೆಯಲ್ಲ. ಬನ್ನಿ, ದಿನಕ್ಕೆ ಒಮ್ಮೆಯಾದರೂ ಮನಸಾರೆ ಬೆವರು ಸುರಿಸೋಣ. ಆ ಬೆವರಿನ ಹನಿಗಳಲ್ಲಿ ನಮ್ಮ ಆರೋಗ್ಯ ಮತ್ತು ಸುಂದರ ಭವಿಷ್ಯ ಅಡಗಿದೆ.


**ನೆನಪಿಡಿ: ಯಾವ ದೇಹದಲ್ಲಿ ಬೆವರು ಹರಿಯುವುದಿಲ್ಲವೋ, ಆ ದೇಹದಲ್ಲಿ ರೋಗಗಳು ಮನೆ ಮಾಡುತ್ತವೆ.**





| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

# "ಚೀನಾ ಕೋಟೆ ಭೇದಿಸಿದ ಇಂಡಿಯನ್ ಮಲ್ಲ"





| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುದ್ದಿ - 23

ತಂತ್ರಜ್ಞಾನ ಎಷ್ಟೇ ಬೆಳೆಯಲಿ, ಮನುಷ್ಯನ ದೈಹಿಕ ಸಾಮರ್ಥ್ಯ ಮತ್ತು ಮನೋಬಲಕ್ಕೆ ಸಾಟಿಯಿಲ್ಲ ಎಂಬುದನ್ನು ಉತ್ತರಾಖಂಡದ ಯುವ ಮಲ್ಲ ಅಂಗದ್ ಬಿಸ್ಟ್ ಸಾಬೀತುಪಡಿಸಿದ್ದಾರೆ.

ಇತ್ತೀಚೆಗೆ ಚೀನಾದಲ್ಲಿ ನಡೆದ ಪ್ರತಿಷ್ಠಿತ ರೋಡ್ ಟು ಯುಎಫ್‌ಸಿ ಮಿಶ್ರ ಸಮರ ಕಲೆ (ಎಂ ಎಂ ಎ) ಸ್ಪರ್ಧೆಯಲ್ಲಿ ಚೀನಾದ ಪ್ರಬಲ ಎದುರಾಳಿಯನ್ನು ಮಣಿಸಿ ಭಾರತದ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದಿದ್ದಾರೆ.

ರುದ್ರಪ್ರಯಾಗದ ಸಣ್ಣ ಹಳ್ಳಿಯಲ್ಲಿ ಜನಿಸಿದ ಅಂಗದ್ ಅವರ ಬದುಕಿನ ಪಯಣ ಸುಲಭವಾಗಿರಲಿಲ್ಲ. ಮನೆಯವರು ವೈದ್ಯರಾಗಬೇಕೆಂದು ಕನಸು ಕಂಡರೂ, ಸಮರಕಲೆಯ ಮೇಲಿನ ಆಸಕ್ತಿ ಅವರನ್ನು ಬೇರೆ ದಾರಿಯತ್ತ ಕರೆದೊಯ್ದಿತು.

ವೈದ್ಯಕೀಯ ಶಿಕ್ಷಣವನ್ನು ತೊರೆದು ದೆಹಲಿಗೆ ಬಂದ ಅವರು ಹಣದ ಕೊರತೆ, ಹಸಿವು ಮತ್ತು ಕಠಿಣ ಪರಿಸ್ಥಿತಿಗಳ ನಡುವೆಯೂ ನಿರಂತರ ಅಭ್ಯಾಸ ನಡೆಸಿದರು. ಅವರ ಪರಿಶ್ರಮವೇ ಇಂದು ಅವರನ್ನು ಅಂತರಾಷ್ಟ್ರೀಯ ಮಟ್ಟದ ಫೈಟರ್ ಆಗಿ ರೂಪಿಸಿದೆ.

ಚೀನಾದ ಮಣ್ಣಿನಲ್ಲಿ ಅಲ್ಲಿನ ಬೆಂಬಲ ಹೊಂದಿದ್ದ ಎದುರಾಳಿಯನ್ನು ಸೋಲಿಸುವುದು ಸಾಮಾನ್ಯ ಸಾಧನೆಯಲ್ಲ. ಇದು ಭಾರತೀಯ ಯುವಶಕ್ತಿಯ ಆತ್ಮವಿಶ್ವಾಸ ಮತ್ತು ದೃಢಸಂಕಲ್ಪದ ಪ್ರತೀಕವಾಗಿದೆ. ಅಂಗದ್ ಅವರ ಗೆಲುವು ಹಳ್ಳಿಯ ಯುವಕರಿಗೂ ಜಾಗತಿಕ ವೇದಿಕೆಯಲ್ಲಿ ಸಾಧನೆ ಮಾಡುವ ಶಕ್ತಿ ಇದೆ ಎಂಬ ವಿಶ್ವಾಸ ಮೂಡಿಸಿದೆ.

ಅಂಗದ್ ಬಿಸ್ಟ್ ಅವರ ಜೀವನಗಾಥೆ ನಮಗೆ ಒಂದು ಮಹತ್ವದ ಸಂದೇಶ ನೀಡುತ್ತದೆ ಸೌಲಭ್ಯಗಳಿಗಿಂತ ಸಂಕಲ್ಪವೇ ದೊಡ್ಡದು. ಸೋಲನ್ನು ಮೆಟ್ಟಿಲು ಮಾಡಿಕೊಂಡು ಮುನ್ನಡೆದರೆ ಜಗತ್ತಿನ ಯಾವುದೇ ಬಲವಾದ ಗೋಡೆಯನ್ನೂ ಭೇದಿಸಬಹುದು.

# ಭವ- ಭಾವ ರೋಗಗಳಿಗೆ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದ ಶರಣ ವೈದ್ಯ ಸಂಗಣ್ಣ



| ವೀಣಾ ಹೇಮಂತ್‌ಗೌಡ ಪಾಟೀಲ್

ಉಪೇಕ್ಷಿತ ವಚನಕಾರರು

ದೈಹಿಕ ಆರೋಗ್ಯದ ಚಿಕಿತ್ಸೆಯ ಜೊತೆ ಜೊತೆಗೆ ಮಾನಸಿಕ ಆರೋಗ್ಯದ ಕುಂದು ಕೊರತೆಗಳಿಗೆ ತನ್ನ ವಚನಗಳ ಮೂಲಕ ಚಿಕಿತ್ಸೆ ನೀಡುತ್ತಿದ್ದ ವೈದ್ಯ ಸಂಗಣ್ಣನವರು 12ನೇ ಶತಮಾನದ ವಚನಕಾರರಲ್ಲಿ ಒಬ್ಬರಾಗಿದ್ದು ಅನುಭವ ಮಂಟಪದ ಪ್ರಮುಖ ಶರಣ ರಾಗಿದ್ದರು. ವೈದ್ಯ ವೃತ್ತಿಯನ್ನು ಕಾಯಕವನ್ನಾಗಿ ಮಾಡಿಕೊಂಡ ಇವರ ವಚನದಲ್ಲಿ ವೈದ್ಯಕೀಯ ಪರಿಭಾಷೆಯು ಮೂಡಿಬಂದಿದೆ. ಆಧ್ಯಾತ್ಮಿಕ ಹಾಗೂ ತತ್ವಜ್ಞಾನದ ವಚನಗಳನ್ನು ತಮ್ಮ ವೈದ್ಯಕೀಯ ವಸ್ತು ವಿಷಯಗಳ ಮೇಲೆ ಇವರು ರಚಿಸಿದ್ದು ಇವರ ವಚನಗಳು 'ಮರುಳ ಶಂಕರ ಪ್ರಿಯ ಸಿದ್ಧರಾಮೇಶ್ವರ' ಎಂಬ ಅಂಕಿತವನ್ನು ಹೊಂದಿವೆ.


ತಮ್ಮ ವೃತ್ತಿಯನ್ನು ಸಂಪತ್ತಿಯನ್ನಾಗಿಸಿಕೊಳ್ಳುವ ಶರಣರ ಕೌಶಲ್ಯ ಅತ್ಯದ್ಭುತವಾಗಿದ್ದು ಶರೀರವನ್ನು ಮಾತ್ರವಲ್ಲದೆ ಮನಸ್ಸು ಮತ್ತು ಆತ್ಮಗಳಿಗೂ ಸಂಬಂಧವನ್ನು ಹೇಳಿದ ವೈದ್ಯ ಸಂಗಣ್ಣನವರ ನಿಲುವು ಅಚ್ಚರಿಯನ್ನು ಮೂಡಿಸುತ್ತದೆ.

ಭಕ್ತರಿಗೊಂದೇ ವಾಕ್ಯ ಬಾಳೆಗೊಂದೇ ಫಲ ಎಂಬ ಮಾತಿನಂತೆ ಅತ್ಯಂತ ಕಡಿಮೆ ಮಾತನಾಡುತ್ತಿದ್ದ ವೈದ್ಯ ಸಂಗಣ್ಣನವರು ತಮ್ಮ ಕಾಯಕವನ್ನು ಸತ್ಯ ಶುದ್ಧ ಮನಸ್ಕರಾಗಿ ಮಾಡುತ್ತಿದ್ದರು. ಕಾಯಕದಲ್ಲಿಯೇ ಆತ್ಮೋನ್ನತಿಯನ್ನು ಸಾಧಿಸಿದ ವೈದ್ಯ ಸಂಗಣ್ಣನವರು ಶರಣರಲ್ಲಿಯೇ ಆದರ್ಶಪ್ರಾಯರು.

ಬಹಿರಂಗದ ಖಾಯಿಲೆಗೆ ಔಷಧಿಯನ್ನು ಕೊಡುತ್ತಲೇ ಅಂತರಂಗದ ಅಜ್ಞಾನವನ್ನು ಹೋಗಲಾಡಿಸುವ ತಾತ್ವಿಕ ಸಂದೇಶಗಳನ್ನು ಇವರ ವಚನಗಳು ಹೊಂದಿದ್ದು ಇವರ ಒಟ್ಟು 21 ವಚನಗಳು ನಮಗೆ ಲಭ್ಯವಾಗಿವೆ. ಆ ವಚನಗಳಲ್ಲಿ ವೈದ್ಯಕೀಯ ಪರಿಭಾಷೆಯ ದೇಹದ ನಾಡಿ, ಅಷ್ಟೋತ್ತರ ವ್ಯಾಧಿಗಳು ನೂರು ವ್ಯಾಧಿಗಳ ಕುರಿತು ಮಾಹಿತಿಗಳಿವೆ. ಆಧ್ಯಾತ್ಮಿಕ ತತ್ವಗಳನ್ನು ಶಿವಯೋಗದ ಹಾಗೂ ಷಟ್ ಸ್ಥಲದ ಮಾರ್ಗದಲ್ಲಿ ಅವರು ವಿವರಿಸಿದ್ದಾರೆ

ಅರಿವಿಲ್ಲದ, ಜ್ಞಾನವಿಲ್ಲದ ಭಕ್ತಿಯು ಅಂಧನಿಗೆ ಹಚ್ಚುವ ಕಾಡಿಗೆಯಂತೆ ಎಂದು ಅವರು ತಮ್ಮ ವಚನದಲ್ಲಿ ಪ್ರತಿಪಾದಿಸಿದ್ದು ಎಲ್ಲಕ್ಕೂ ಮಿಗಿಲಾಗಿ ವ್ಯಕ್ತಿಯು ಅರಿವನ್ನು ಹೊಂದಿರಬೇಕು, ಜ್ಞಾನಿಯಾಗಿರಬೇಕು ಎಂಬುದನ್ನು ಒತ್ತಿ ಹೇಳಿದ್ದಾರೆ, ಮತ್ತೆ ಕೆಲವರು ತನಗೆ ಏನೂ ಗೊತ್ತಿಲ್ಲದಿದ್ದರೂ ಎಲ್ಲವೂ ಗೊತ್ತು ಎಂದು ಹೇಳುವುದು ಕೂಡ ಒಂದು ರೀತಿಯ ಮಾನಸಿಕ ಕಾಯಿಲೆ ಎಂದು ಅವರು ನುಡಿಯುತ್ತಾರೆ.

ನೂರಾರು ಕಾಯಿಲೆಗಳ ಆಗರವಾಗಿರುವ ನಮ್ಮ ದೇಹವನ್ನು ನಾವು ಕೈಗೊಳ್ಳುವ ಭಕ್ತಿ ಮತ್ತು ಜ್ಞಾನದ ಔಷಧಿಯಿಂದ ಗುಣಪಡಿಸಬೇಕು ಎಂದು ಅತ್ಯಂತ ಸ್ಪಷ್ಟವಾಗಿ ಅವರು ಹೇಳುತ್ತಾರೆ.




ವೈದ್ಯನೆಂದು ಮಾಡುವಲ್ಲಿ ಮೂಲಿಕೆ ವನ ದ್ರವ್ಯ ಸಹಿತವಾಗಿ ಲವಣ ಪಾಷಾಣ ಲೋಹ ಮತ್ತು ಪಂಚ ಸಿಂಧೂರಗಳಂತಹ ರಸ ದ್ರವ್ಯಗಳಿಂದ ಹಾಗೂ ಸಾರಂಗ ಗಳನ್ನು ಬಳಸಿ ಚಿಕಿತ್ಸೆ ಮಾಡಬೇಕು... ಅಂತೆಯೇ ಮೈ ಮನಗಳೆರಡನ್ನು ಎಚ್ಚರವಾಗಿಟ್ಟುಕೊಂಡು ಅವುಗಳ ಮೇಳವಿಕೆಯನ್ನು ಸುಸ್ಥಿರವಾಗಿಡಲು ಚಿಕಿತ್ಸೆಯನ್ನು ಮನಃಪೂರ್ವಕವಾಗಿ ಮಾಡುವ ವೈದ್ಯನ ಕ್ರಮ ಸರ್ವ ವಿಕಾರಗಳ ಭವವನ್ನು ಹರಿದ ತೆರನಾಗುತ್ತದೆ ಎಂದು ಅವರು ಹೇಳಿದ್ದಾರೆ

**ನಾನಾ ರೋಗ0ಗಳು ಬಂದು**
**ದೇಹವ ಹಿಡಿದಲ್ಲಿ**
**ಶಿವಾರ್ಚನೆಯ ಬೆರಕೊಳ್ಳಿ**
**ಸಕಲ ಪುಷ್ಪಗಳಿಂದ ಪೂಜೆಯ**
**ಮಾಡಿಕೊಳ್ಳಿ**
**ಪಂಚಾಕ್ಷರಿ ಪ್ರಣಮವ ತಪ್ಪದೇ**
**ತ್ರಿಸಂದಿಯಲ್ಲಿ ನೆನಹುಗೊಳ್ಳಿ**
**ಇವರಿಂದ ರುಜೆ ದರ್ಪಣಗಡಗು**
ಮರುಳ ಶಂಕರ ಪ್ರಿಯ
ಸಿದ್ಧರಾಮೇಶ್ವರ ಲಿಂಗ

ಪೂಜೆ ಜಪತಪಗಳಲ್ಲಿ ಪಾಲ್ಗೊಂಡು ಶಿವಾರ್ಚನೆಯಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಬೇಕು. ಪುಷ್ಪಗಳಿಂದ ಪೂಜೆಯನ್ನು ನೆರವೇರಿಸಿ 'ಶಿವಾಯ ನಮಃ। ಪಂಚಾಕ್ಷರಿ ಮಂತ್ರವನ್ನು ದಿನದ ಮೂರು ಹೊತ್ತು ಹೇಳಿಕೊಳ್ಳ ಬೇಕು. ಇದರಿಂದ ದೇಹಕ್ಕೆ ಅಂಟಿರುವ ಜಾಡ್ಯ ಹೊರಟುಹೋಗುತ್ತದೆ ಎಂದು ವೈದ್ಯ ಸಂಗಣ್ಣನವರು ಹೇಳುತ್ತಾರೆ.

ವೈದ್ಯ ಸಂಗಣ್ಣನವರ ಕಾಯಕ ಮತ್ತು ಲಿಂಗ ನಿಷ್ಠೆಯನ್ನು ಕಂಡು ಸಿದ್ದಯ್ಯ ಪುರಾಣಿಕರು ಅವರಿಗೆ ಮೈ ಮನಕ್ಕೆ ಮದ್ದನ್ನು ನೀಡುವ ವೈದ್ಯ ಎಂದು ಕರೆದಿದ್ದಾರೆ.

ಬೇನೆ ಬಂದಾಗ ಬಾಹ್ಯ ಚಿಕಿತ್ಸೆ ಮಾಡಿಸಿಕೊಳ್ಳಲೇಬೇಕೆಂದು ಆಗ ಸ್ನಾನ, ಉಪವಾಸಗಳನ್ನು ಮಾಡುವ ಮೂಲಕ ಪ್ರಾಣಕ್ಕೆ ಅಪಾಯ ತಂದುಕೊಳ್ಳಬಾರದು ಎಂದು ಎಚ್ಚರಿಸುವ ವೈದ್ಯ ಸಂಗಣ್ಣನವರು ಪಂಚ ತತ್ವಗಳಿಂದಾಗಿರುವ ನಮ್ಮ ದೇಹಕ್ಕೆ ರೋಗರುಜಿನಗಳು ಬರುವುದು ಸಹಜ. ಆ ಹೊತ್ತಿನಲ್ಲಿ ಅವರವರ ದೇಹದ ಸ್ಥಿತಿಗತಿಗಳನ್ನು ಅರಿತು ಚಿಕಿತ್ಸೆ ನೀಡುವುದು ಕ್ರಮ. ಭಕ್ತಿ,ನಿಷ್ಠೆ, ವಿಶ್ವಾಸ ದಂತಹ ಸದ್ಭಾವಗಳು ಮನುಷ್ಯನಲ್ಲಿ ನೆಲೆಗೊಳ್ಳಬೇಕು ತನುವಿಗೆ ಎಲ್ಲ ಬಗೆಯ ಉಪಚಾರವನ್ನು ಮಾಡಬೇಕು ಅಂದಾಗ ಮಾತ್ರ ಮನವು ಮಹದಲ್ಲಿ ನಿಲ್ಲುತ್ತದೆ ಎಂದು ಸಂಗಣ್ಣನವರು ಹೇಳುತ್ತಾರೆ

,ಪಿಂಡ ಪ್ರಾಣ ಆರೋಗ್ಯಂಗಳ ಚಿಕಿತ್ಸೆಯನರಿದು
ವೈದ್ಯವ ಮಾಡಬಲ್ಲವ ಪಂಡಿತನಪ್ಪ
ಕಟಿ ಅಂಗುಲಿ ಪಕ್ಕೆ ಕರ ಜಿಹ್ವೆ ಕಪೋಲ
ಊರ್ದ್ವನಾಳ

ಅಂದರೆ ಸೊಂಟ ಬೆರಳು ದೇಹದ ಎಡಬಲ ಪಕ್ಕೆಗಳು ಕೈಗಳು ನಾಲಿಗೆ ಕೆನ್ನೆ ಹಾಗೂ ಆಹಾರದ ನಾಳಗಳ ಕುರಿತಾದ ಅರಿವನ್ನು ಹೊಂದಿದ್ದು ಅವುಗಳ ಚಿಕಿತ್ಸೆಗೆ ಅನ್ನ ಔಷಧಿ ನೀರು ಮುಂತಾದ ವಿಷಯಗಳನ್ನು ಅರಿತು ಕಾಯಕದ ವೈದ್ಯನಾ ಮಾಡಬಲ್ಲವ ನಿಜವಾದ ವೈದ್ಯ ಎಂದು ಅವರು ಹೇಳುತ್ತಾರೆ.

ಅದೆಷ್ಟೇ ಶಾಸ್ತ್ರ ಜ್ಞಾನವಿದ್ದರೂ ಕೇವಲ ವೈದ್ಯಶಾಸ್ತ್ರದಿಂದ ವ್ಯಾಧಿ ಪರಿಹಾರವಾಗುತ್ತದೆ ಎಂಬುದನ್ನು ಅವರು ಒಪ್ಪುತ್ತಿರಲಿಲ್ಲ. ಸಕಾರಾತ್ಮಕ ವಿಚಾರಗಳು, ದೇವರ ಪೂಜೆ, ಒಳಿತನ್ನು ಮಾಡುವ ಗುಣ ಗಳ ಜೊತೆಗೆ ದೇವರ ಅನುಗ್ರಹವು ಕೂಡ ವ್ಯಾಧಿಯ ಉಪಶಮನಕ್ಕೆ ಕಾರಣ ಎಂಬುದನ್ನು ಅವರು ಒತ್ತಿ ಹೇಳಿದ್ದರು

ಮಾನಸಿಕ ಹಾಗೂ ದೈಹಿಕ ಕಾಯಿಲೆಗಳಿಗೆ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಉತ್ತರವನ್ನು ಹುಡುಕಿದ ಶರಣ ವೈದ್ಯ ಸಂಗಣ್ಣನವರಿಗೆ ನಮೋ ನಮಃ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,